# ಕುವೆಂಪು ವಿಶ್ವವಿದ್ಯಾಲಯ

# KUVEMPU UNIVERSITY

2015-16 ªÀÄvÀÄÛ 2016-17£ÉÃ DyðPÀ ªÀµÀðzÀ

¯ÉPÀÌ ¥Àj±ÉÆÃzsÀ£Á ªÀgÀ¢UÉ

# ಅನುಪಾಲನಾ ವರದಿ


**ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451**

**ಶಿವಮೊಗ್ಗ ಜಿಲ್ಲೆ, ಕರ್ನಾಟಕ**

**Jnanasahyadri, Shankaraghatta - 577 451**

**Shivamogga District. Karnataka State**

# ಕುವೆಂಪು ವಿಶ್ವವಿದ್ಯಾಲಯ

**ಕುವೆಂಪು ಶತಮಾನೋತ್ಸವ ಭವನ, ಜ್ಞಾನಸಹ್ಯಾದ್ರಿ, ಶಂಕರಘಟ್ಟ–577 451**

ಸಂಖ್ಯೆ:ಕುವಿ:ಕುಸ:ಆಶಾ: 600 :2019–20 ದಿನಾಂಕ:15–06–2019

ಗೆ:
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)
ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್. ಅಂಬೇಡ್ಕರ್ ವೀದಿ
ಬೆಂಗಳೂರು – 560 001.

ಮಾನ್ಯರೆ,

ವಿಷಯ: 2015–16 ಮತ್ತು 2016–17ನೇ ಸಾಲಿನ ಲೆಕ್ಕಪರಿಶೋಧನಾ ಅನುಪಾಲನಾ ವರದಿಯನ್ನು ಸಲ್ಲಿಸುತ್ತಿರುವ ಬಗ್ಗೆ.

* * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 2015–16 ಮತ್ತು 2016–17ನೇ ಸಾಲಿನ ಲೆಕ್ಕಪರಿಶೋಧನಾ ವರದಿಯ ಅನುಪಾಲನಾ ವರದಿಯನ್ನು ತಯಾರಿಸಿ, ಅದನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ವಿಶ್ವವಿದ್ಯಾನಿಲಯದಿಂದ ವಿವಿಧ ಪ್ರಾಧಿಕಾರಗಳ ಸಭೆಗಳಲ್ಲಿ ಮಂಡಿಸಿ, ಅನುಮೋದನೆ ಪಡೆದು ಸಲ್ಲಿಸಲು ವಿಳಂಬವಾಗಿರುತ್ತದೆ. ಕಾರಣ ಅಪರ ನಿರ್ದೇಶಕರು, ಬೆಂಗಳೂರು ಪ್ರಾಂತೀಯ ಕಛೇರಿ ತಂಡದವರು ಲೆಕ್ಕಪರಿಶೋಧನಾ ಕಾರ್ಯವನ್ನು ದಿನಾಂಕ:31-03–2018ರಂದು ಪೂರ್ಣಗೊಳಿಸಿ, ದಿನಾಂಕ:15-12–2018ರಂದು ಪುನರ್ ಪರಿಶೀಲನಾ ಸಮಿತಿ ಸಭೆಯಲ್ಲಿ ಚರ್ಚಿಸಿ, ದಿನಾಂಕ: 20–02–2019ರಂದು ವರದಿ ಸಲ್ಲಿಸಿರುತ್ತಾರೆ. ಸದರಿ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿಯನ್ನು ತಯಾರಿಸಿ, ಈ ಕೆಳಕಂಡ ಪ್ರಾಧಿಕಾರಗಳ ಸಭೆಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ. ಈ ಎಲ್ಲಾ ಆಡಳಿತಾತ್ಮಕ ಕಾರಣಗಳಿಂದ ವಿಳಂಬವಾದ ಕಾರಣ ವಿಳಂಬ ಮನ್ನಾ ಮಾಡಲು ಕೋರಿದೆ.

1) ಹಣಕಾಸು ಸಮಿತಿ ಸಭೆ : ದಿನಾಂಕ: 25–05–2019
2) ಸಿಂಡಿಕೇಟ್ ಸಭೆ : ದಿನಾಂಕ: 11–06–2019
3) ವಿದ್ಯಾವಿಷಯಕ ಪರಿಷತ್ತಿನ ಸಭೆ: ದಿನಾಂಕ: 10–06–2019

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

18/6/19

ಹಣಕಾಸು ಅಧಿಕಾರಿ.
**ಹಣಕಾಸು ಅಧಿಕಾರಿಗಳು,**
**ಕುವೆಂಪು ವಿಶ್ವವಿದ್ಯಾಲಯ**
**ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**

18/6/19

ಕುಲಸಚಿವ.
**ಕುಲಸಚಿವ**
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ, ಕರ್ನಾಟಕ.

# ದೃಢೀಕರಣ

2015–16 ಮತ್ತು 2016–17 ನೇ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವರದಿಗೆ ಸಿದ್ಧಪಡಿಸಿದ ಅನುಪಾಲನಾ ವರದಿಯನ್ನು ಈ ಕೆಳಕಂಡ ಸಭೆಗಳಲ್ಲಿ ಅನುಮೋದನೆ ಪಡೆಯಲಾಗಿದೆ ಎಂದು ದೃಢೀಕರಿಸಲಾಗಿದೆ.

| | | |
|---|---|---|
| 1. ಹಣಕಾಸು ಸಮಿತಿ | : | ದಿನಾಂಕ : 25–05–2019 |
| 2. ವಿದ್ಯಾವಿಷಯಕ ಪರಿಷತ್ | : | ದಿನಾಂಕ : 10–06–2019 |
| **3**. ಸಿಂಡಿಕೇಟ್ | : | ದಿನಾಂಕ : 11–06–2019 |

ಸಹಿ/–
ಕುಲಸಚಿವ

## ಕುವೆಂಪು ವಿಶ್ವವಿದ್ಯಾಲಯದ 2015–16 ಮತ್ತು 2016–17ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದ ಆಕ್ಷೇಪಣೆಗಳು ಹಾಗು ವಸೂಲಾತಿ ಪ್ರಕರಣಗಳ ತಃಖ್ತೆ

| ಕ್ರ. ಸಂ. | ಕಂಡಿಕೆ ಸಂಖ್ಯೆ | ಕಂಡಿಕೆ ವಿವರ | ಆಕ್ಷೇಪಣೆ ಮೊತ್ತ (ರೂ.) | ವಸೂಲಾತಿ ಮೊತ್ತ (ರೂ.) |
|---|---|---|---|---|
| 01 | 11 | ಅನುಮೋದಿತ ಆಯ–ವ್ಯಯಕ್ಕಿಂತ ಹೆಚ್ಚುವರಿ ವೆಚ್ಚ ಭರಿಸಿರುವುದು. | 29525679.00 | – |
| 02 | 13 | ಇಡುಗಂಟು ಮತ್ತು ನಿಗದಿತ ಭದ್ರತಾ ಠೇವಣಿ ವಿವರಗಳು. | 7814065.00 | 38000.00 |
| 03 | 14 | 1. ಕೆಳದಿ ಪ್ರಾಚ್ಯ ವಸ್ತುಸಂಗ್ರಹಾಲಯಕ್ಕೆ ವಿಶ್ವವಿದ್ಯಾಲಯದಿಂದ ವೆಚ್ಚಗಳನ್ನು ಭರಿಸಿರುವುದು. | 1089173.00 | – |
| | | 2. ಕೆಳದಿ ಪ್ರಾಚ್ಯ ವಸ್ತುಸಂಗ್ರಹಾಲಯದ ಸಿಬ್ಬಂದಿಗೆ ವೇತನ ಪಾವತಿಸಿರುವುದು. | 2073961.00 | 119848.00 |
| 04 | 15 | ಕಡೂರಿನಲ್ಲಿರುವ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಿಗೆ ಮಾಹೆಯಾನ ಸ್ಥಳೀಯ ಭತ್ಯೆ ಮತ್ತು ಗೌರವ ಸಂಭಾವನೆ ಪಾವತಿಸಿರುವುದು. | – | 54000.00 |
| 05 | 16 | ಶ್ರೀಮದ್ ರಂಭಾಪುರಿ ಪ್ರಥಮ ದರ್ಜೆ ಕಾಲೇಜು ಖಾತೆಯಲ್ಲಿ ವಿದ್ಯಾರ್ಥಿಗಳಿಗೆ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ದಿನಭತ್ಯೆ ನೀಡಿರುವುದು. | 38247.00 | – |
| | | **ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು** | – | – |
| 06 | 17 | 1. ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲರಿಗೆ ಸ್ಥಳೀಯ ಭತ್ಯೆ ಮತ್ತು ಗೌರವ ಸಂಭಾವನೆ ನೀಡಿರುವುದು. | – | 12000.00 |
| | | 2. ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ದರಪಟ್ಟಿಯಿಲ್ಲದೆ ಮತ್ತು ದರಪಟ್ಟಿ ದರಕ್ಕಿಂತ ಹೆಚ್ಚುವರಿಯಾಗಿ ಪಾವತಿಸಿರುವುದು. | 122231.00 | 14500.00 |
| | | **ಸಹ್ಯಾದ್ರಿ ವಿಜ್ಞಾನ ಕಾಲೇಜು** | – | – |
| 07 | 18 | 1. ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ವಿದ್ಯುತ್ ಬಿಲ್‌ಗಳಿಗೆ ಹೆಚ್ಚುವರಿಯಾಗಿ ಪಾವತಿಸಿರುವುದು. | – | 12213.00 |
| | | 2. ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ದೂರವಾಣಿ ಬಿಲ್‌ಗಳಿಗೆ ಹೆಚ್ಚುವರಿಯಾಗಿ ಪಾವತಿಸಿರುವುದು. | – | 1778.00 |
| | | 3. ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಿಗೆ ಸ್ಥಳೀಯ ಭತ್ಯೆ ಮತ್ತು ಗೌರವ ಸಂಭಾವನೆ ನೀಡಿರುವುದು. | – | 18000.00 |
| | | 4. ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಶ್ರೀ ಸುನಿಲ್. ಎಸ್.ವಿ., ಅಥಿತಿ ಉಪನ್ಯಾಸಕರು ಇವರಿಗೆ ಸಂಭಾವನೆ ನೀಡಿರುವುದು. | 5315.00 | – |
| 08 | 19 | ಗೃಹ ನಿರ್ಮಾಣ ಮುಂಗಡ. | – | 72152.00 |
| 09 | 20 | ದತ್ತಿನಿಧಿ ಖಾತೆಯಲ್ಲಿ ಗೋಲ್ಡ್ ಮೆಡಲ್/ ಸಿಲ್ವರ್ ಮೆಡಲ್‌ಗಳಿಗೆ ಪಾವತಿಸಿರುವುದು. | 1154234.00 | – |
| | | **ಪರೀಕ್ಷಾಂಗ ವಿಭಾಗ** | – | – |
| 10 | 21 | 1. ಪರೀಕ್ಷಾ ಖಾತೆಯಲ್ಲಿ ಬಿ.ಎಸ್ಸಿ.(ಐಟಿ) ಮತ್ತು ಎಂ.ಎಸ್ಸಿ.(ಐಟಿ) ಪರೀಕ್ಷೆಗಳಿಗೆ ಸಂಭಾವನೆ ಪಾವತಿಸಿರುವುದು. | 533595.00 | – |
| | | 2. ಎ.ಸಿ. ಹುಂಡಿಯಲ್ಲಿ ಪಡೆದ ಮೊತ್ತಕ್ಕೆ ಹಿಂದಿನ ಸಾಲುಗಳ ವೆಚ್ಚ ಭರಿಸಿರುವುದು. | 739075.00 | – |
| 11 | 22 | ಪ್ರಶ್ನೆಪತ್ರಿಕೆಗಳ ರಹಸ್ಯ ಮುದ್ರಣ ಕಾರ್ಯ. | 18426062.00 | – |
| 12 | 23 | ಪರೀಕ್ಷಾ ಕಾರ್ಯದಲ್ಲಿ ಕಾರ್ಯನಿರ್ವಹಿಸಿದ ಸಿಬ್ಬಂದಿಯವರಿಗೆ ನಿಯಮಬಾಹಿರವಾಗಿ ಲಾಡ್ಜಿಂಗ್ ಚಾರ್ಜಸ್ ಪಾವತಿಸಿರುವುದು. | – | 3465839.00 |
| 13 | 24 | ನಿಯಮಬಾಹಿರವಾಗಿ ಸ್ಥಳೀಯ ಭತ್ಯೆ (Conveyance Allowance) ಪಾವತಿಸಿರುವುದು | – | 1544536.00 |
| 14 | 25 | ವಿಶ್ವವಿದ್ಯಾಲಯದ ವಿವಿಧ ಖಾತೆಗಳಲ್ಲಿ ಅನಧಿಕೃತ ಗೌರವ ಧನ ಮತ್ತು ಪರೀಕ್ಷಾ ಸಂಭಾವನೆ ಪಾವತಿಸಿರುವುದು. | – | 10548865.00 |
| | | **ವಿದ್ಯಾರ್ಥಿ ಬೆಂಬಲ ಸೇವೆಗಳು** | – | – |
| 15 | 26 | ಸಹ್ಯಾದ್ರಿ ಉತ್ಸವ–2015ರ ಎನ್.ಡಿ.ಸಿ. ಹುಂಡಿಯ ನ್ಯೂನತೆಗಳು. | 466900.00 | – |

| | | | | |
|---|---|---|---|---|
| | | **ದೂರಶಿಕ್ಷಣ ನಿರ್ದೇಶನಾಲಯ** | – | – |
| 16 | 27 | ದೂರಶಿಕ್ಷಣ ನಿರ್ದೇಶನಾಲಯ ಡಿ.ಸಿ.ಬಿ. ವಹಿ. | 6431369.00 | 4121043.00 |
| 17 | 28 | ದೂರಶಿಕ್ಷಣ ನಿರ್ದೇಶನಾಲಯದ ಅಧ್ಯಯನ ಸಾಮಗ್ರಿ ಮುದ್ರಣ ಮತ್ತು ಸರಬರಾಜಿಗೆ ಸಂಬಂಧಪಟ್ಟ ನ್ಯೂನತೆ. | 28085896.00 | – |
| | | **ಯು.ಜಿ.ಸಿ. ಖಾತೆ** | – | – |
| 18 | 29 | 1. ಯು.ಜಿ.ಸಿ. ಖಾತೆಯಲ್ಲಿ ಶ್ರೀ ಪರಶುರಾಮಪ್ಪ. ಹೆಚ್.ಜಿ., ಕಿರಿಯ ಸಂಶೋಧನಾರ್ಥಿ, ಕನ್ನಡ ವಿಭಾಗ ಇವರ ಮುಂಗಡ ಶಿಷ್ಯವೇತನ ಪಾವತಿಸಿರುವುದು. ರೂ. (ವಸೂಲಾತಿ) | – | 330000.00 |
| | | 2. Chronatography-580 ಉಪಕರಣ ಖರೀದಿಸಿರುವುದು. | 2099950.00 | – |
| | | 3. Refrigerated Table Top Centrifuge ಉಪಕರಣವನ್ನು ಖರೀದಿಸಿರುವುದು. | 803040.00 | – |
| 19 | 30 | ವಿವಿಧ ವಿಭಾಗಗಳಿಗೆ ಉಪಯೋಗಿಸುವ ಕೆಮಿಕಲ್ಸ್ ಅಂಡ್ ಗ್ಲಾಸ್‌ವೇರ್ಸ್/ ಉಪಕರಣಗಳನ್ನು ಖರೀದಿಸಿರುವುದು. | 2772971.00 | – |
| 20 | 31 | ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಲೇಖನ ಸಾಮಗ್ರಿಗಳನ್ನು ಖರೀದಿಸಿರುವುದು. | 7470511.00 | – |
| 21 | 32 | ವಿಶ್ವವಿದ್ಯಾಲಯದ ವಿವಿಧ ಖಾತೆಗಳಿಂದ (ಜ್ಞಾನಸಹ್ಯಾದ್ರಿ ಖಾತೆ ಹೊರತುಪಡಿಸಿ) ಹೊರಗುತ್ತಿಗೆ ನೌಕರರ ಹಾಗೂ ಭದ್ರತಾ ಸಿಬ್ಬಂದಿಯವರ ಸೇವೆಗೆ ಸಂಸ್ಥೆಗಳಿಗೆ ಮೊತ್ತವನ್ನು ಪಾವತಿಸಿರುವುದು. | – | 116374.00 |
| | | **ಕೆ.ಟಿ.ಪಿ.ಪಿ. ಕಾಯ್ದೆ, 1999 ಮತ್ತು ನಿಯಮ, 2000 ಗಳನ್ನು ಉಲ್ಲಂಘಿಸಿರುವುದು.** | – | – |
| 22 | 33 | 1. ಯು.ಜಿ.ಸಿ. ಖಾತೆಯಲ್ಲಿ ಮೆ: ಜೈನ್ ಸ್ಪೋರ್ಟ್ಸ್ ಅಂಡ್ ಸೈಂಟಿಫಿಕ್ ಇವರಿಗೆ ಕೆಮಿಕಲ್ಸ್, ಗ್ಲಾಸ್‌ವೇರ್ಸ್ ಮತ್ತು ಇತರ ವಸ್ತುಗಳ ಖರೀದಿಯನ್ನು ಡಿ.ಸಿ. ಹುಂಡಿಯ ಮೂಲಕ ಪಾವತಿಸಿರುವುದು. | 1718410.00 | – |
| | | 2. ವಾರ್ಷಿಕ ರೂ.1,00,000–00ಕ್ಕೂ ಮೇಲ್ಪಟ್ಟು ಖರೀದಿಸಿರುವುದು. | 153339.00 | – |
| | | 3. ಪರೀಕ್ಷಾ ಖಾತೆಯಲ್ಲಿ ಲ್ಯಾಮಿನೇಷನ್ ರೋಲ್ ಖರೀದಿಸಿರುವುದು. | 4652996.00 | – |
| | | 4. ದರಪಟ್ಟಿ ಇಲ್ಲದೆ ಪಾವತಿಸಿದ ಮೊತ್ತ. | 178205.00 | – |
| 23 | 34 | ಎ.ಸಿ. ಬಿಲ್‌ಗಳ ಮೂಲಕ ಮುಂಗಡವಾಗಿ ಪಡೆದ ಮೊತ್ತಗಳಿಗೆ ಲೆಕ್ಕ ಹೊಂದಾಣಿಕೆಗೆ ಸಲ್ಲಿಸಲಾದ ಎನ್.ಡಿ.ಸಿ. ಬಿಲ್‌ಗಳ ನ್ಯೂನತೆಗಳು. | 16083700.00 | – |
| | | **ಯೋಜನೆ ಖಾತೆ – 2015–16** | – | – |
| 24 | 35 | ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಕಡಿಮೆ ಕಟಾಯಿಸಿರುವುದು | – | 5412.00 |
| 25 | 36 | ಕಾಮಗಾರಿಗೆ ಟೆಂಡರ್ ಕರೆಯದೆ ಹಾಗೂ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್‌ರವರಿಂದ ತಾಂತ್ರಿಕ ಅನುಮೋದನೆ ಪಡೆಯದಿರುವುದು. | 2093083.00 | – |
| 26 | 37 | ವೋಚರ್ಸ್‌ಗಳನ್ನು ಹಾಜರುಪಡಿಸದಿರುವುದು. | 460010.00 | – |
| 27 | 38 | ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತಕ್ಕಿಂತ ಹೆಚ್ಚುವರಿ ಮೊತ್ತವನ್ನು ಪಾವತಿಸಿರುವುದು. | – | 38616.00 |
| | | **ಕಾಮಗಾರಿ ವಿಭಾಗ – 2016–17** | – | – |
| 28 | 39 | 2016–17ನೇ ಸಾಲಿನಲ್ಲಿ ಪಾವತಿಸಲಾದ ಕಾಮಗಾರಿಯ ಅಂತಿಮ ಬಿಲ್ಲುಗಳಲ್ಲಿ ಗರಿಷ್ಠ ಪ್ರಮಾಣದ ಟೆಂಡರ್ ಪ್ರೀಮಿಯಂಗಿಂತ ಹೆಚ್ಚುವರಿ ಟೆಂಡರ್ ಪ್ರೀಮಿಯಂ ನೀಡಿ ಪಾವತಿಸಲಾದ ಮೊತ್ತ | 13603569.00 | – |
| 30 | 41 | ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ನೇರವಾಗಿ ಪೂರಕ ಕರಾರು ಒಪ್ಪಂದ ಮೂಲಕ ವಹಿಸಿರುವ ಕಾಮಗಾರಿಗಳ ಮೊತ್ತ | 22174146.00 | – |
| | | **ಒಟ್ಟು ಮೊತ್ತ ರೂ.** | **170769732.00** | **20513176.00** |

# ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ

## 2015–16 ಮತ್ತು 2016–17ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ

**ಪೀಠಿಕೆ:**

ಕುವೆಂಪು ವಿಶ್ವವಿದ್ಯಾಲಯವು ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲೂಕಿನ ಶಂಕರಘಟ್ಟ ಕ್ಯಾಂಪಸ್‌ನಲ್ಲಿ 1987ರ ವರ್ಷದಲ್ಲಿ ಸ್ಥಾಪನೆಗೊಂದು ಅಸ್ತಿತ್ವಕ್ಕೆ ಬಂದಿರುತ್ತದೆ. ಪ್ರಸ್ತುತ ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳ ಉನ್ನತ ಶಿಕ್ಷಣದ ವ್ಯಾಪ್ತಿಯನ್ನು ಹೊಂದಿದೆ. ವಿಶ್ವವಿದ್ಯಾಲಯವು ಕಲೆ, ವಿಜ್ಞಾನ, ವಾಣಿಜ್ಯ, ಶಿಕ್ಷಣ ಮತ್ತು ಕಾನೂನು ಅಧ್ಯಯನಗಳಿಗೆ ಸಂಬಂಧಿಸಿದಂತೆ ಸುಮಾರು ನಲವತ್ತು ಸ್ನಾತಕೋತ್ತರ ವಿಭಾಗಗಳ ಮೂಲಕ ಶಿಕ್ಷಣ ನೀಡುತ್ತಿದೆ. ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಮತ್ತು ಶ್ರೀಮದ್ ರಂಭಾಪುರಿ ಪ್ರಥಮ ದರ್ಜೆ ಕಾಲೇಜು, ಶಂಕರಘಟ್ಟ ಈ ಮೂರು ಕಾಲೇಜುಗಳೂ ಸಹ ವಿಶ್ವವಿದ್ಯಾಲಯದ ನೇರ ಆಡಳಿತಕ್ಕೊಳಪಟ್ಟಿವೆ. ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯ ಸುಮಾರು 90 ಪದವಿ ಕಾಲೇಜುಗಳು ಕುವೆಂಪು ವಿಶ್ವವಿದ್ಯಾಲಯಕ್ಕೆ ಸಂಯೋಜನೆ ಹೊಂದಿರುತ್ತವೆ.

ಕುವೆಂಪು ವಿಶ್ವವಿದ್ಯಾಲಯವು ಇತ್ತೀಚಿನ ರಾಷ್ಟ್ರೀಯ ವಿಶ್ವವಿದ್ಯಾಲಯಗಳ ರ್‍ಯಾಂಕಿಂಗ್ (National Institutional Ranking Framework) ನಲ್ಲಿ ಭಾರತಕ್ಕೆ 78ನೇ ಸ್ಥಾನ ಪಡೆದ ಕರ್ನಾಟಕದ ಏಕೈಕ ವಿಶ್ವವಿದ್ಯಾಲಯವಾಗಿದ್ದು ಶ್ಲಾಘನೀಯ.

ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 2000ದಲ್ಲಿನ ನಿಯಮಗಳ ಅನುಸಾರ ಮತ್ತು ಕರ್ನಾಟಕ ರಾಜ್ಯ ಸರ್ಕಾರದ ಕರ್ನಾಟಕ ನಾಗರೀಕ ಸೇವಾ ನಿಯಮ 1958, ಕರ್ನಾಟಕ ಆರ್ಥಿಕ ಸಂಹಿತೆ 1958, ಸಾದಿಲ್ವಾರು ವೆಚ್ಚಗಳ ಕೈಪಿಡಿ 1958, ಕರ್ನಾಟಕ ಮೆಡಿಕಲ್ ಅಟೆಂಡನ್ಸ್ ರೂಲ್ಸ್ 1963, ಕರ್ನಾಟಕ ಲೋಕೋಪಯೋಗಿ ಇಲಾಖೆ ಹಾಗೂ ಲೆಕ್ಕಪತ್ರ ಸಂಹಿತೆ (P.W. A & D Code), ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ನಿಯಮ 2000 ಹಾಗೂ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ನಿಯಮಗಳು 2003 ಹಾಗೂ ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗೆ ಬದ್ಧವಾಗಿ ಕುವೆಂಪು ವಿಶ್ವವಿದ್ಯಾಲಯವು ಆಡಳಿತ ನಿರ್ವಹಿಸುತ್ತಿದೆ.

ಕುವೆಂಪು ವಿಶ್ವವಿದ್ಯಾಲಯದ 2015–16 ಮತ್ತು 2016–17ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ, 2000 – ಸೆಕ್ಷನ್ 47(3)ರ ಅನುಸಾರ ಕೈಗೊಳ್ಳಲಾಗಿದೆ. **2015–16 ಮತ್ತು 2016–17ನೇ ಸಾಲಿನ ಜ್ಞಾನಸಹ್ಯಾದ್ರಿ ಖಾತೆ, ಪಿಂಚಣಿ ಖಾತೆ ಮತ್ತು 2016–17ನೇ ಸಾಲಿನ ಯೋಜನೆ ಖಾತೆಯನ್ನು ಹೊರತುಪಡಿಸಿ, ಪರಿಶೀಲನೆಯಲ್ಲಿ ಕಂಡುಬಂದಿರುವ ನ್ಯೂನತೆಗಳನ್ನು ಕಂಡಿಕೆವಾರು ಈ ವರದಿಯಲ್ಲಿ ತರಲಾಗಿದೆ.**

## ವಿಶ್ವವಿದ್ಯಾಲಯದ ಆಡಳಿತ ವರ್ಗ:

| | | |
|---|---|---|
| ಕುಲಪತಿಗಳು | : | ಪ್ರೊ. ಟಿ.ಆರ್. ಮಂಜುನಾಥ್ (ಪ್ರಭಾರ)<br>ದಿನಾಂಕ: 01–04–2015 ರಿಂದ 28–04–2015 |
| | : | ಪ್ರೊ. ಜೆ. ಮಾದೇಗೌಡ (ಪ್ರಭಾರ)<br>ದಿನಾಂಕ: 29–04–2015 ರಿಂದ 16–06–2015<br>ಪ್ರೊ. ಜೋಗನ್ ಶಂಕರ್<br>ದಿನಾಂಕ: 17–06–2015 ರಿಂದ 31–03–2017 |
| ಕುಲಸಚಿವರು | : | ಪ್ರೊ. ಮಲ್ಲಿಕಾ ಎಸ್. ಘಂಟಿ<br>ದಿನಾಂಕ: 01–04–2015 ರಿಂದ 08–09–2015<br>ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್<br>ದಿನಾಂಕ: 08–09–2015 ರಿಂದ 29–09–2015<br>ಪ್ರೊ. ಜೆ. ಸೋಮಶೇಖರ್<br>ದಿನಾಂಕ: 30–09–2015 ರಿಂದ 04–01–2017<br>ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್<br>ದಿನಾಂಕ:05–01–2017 ರಿಂದ |
| ಕುಲಸಚಿವರು (ಪರೀಕ್ಷಾಂಗ) | : | ಪ್ರೊ. ಹೆಚ್.ಎಸ್. ಭೋಜ್ಯಾನಾಯ್ಕ್<br>ದಿನಾಂಕ: 01–04–2015 ರಿಂದ 04–12–2015<br>ಪ್ರೊ. ಸಿ.ಎಂ. ತ್ಯಾಗರಾಜ<br>ದಿನಾಂಕ: 04–12–2015 ರಿಂದ 09–01–2017<br>ಪ್ರೊ. ರಾಜಾ ನಾಯಕ್<br>ದಿನಾಂಕ: 10–01–2017 ರಿಂದ 31–03–2017 |
| ಹಣಕಾಸು ಅಧಿಕಾರಿಗಳು | : | ಪ್ರೊ. ಜೆ. ಕೇಶವಯ್ಯ<br>ದಿನಾಂಕ: 12–06–2014 ರಿಂದ 26–11–2015 |
| | : | ಪ್ರೊ. ಎಂ.ಬಿ. ಶಿವಣ್ಣ<br>ದಿನಾಂಕ: 27–11–2015 ರಿಂದ 17–01–2017<br>ಪ್ರೊ. ಆರ್. ಹಿರೇಮಣಿ ನಾಯ್ಕ್<br>ದಿನಾಂಕ: 18–01–2017 ರಿಂದ 31–03–2017 |
| ಗ್ರಂಥಪಾಲಕರು | : | ಡಾ. ಆರ್.ಹೆಚ್. ವಾಲ್ಮೀಕಿ<br>ದಿನಾಂಕ:01–04–2015 ರಿಂದ |
| ಕಾರ್ಯಪಾಲಕ ಇಂಜಿನಿಯರ್ | : | ಶ್ರೀ ಎಂ. ಮಹೇಶ್ವರಪ್ಪ (ಪ್ರಭಾರ)<br>ದಿನಾಂಕ: 01–04–2015 ರಿಂದ 30–05–2015<br>ಶ್ರೀ ಟಿ. ಸೀತಾರಾಮ (ಪ್ರಭಾರ)<br>ದಿನಾಂಕ: 09–06–2015 ರಿಂದ 10–01–2016<br>ಶ್ರೀ ಶಿವಕುಮಾರ ಹಂಪಾಳಿ (ಪ್ರಭಾರ)<br>ದಿನಾಂಕ: 11–01–2016 ರಿಂದ 31–03–2017 |

## ಲೆಕ್ಕಪರಿಶೋಧನಾ ಅವಧಿ ಹಾಗೂ ತಂಡದ ವಿವರ

| | | |
|---|---|---|
| ಲೆಕ್ಕಪರಿಶೋಧನಾ ಅವಧಿ | : | 01–04–2015 ರಿಂದ 31–03–2017<br>(2015–16 ಮತ್ತು 2016–17) |
| ಲೆಕ್ಕಪರಿಶೋಧನಾ ತಂಡ | : | ಪರೀಕ್ಷಾರ್ಥ ಲೆಕ್ಕಪರಿಶೋಧನಾಧಿಕಾರಿಗಳು<br><br>1) ಶ್ರೀ ಶ್ರೀಕಾಂತ. ಕೆ.ಎಸ್.<br>2) ಶ್ರೀ ನರೇಂದ್ರ ಕುಮಾರ್. ಹೆಚ್.ಇ.<br>3) ಕು. ಅಕ್ಷತ. ಎಂ.<br>4) ಶ್ರೀ ರುದ್ರಪ್ಪ ಅಕ್ಕಿ<br>5) ಶ್ರೀ ಲೋಹಿತ್. ಎಂ.ಪಿ.<br><br><u>ಕಾಮಗಾರಿ ವಿಭಾಗ</u><br><br>1) ಶ್ರೀ ಶಂಕರಶರ್ಮ, ಲೆಕ್ಕಪರಿಶೋಧನಾಧಿಕಾರಿ<br>2) ಶ್ರೀ ರಾಜ್‌ಕುಮಾರ್ ಆರ್.ದಳವಾಯಿ, ಲೆಕ್ಕಾಧೀಕ್ಷಕರು |
| ಪ್ರಾರಂಭ ದಿನಾಂಕ | : | 03.04.2018 |
| ಮುಕ್ತಾಯ ದಿನಾಂಕ | : | 31–08–2018<br>(ದಿನಾಂಕ:09–06–2018 ರಿಂದ 31–07–2018ರವರೆಗೆ ಹೊರತುಪಡಿಸಿ) |
| ತೆಗೆದುಕೊಂಡ ಮಾನವ ದಿನಗಳು | : | 388 |
| ಮಾರ್ಗದರ್ಶಕರು | : | ಶ್ರೀ ಹೆಚ್.ಎಸ್. ಚುಂಚೇಗೌಡ, ಕೆ.ಎಸ್.ಎ.ಎಸ್.<br>ಜಂಟಿ ನಿರ್ದೇಶಕರು<br>ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ<br>ಶಿವಮೊಗ್ಗ |
| ಲೆಕ್ಕಪರಿಶೋಧನಾ ವರದಿಯ ಪುನರ್ ಪರಿಶೀಲನಾಧಿಕಾರಿಗಳು | : | ಶ್ರೀ ಎನ್.ಬಿ. ಶಿವರುದ್ರಪ್ಪ, ಕೆ.ಎಸ್.ಎ.ಎಸ್.<br>ಅಪರ ನಿರ್ದೇಶಕರು<br>ಬೆಂಗಳೂರು ಪ್ರಾಂತೀಯ ಕಛೇರಿ<br>ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ |
| ಪುನರ್ ಪರಿಶೀಲನೆ ನಡೆಸಿದ ದಿನಾಂಕ | : | 15–12–2018 |

# <u>ಭಾಗ–1</u>

## ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಗಳಿಗೆ ತೆಗೆದುಕೊಂಡ ಕ್ರಮ

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 – ಪ್ರಕರಣ–(4)ರಂತೆ ಕುವೆಂಪು ವಿಶ್ವವಿದ್ಯಾಲಯದ ವತಿಯಿಂದ ಪರಿಶೋಧಿಸಿದ ಲೆಕ್ಕಪತ್ರಗಳನ್ನು ವಿದ್ಯಾವಿಷಯಕ ಪರಿಷತ್ತಿನ ಮುಂದೆ ಮತ್ತು ಸಿಂಡಿಕೇಟಿನ ಮುಂದೆ ಮಂಡಿಸತಕ್ಕದ್ದು ಹಾಗೂ ತದನಂತರ ಪ್ರತಿ ವರ್ಷ ಸೆಪ್ಟೆಂಬರ್ ಅಂತ್ಯಕ್ಕೆ ಆಕ್ಷೇಪಣೆಗಳೊಡನೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

ಕುವೆಂಪು ವಿಶ್ವವಿದ್ಯಾಲಯದ 1987–88 ರಿಂದ 2013–14ರವರೆವಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 – ಪ್ರಕರಣ (4)ರಂತೆ ಲೆಕ್ಕಪರಿಶೋಧನೆಯಲ್ಲಿ ಗುರುತಿಸಿರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ತೀರುವಳಿಗೆ ಯಾವುದೇ ಕ್ರಮ ಜರುಗಿಸದಿರುವುದು ದಾಖಲೆಗಳ ಪರಿಶೀಲನೆಯಲ್ಲಿ ಕಂಡುಬಂದಿದೆ. 1987–88 ರಿಂದ 2014–15ರವರೆಗೆ 28 ಲೆಕ್ಕಪರಿಶೋಧನಾ ವರದಿಗಳನ್ನು ಜಾರಿ ಮಾಡಲಾಗಿದ್ದು, 2014–15ನೇ ಸಾಲಿನ ಅಂತ್ಯಕ್ಕೆ ರೂ.175,63,77,104–00 ಆಕ್ಷೇಪಣೆಯಲ್ಲಿರುತ್ತದೆ ಮತ್ತು ರೂ.14,99,98,937–00ಗಳು ವಸೂಲಾತಿಯಾಗದೆ ಬಾಕಿಯಿರುತ್ತದೆ.

# ಕುವೆಂಪು ವಿಶ್ವವಿದ್ಯಾಲಯದ 2015–16 ಮತ್ತು 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಹಾಗೂ ಪ್ರಮುಖ ವಿಭಾಗಗಳ ಹಣಕಾಸು ವಹಿವಾಟುಗಳ ಲೆಕ್ಕಪರಿಶೋಧನಾ ವರದಿ

## 01. ವಿಶ್ವವಿದ್ಯಾಲಯದ ಲೆಕ್ಕಪತ್ರಗಳು.

ಕರ್ನಾಟಕ ಆರ್ಥಿಕ ಸಂಹಿತೆ 1958ರಲ್ಲಿಯ ಅನುಚ್ಛೇದ 3, 328 ರಿಂದ 331ಗಳಲ್ಲಿ ವಿವರಿಸಿರುವಂತೆ ಸಾಮಾನ್ಯ ನಗದು ಪುಸ್ತಕ ನಿರ್ವಹಿಸಿ ಲೆಕ್ಕಪತ್ರಗಳಿಗೆ ಸಂಬಂಧಿಸಿದ ಎಲ್ಲಾ ರೀತಿಯ ನಗದು ಮತ್ತು ಬ್ಯಾಂಕ್ ವಹಿವಾಟುಗಳ ವಿವರಗಳನ್ನು ಅದರಲ್ಲಿ ದಾಖಲಿಸಿ ದೃಢೀಕರಿಸುವುದು ಮತ್ತು ಪರಿಪೂರ್ಣ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಒಪ್ಪಿಸುವುದು ಹಣ ಪಡೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ. ಕುವೆಂಪು ವಿಶ್ವವಿದ್ಯಾಲಯವು ಹಣಕಾಸು ವ್ಯವಹಾರಗಳನ್ನು ನಿಧಿಯಾಧಾರಿತ ಲೆಕ್ಕಪತ್ರ ಪದ್ಧತಿಯ ಆಧಾರದ ಮೇಲೆ ನಿರ್ವಹಿಸುತ್ತಿದ್ದು, ಪ್ರತಿ ಬ್ಯಾಂಕ್ ಖಾತೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ನಗದು ವಹಿಯನ್ನು ನಿರ್ವಹಿಸಿಡಬೇಕಾದ ಅಗತ್ಯತೆಯನ್ನು ವಿಶ್ವವಿದ್ಯಾಲಯವು ಅಳವಡಿಸಿಕೊಳ್ಳಬೇಕಿರುವ COMMON FINANCE AND ACCOUNTING RULES ನಿಯಮ 3.8(1) (a)ರಲ್ಲಿ ಮತ್ತು FBAS Accounting Manual ಅಧ್ಯಾಯ 8ರಲ್ಲಿ ಸ್ಪಷ್ಟಪಡಿಸಿರುವಂತೆ ಲೆಕ್ಕಪರಿಶೋಧನೆಗೆ ಸಲ್ಲಿಸಿರುವ ಸ್ವೀಕೃತಿ ಮತ್ತು ಪಾವತಿಯ ಅಂಕಿ–ಅಂಶಗಳನ್ನೊಳಗೊಂಡ ಪುಸ್ತಕಗಳನ್ನು FBAS Accounting Manual ನ ಅಧ್ಯಾಯ 2ರ ಪ್ರಕಾರ ಎಲ್ಲಾ ಬ್ಯಾಂಕ್ ಮತ್ತು ನಗದು ವ್ಯವಹಾರಗಳನ್ನು ಬ್ಯಾಂಕ್ ಪುಸ್ತಕ ಹಾಗೂ ನಗದು ಪುಸ್ತಕಗಳಲ್ಲಿ ನಿರ್ವಹಿಸತಕ್ಕದ್ದಾಗಿದೆ. ಲೆಕ್ಕಪರಿಶೋಧನೆಗೆ ಸಲ್ಲಿಸಿರುವ ಆದಾಯ ಮತ್ತು ವೆಚ್ಚಗಳ ಅಂಕಿ ಅಂಶಗಳಿಗೆ ಪೂರಕವಾಗಿ ಬ್ಯಾಂಕ್ ಖಾತೆವಾರು ನಗದು ವಹಿಯನ್ನು ನಿರ್ವಹಿಸಿರುವುದಿಲ್ಲ. ಮುಂದುವರೆದು,

1. 2015–16ನೇ ಸಾಲಿನ ಲೆಕ್ಕಪತ್ರಗಳನ್ನು ದಿನಾಂಕ:11–05–2017ರಂದು ಹಾಗೂ 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ: ರಂದು ಕಛೇರಿಗೆ ಸಲ್ಲಿಸಿರುತ್ತಾರೆ.
2. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 – ಪ್ರಕರಣ–46(2)ರ ಪ್ರಕಾರ ಪ್ರತಿ ಬ್ಯಾಂಕ್ ಖಾತೆಯನ್ನು ಸಿಂಡಿಕೇಟ್ ಅನುಮೋದನೆಯೊಂದಿಗೆ ತೆರೆಯಬೇಕಾಗಿದ್ದು, ಬ್ಯಾಂಕ್ ಖಾತೆ ತೆರೆಯುವ ಪೂರ್ವ ಹಣಕಾಸು ಸಮಿತಿ ಮತ್ತು ಸಿಂಡಿಕೇಟ್ ಅನುಮೋದನೆ ಪಡೆದಿರುವ ವಿವರವನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.
3. ಸಮಗ್ರ ಆರ್ಥಿಕ ಪರಿಸ್ಥಿತಿಯ ವಿವರಣೆಯಂತೆ ನಗದು ಮತ್ತು ಬ್ಯಾಂಕ್ ಬಾಕಿ (Bank Balance) ಗಳಡಿ, 35 ಬ್ಯಾಂಕ್ ಖಾತೆಗಳ ವಿವರ ತೋರಿಸಿದ್ದು, ಲೆಕ್ಕಪರಿಶೋಧನೆಗೆ ಒದಗಿಸಿರುವ Bank Pass Sheet ಗಳ ಮಾಹಿತಿ ಮಾತ್ರ ಲಭ್ಯವಿರುತ್ತದೆ. 2015–16 ಮತ್ತು 2016–17ನೇ ಸಾಲಿನಲ್ಲಿ 35 ಬ್ಯಾಂಕ್ ಖಾತೆ ಮಾತ್ರ ಚಾಲ್ತಿಯಲ್ಲಿದ್ದು, ಆರ್ಥಿಕ ಪರಿಸ್ಥಿತಿ ವಿವರಗಳನ್ನು **ಅನುಬಂಧ–2 ಮತ್ತು 2ಎ**ರಲ್ಲಿ ಲಗತ್ತಿಸಿದೆ.
4. ಕರ್ನಾಟಕ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000 ರ ಸೆಕ್ಷನ್ 47 ರಲ್ಲಿ ವಿವರಿಸಿದಂತೆ ಪ್ರತಿ ವರ್ಷವು ವಾರ್ಷಿಕ ಲೆಕ್ಕಪತ್ರಗಳನ್ನು ಸಿಂಡಿಕೇಟ್ ಮಾರ್ಗದರ್ಶನದಲ್ಲಿ ತಯಾರಿಸಬೇಕಾಗುತ್ತದೆ. ನಂತರ ಲೆಕ್ಕಪತ್ರಗಳು ವಿದ್ಯಾವಿಷಯಕ ಪರಿಷತ್‌ನಲ್ಲಿ ಅನುಮೋದನೆ ಪಡೆಯಬೇಕು. ವಾರ್ಷಿಕ ಲೆಕ್ಕಪತ್ರಗಳು ಸಾಮಾನ್ಯವಾಗಿ ಈ ಘಟಕಗಳನ್ನೊಳಗೊಂಡಿದೆ.

   1) Balance Sheet
   2) Income and Expenditure Account
   3) Schedules to the above Financial Statement
   4) Disclousure of Significant Accounting
   5) Statement of Receipts and Payments
   6) Disclousure of other information through Notes of Accounts

ಆರ್ಥಿಕ ಲೆಕ್ಕಪತ್ರಗಳ ಪ್ರತಿಯೊಂದು ಘಟಕಗಳಿಗೆ ಈ ವರ್ಷದ ಆರ್ಥಿಕ ವಿವರದೊಂದಿಗೆ ಹಿಂದಿನ ವರ್ಷದ ಅರ್ಥಿಕ ವಿವರಣೆಯಿರುವುದು ಅಗತ್ಯವಾಗಿದೆ. ಆರ್ಥಿಕ ಲೆಕ್ಕಪತ್ರವನ್ನು ಪೂರ್ಣಗೊಳಿಸಲು ಎಲ್ಲ ಸ್ವೀಕೃತಿ, ಪಾವತಿ ಮತ್ತು ಆರ್ಥಿಕ ಆಸ್ತಿ/ ಹೊಣೆಗಾರಿಕೆಯ ಪೂರ್ಣ ವಿವರಗಳನ್ನು ಪಡೆಯಬೇಕಾಗಿರುತ್ತದೆ. ಭಾರತೀಯ ಲೆಕ್ಕಪತ್ರ ಮಾನದಂಡಗಳ (Indian Accounting Standards) ಅನ್ವಯ ವಿಶ್ವವಿದ್ಯಾನಿಲಯಗಳಂತಹ ಲಾಭರಹಿತ ಸಾರ್ವಜನಿಕ ಸಂಸ್ಥೆಗಳಿಗೆ ಅನ್ವಯಿಸುವಂತಹ ವಾರ್ಷಿಕ ಲೆಕ್ಕಪತ್ರಗಳ ಭಾಗವಾದ ರಾಜಸ್ವ/ಆದಾಯ ಮತ್ತು ವೆಚ್ಚಗಳ ತಃಖ್ತೆಯಲ್ಲಿ ದ್ವಿ ನಮೂದು ಪದ್ಧತಿಯ ಪ್ರಕಾರ, ಆಯಾ ವರ್ಷಕ್ಕೆ ಸಂಬಂಧಿಸಿದಂತೆ ಸಂಚಯಿಸಿದ (Accrued) ಆದಾಯ ಮತ್ತು ವೆಚ್ಚಗಳು (ರಾಜಸ್ವ ಸ್ವೀಕೃತಿಯಾಗಿರಲಿ ಅಥವಾ ಸ್ವೀಕೃತಿಯಾಗದಿರಲಿ ಹಾಗೆಯೆ ವೆಚ್ಚಗಳು ಪಾವತಿಯಾಗಿರಲಿ ಅಥವಾ ಪಾವತಿಯಾಗದಿರಲಿ) ಇವುಗಳನ್ನು ಲೆಕ್ಕಪತ್ರಗಳಲ್ಲಿ ಪರಿಗಣನೆಗೆ ತೆಗೆದುಕೊಂಡು ಆ ವರ್ಷದ ನಿಖರವಾದ ಆದಾಯ ಮತ್ತು ವೆಚ್ಚಗಳನ್ನು ತೋರಿಸುವುದು ಅನಿವಾರ್ಯವಾಗಿರುತ್ತದೆ. ಈ ರೀತಿ ಕ್ರಮಬದ್ಧವಾದ ಲೆಕ್ಕಪತ್ರವನ್ನು ನಿರ್ವಹಿಸಬೇಕಾದರೆ ವಿಶ್ವವಿದ್ಯಾನಿಲಯದ ವಿಭಾಗಗಳಲ್ಲಿ ಸಂಬಂಧಿಸಿದ ಸ್ವೀಕೃತಿಗಳ ಕುರಿತು ಸಂಬಂಧಿಸಿದ ವರ್ಷದಲ್ಲಿ ಪಾವತಿಸಿಕೊಳ್ಳಬೇಕಾದ ಶುಲ್ಕಗಳು, ದಂಡಗಳು ಮತ್ತು ಇತ್ಯಾದಿ ಸ್ವೀಕೃತಿಗಳ ಮೊತ್ತ, ಪಾವತಿಯಾಗಿರುವ ಮೊತ್ತ ಹಾಗೂ ಬಾಕಿಯಿರುವ ಮೊತ್ತದ ತಃಖ್ತೆಯನ್ನು (Demand, Collection & Balance-DCB) ಕಡ್ಡಾಯವಾಗಿ ನಿರ್ವಹಿಸಬೇಕಾಗಿರುತ್ತದೆ. ಈ ಮಾಹಿತಿಯಿಲ್ಲದೆ ಹಾಗೂ ಈ ಮಾಹಿತಿಗಳನ್ನು ಲೆಕ್ಕಪತ್ರಗಳಲ್ಲಿ ಅಳವಡಿಸದೆ ಕೇವಲ ಪಾವತಿಸಿಕೊಂಡಿರುವ ಮೊತ್ತಗಳನ್ನು ಮಾತ್ರ ಲೆಕ್ಕಪತ್ರಗಳಲ್ಲಿ ಪರಿಗಣನೆಗೆ ತೆಗೆದುಕೊಂಡು ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿದರೆ, ದ್ವಿ ನಮೂದು ಪದ್ಧತಿಯಲ್ಲಿ ಕಡ್ಡಾಯವಾಗಿ ಪಾಲಿಸಬೇಕಾದ ಸಂಚಯನ ಪದ್ಧತಿಯನ್ನು ಸಂಪೂರ್ಣವಾಗಿ (Accrual System) ಪಾಲಿಸಿದಂತಾಗುವುದಿಲ್ಲ ಹಾಗೂ ವಾರ್ಷಿಕ ಲೆಕ್ಕಪತ್ರದಲ್ಲಿ ನೈಜವಾದ ಮತ್ತು ನ್ಯಾಯೋಚಿತ ವ್ಯವಹಾರಗಳನ್ನು ಮಂಡನೆ ಮಾಡಿದಂತಾಗುವುದಿಲ್ಲ.

ಇದರಂತೆ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ ಮೇಲೆ ವಿವರಿಸಿದಂತೆ ವಾರ್ಷಿಕ ಲೆಕ್ಕಪತ್ರಗಳ ಘಟಕಗಳನ್ನೊಳಗೊಡ ವಿವರಣೆಗಳು ಇರುವುದಿಲ್ಲ. ನಗದು ಪುಸ್ತಕದ ಆಧಾರದಲ್ಲಿ ಸ್ವೀಕೃತಿ ಮತ್ತು ಪಾವತಿಯನ್ನು ಮಾತ್ರ ಲೆಕ್ಕಪತ್ರಗಳಲ್ಲಿ ಪರಿಗಣನೆಗೆ ತೆಗೆದುಕೊಂಡು ವಾರ್ಷಿಕ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿದೆ. ಆದ್ದರಿಂದ ಲೆಕ್ಕಪರಿಶೋಧನೆಗೆ ಒದಗಿಸಲಾದ ಆರ್ಥಿಕ ಲೆಕ್ಕಪತ್ರಗಳು ತಪ್ಪುಗಳಿಂದ ಹೊರತುಪಡಿಸಿದ ಮತ್ತು ಆರ್ಥಿಕ ಸ್ಥಿತಿಯ ನೈಜ ಚಿತ್ರಣವನ್ನು ನೀಡುತ್ತದೆ ಎಂಬುದರ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

ವಿಶ್ವವಿದ್ಯಾಲಯವು ತಯಾರಿಸಿರುವ ಸ್ವೀಕೃತಿ ಮತ್ತು ಪಾವತಿಗಳ ತಃಖ್ತೆಯ ಕ್ರೋಢೀಕೃತ ಸ್ವೀಕೃತಿ ಮತ್ತು ಪಾವತಿಗಳಿಗೆ ಹೊಂದಾಣಿಕೆಯಾಗುತ್ತಿಲ್ಲ.

**02. 2015–16 ಮತ್ತು 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿ ಕಂಡುಬಂದಿರುವ ನ್ಯೂನತೆಗಳು.**

- ಕುವೆಂಪು ವಿಶ್ವವಿದ್ಯಾಲಯದ 2015–16 ಮತ್ತು 2016–17ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000 – ಪ್ರಕರಣ 47ರಂತೆ ಪರಿಶೀಲಿಸಲಾಗಿ, ವಾರ್ಷಿಕ ಲೆಕ್ಕಪತ್ರಗಳಲ್ಲಿ ಕೇವಲ ಸ್ವೀಕೃತಿ ಮತ್ತು ಪಾವತಿ ವಿವರ ತಃಖ್ತೆಯಿದ್ದು ಹಾಗೂ ನಗದು ಪುಸ್ತಕ ದಾಖಲಾತಿಯಲ್ಲಿ ಹಲವಾರು ಲೋಪದೋಷಗಳನ್ನು ಗುರುತಿಸಲಾಗಿದೆ. ಕರ್ನಾಟಕ ಆರ್ಥಿಕ ಸಂಹಿತೆ, (KFC)ಯ 329(6)ರ ಪ್ರಕಾರ ನಗದು ಪುಸ್ತಕಗಳ ನಿರ್ವಹಣೆಯ ಬಗ್ಗೆ ಸ್ಪಷ್ಟವಾದ ನಿದರ್ಶನಗಳಿದ್ದರೂ ಅದನ್ನು ಗಣನೆಗೆ ತೆಗೆದುಕೊಳ್ಳದೇ ನಗದು ಪುಸ್ತಕ ನಿರ್ವಹಿಸಿದ ರೀತಿಯು ಆಕ್ಷೇಪಾರ್ಹವಾಗಿರುತ್ತದೆ.
- ಭಾರತದ ಆರ್ಥಿಕತೆಯ ದೃಷ್ಟಿಯಲ್ಲಿ ವಿಶ್ವವಿದ್ಯಾಲಯಗಳು ಜಾಗತಿಕ ಗುಣಮಟ್ಟ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕುವೆಂಪು ವಿಶ್ವವಿದ್ಯಾಲಯ ಈಗ ಅನುಸರಿಸುತ್ತಿರುವ Single Entry Accounting System ಗೆ ಬದಲಾಗಿ Double Entry Accounting System ಅನ್ನು ಅಳವಡಿಸಿಕೊಂಡು ಪಾರದರ್ಶಕತೆಯನ್ನು ಕಾಯ್ದುಕೊಳ್ಳಬಹುದೆಂದು ಅಭಿಪ್ರಾಯಪಡಲಾಗಿದೆ. ಈ ಬಗ್ಗೆ ಹಣಕಾಸು ವಿಭಾಗ ಕ್ರಮಕೈಗೊಂಡು ವರದಿ ನೀಡಲು ತಿಳಿಸಿದೆ.
- ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಸಂಬಂಧಿಸಿದಂತೆ ಆರ್ಥಿಕ ವ್ಯವಹಾರಗಳನ್ನು ವಿವಿಧ 35 ಬ್ಯಾಂಕ್ ಖಾತೆಗಳ ಮೂಲಕ ನಿರ್ವಹಿಸಲಾಗುತ್ತದೆಯಾದರೂ ಬ್ಯಾಂಕ್ ಖಾತೆಗಳ ಕುರಿತ ಯಾವುದೇ ವಿವರಗಳು ವಾರ್ಷಿಕ ಲೆಕ್ಕಪತ್ರದಲ್ಲಿ ಕಂಡುಬಂದಿರುವುದಿಲ್ಲ. ಅಂದರೆ ಪ್ರತಿ ಬ್ಯಾಂಕ್ ಖಾತೆ ಹೆಸರು ಮತ್ತು ಸದರಿ ಬ್ಯಾಂಕ್ ಖಾತೆಯ ಮೂಲಕ ನಿರ್ವಹಿಸಿರುವ ಜಮೆ, ಬಡ್ಡಿ, ವೆಚ್ಚ ಇತ್ಯಾದಿ ವಿವರಗಳ ತಃಖ್ತೆಯನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಅಳವಡಿಸುವುದು ಅವಶ್ಯಕವಾಗಿರುತ್ತದೆ. ಇವುಗಳಲ್ಲಿ ವರ್ಷಾಂತ್ಯಕ್ಕೆ ರೂ.62,14,39,982.00 ಅಂತಿಮ ಶಿಲ್ಕಿರುವುದು ಕಂಡುಬರುತ್ತದೆ.
- ವಿಶ್ವವಿದ್ಯಾನಿಲಯದ ವಿವಿಧ ಬ್ಯಾಂಕ್ ಖಾತೆಗಳಲ್ಲಿ ಇರಿಸಲಾಗಿರುವ ಠೇವಣಿಗಳ ವಿವರಗಳನ್ನು ಲೆಕ್ಕಪತ್ರದಲ್ಲಿ ಅಳವಡಿಸಿ ತೋರಿಸಿರುವುದಿಲ್ಲ. ಇದರಿಂದ ಈ ವಾರ್ಷಿಕ ಲೆಕ್ಕಪತ್ರದಲ್ಲಿ ಸದರಿ ಠೇವಣಿಗಳ ಮೊತ್ತವನ್ನು ಲೆಕ್ಕಕ್ಕೆ ತೆಗೆದುಕೊಂಡು ನಿರ್ವಹಿಸಿರುವ ಬಗ್ಗೆ ತಿಳಿಯುವುದಿಲ್ಲ. ಇವುಗಳನ್ನು ಹೊರತುಪಡಿಸಿ ತಯಾರಿಸಿದ ವಾರ್ಷಿಕ ಲೆಕ್ಕಪತ್ರ ಅಪೂರ್ಣವೆನಿಸುತ್ತದೆ.
- ವಾರ್ಷಿಕ ಲೆಕ್ಕಪತ್ರಗಳಲ್ಲಿ ವಿಶ್ವವಿದ್ಯಾನಿಲಯಕ್ಕೆ ಸ್ವಂತ ಸಂಪನ್ಮೂಲವು ಪ್ರವೇಶ ಶುಲ್ಕ, ಪರೀಕ್ಷಾ ಶುಲ್ಕ, ವರ್ಗಾವಣೆ ಶುಲ್ಕ, ಸಂಯೋಜನಾ ಶುಲ್ಕ, ಘಟಿಕೋತ್ಸವ ಶುಲ್ಕ, ಅಂಕಪಟ್ಟಿ ಶುಲ್ಕ, ಇತರೆ ಶುಲ್ಕಗಳು ಮತ್ತು ವಿವಿಧ ಮೂಲಗಳಿಂದ ಆದಾಯವು ಜಮೆಯಾಗುತ್ತಿದ್ದು, ಒಟ್ಟು ಜಮೆ ರೂ.1,06,17,37,462.00 ಎಂದು ತೋರಿಸಲಾಗಿದೆ. ಇದರಲ್ಲಿ ಪ್ರಸ್ತುತ ಮತ್ತು ಹಿಂದಿನ ವರ್ಷಗಳಲ್ಲಿ ಪಡೆಯಲಾಗಿದ್ದ ಮುಂಗಡಗಳಿಗೆ ಎದುರಾಗಿ ಹೊಂದಾಣಿಕೆ ಮಾಡಿದ ನಂತರ ಬಾಕಿ ಉಳಿದಿರುವ ಮತ್ತು ಮರು ಜಮೆಯಾದ ಮೊತ್ತ, ನಗದೀಕರಣವಾಗದ ಧನಾದೇಶಗಳನ್ನು ಮತ್ತೆ ಸ್ವೀಕರಿಸಿರುವುದು, ಹೊಂದಾಣಿಕೆ ಮೊತ್ತ ಸಹಿತ ಒಳಗೊಂಡಿದೆ. ಈಗಾಗಲೇ ಮುಂಗಡವೆಂದು ಪಡೆಯಲಾದ ಮೊತ್ತವನ್ನು ಆಯಾ ವರ್ಷಗಳಲ್ಲಿಯೇ ವೆಚ್ಚವೆಂದು ತೋರಿಸಿ ಲೆಕ್ಕಗಳನ್ನು ಅಂತಿಮಗೊಳಿಸಿರುವುದರಿಂದ ಇಂತಹ ಮರುಭರಣಾ ಮೊತ್ತವನ್ನು ಪ್ರಸ್ತುತ ವರ್ಷದ ಜಮೆ ಮತ್ತು ಖರ್ಚಿನ ವೆಚ್ಚದಲ್ಲಿ ತೋರಿಸಿರುವುದು ತಪ್ಪು. ಈ ಮೊತ್ತವನ್ನು ಒಟ್ಟು ಸ್ವೀಕೃತಿಯಲ್ಲಿ ಕಳೆಯಬೇಕಾಗುತ್ತದೆ. ಆದ್ದರಿಂದ ಸ್ಪಷ್ಟವಾಗಿ ಒಟ್ಟು ಆದಾಯವನ್ನು ದೃಢೀಕರಿಸಲು ಸಾಧ್ಯವಿಲ್ಲ.
- ಜಮೆ–ವೆಚ್ಚದ ವಿವರಗಳನ್ನು ವಾರ್ಷಿಕ ಲೆಕ್ಕಪತ್ರದಲ್ಲಿ ಬಜೆಟ್ ಶೀರ್ಷಿಕೆ, ಲೆಕ್ಕ ಶೀರ್ಷಿಕೆ ಹೆಸರು ಮತ್ತು ವಾರ್ಷಿಕ ಜಮೆ ಖರ್ಚು ಮಾತ್ರ ದಾಖಲಿಸಿರುತ್ತದೆ. ವಾರ್ಷಿಕ ಲೆಕ್ಕಪತ್ರದಲ್ಲಿ ಹಿಂದಿನ ವರ್ಷದ ವಾರ್ಷಿಕ ಸ್ವೀಕೃತಿ/ ಪಾವತಿಯ ವಿವರ ಮತ್ತು ಅದಕ್ಕೆ ಪ್ರತಿಯಾಗಿ ಸ್ವೀಕರಿಸಿದ ವಾಸ್ತವಿಕ ಸ್ವೀಕೃತಿ/ ಪಾವತಿಗಳ ವ್ಯತ್ಯಾಸಗಳನ್ನು ತೋರಿಸುವುದು ಅವಶ್ಯಕ. ಆಗಿದ್ದಲ್ಲಿ ಮಾತ್ರ ಲೆಕ್ಕ ಶೀರ್ಷಿಕೆಗಳಲ್ಲಿ ವೆಚ್ಚದ ಮತ್ತು ಉಳಿತಾಯದ ನಿಖರ ವಿವರಗಳನ್ನು ತಿಳಿಯಬಹುದಾಗಿದೆ.

❖ **ವರ್ಗೀಕೃತ ಜಮೆ–ಖರ್ಚಿನ ವಹಿ –** ದಾವಿವಿಯು ವರ್ಗೀಕೃತ ಜಮೆ–ಖರ್ಚಿನ ವಹಿಯನ್ನು ನಿರ್ವಹಿಸಿ ಲೆಕ್ಕ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಇದರಿಂದ ಸಂಚಯಿಸಿದ (Accrued) ಆದಾಯ ಮತ್ತು ವೆಚ್ಚಗಳು (ರಾಜಸ್ವ ಸ್ವೀಕೃತಿಯಾಗಿರಲಿ ಅಥವಾ ಸ್ವೀಕೃತಿಯಾಗದಿರಲಿ ಹಾಗೆಯೆ ವೆಚ್ಚಗಳು ಪಾವತಿಯಾಗಿರಲಿ ಅಥವಾ ಪಾವತಿಯಾಗದಿರಲಿ) ಇವುಗಳನ್ನು ಲೆಕ್ಕಪತ್ರಗಳಲ್ಲಿ ಪರಿಗಣನೆಗೆ ತೆಗೆದುಕೊಂಡು ಆ ವರ್ಷದ ನಿಖರವಾದ ಆದಾಯ ಮತ್ತು ವೆಚ್ಚಗಳನ್ನು ಲೆಕ್ಕ ತನಿಖೆಯಲ್ಲಿ ಗಮನಿಸಿ ವಾಸ್ತವಿಕ ಜಮೆ–ಖರ್ಚಿನ ವಿವರ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.

**ವಾರ್ಷಿಕ ಲೆಕ್ಕಪತ್ರಗಳಲ್ಲಿ ಈ ಕೆಳಕಂಡ ಲೆಕ್ಕಪತ್ರಗಳು ಕೈಬಿಟ್ಟಿರುವುದು ಕಂಡುಬಂದಿರುತ್ತದೆ.**

1. Balance Sheet
2. Significand Accounting Policy & Notes to Accounts
3. Cash Flow Statement
4. Bank Reconciliation Statement
5. Fixed Asset Register

ಈ ಮೇಲ್ಕಂಡ ಅಂಶಗಳ ಬಗ್ಗೆ ಕ್ರಮವಹಿಸಲು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಮಾಹಿತಿ ನೀಡಲು ತಿಳಿಸಿದೆ.

**03. 2015–16 ಮತ್ತು 2016–17ನೇ ಸಾಲಿನ ಆರ್ಥಿಕ ವಹಿವಾಟಿನ ನಗದು ಪುಸ್ತಕ ಮತ್ತು ಬ್ಯಾಂಕ್ ಶಿಲ್ಕಿನ ವಿವರಗಳು.**

ಕುವೆಂಪು ವಿಶ್ವವಿದ್ಯಾಲಯದ ಹಣಕಾಸು ವ್ಯವಹಾರಗಳನ್ನು ಪರಿಶೀಲಿಸಲಾಗಿ ಸುಮಾರು 5 ರಿಂದ 7 ವರ್ಷಗಳಷ್ಟು ಹಳೆಯದಾದ ನಗದಾಗದೇ ಇರುವ ಧನಾದೇಶಗಳನ್ನು Reconciliation ಮಾಡಿ ಸರಿಪಡಿಸಿಕೊಳ್ಳದಿರುವುದನ್ನು ಗಮನಿಸಲಾಗಿದೆ. ಕರ್ನಾಟಕ ಆರ್ಥಿಕ ಸಂಹಿತೆ, 1958ರಲ್ಲಿ ಅನುಚ್ಛೇದ 328 ರಿಂದ 331ರಲ್ಲಿ ವಿವರಿಸಿರುವಂತೆ ನಗದು ಪುಸ್ತಕ ನಿರ್ವಹಣೆ ಮತ್ತು ಬ್ಯಾಂಕ್ ವಹಿವಾಟುಗಳ ದಾಖಲಾತಿ, Reconciliation ನ ವಿವರಗಳನ್ನು ದಾಖಲಿಸಿರುವುದು ಮತ್ತು ದೃಢೀಕರಿಸಿರುವುದು ಬಟವಾಡೆ ಅಧಿಕಾರಿಯ ಜವಾಬ್ದಾರಿಯಾಗಿರುತ್ತದೆ. 2015–16 ಮತ್ತು 2016–17ನೇ ಸಾಲಿಗೆ ಸಂಬಂಧಿಸಿದಂತೆ ನಗದು ಪುಸ್ತಕ ಮತ್ತು ಬ್ಯಾಂಕ್ ಪಾಸ್ ಪುಸ್ತಕಗಳ ವ್ಯತಾಸಗಳನ್ನು ಗಮನಿಸಿ ವಿಚಾರಣೆ ಸಂಖ್ಯೆ:11ರಲ್ಲಿ ತಿಳಿಸಿದರೂ ಯಾವುದೇ ಕ್ರಮಕೈಗೊಳ್ಳದಿರುವುದರಿಂದ ಸ್ವೀಕೃತಿ ಮತ್ತು ವೆಚ್ಚಗಳ ಲೆಕ್ಕ ಸಮನ್ವಯ ಮಾಡದ ಕಾರಣ ಒಟ್ಟಾರೆ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಗಳನ್ನು ನಿಖರವಾದ ಲೆಕ್ಕಗಳೆಂದು ಒಪ್ಪಲು ಸಾಧ್ಯವಾಗಿರುವುದಿಲ್ಲ. ಈ ಈ ಕುರಿತು ಸೂಕ್ತ ಕ್ರಮವಹಿಸಿ, ಮುಂದಿನ ಲೆಕ್ಕಪರಿಶೋಧನೆಗೆ ಅಗತ್ಯ ಮಾಹಿತಿ ಒದಗಿಸಲು ತಿಳಿಸಲಾಗಿದೆ. ಹೀಗೆ ಲೆಕ್ಕ ಸಮನ್ವಯದಲ್ಲಿ ದೋಷ ಕಂಡ ಖಾತೆಗಳ ವಿವರವನ್ನು **ಅನುಬಂಧ–3**ರಲ್ಲಿ ಲಗತ್ತಿಸಿದೆ.

**04. ಬ್ಯಾಂಕ್ ಖಾತೆಗಳಲ್ಲಿ ಮಾಡಿರುವ ಕ್ರಮಬದ್ಧವಲ್ಲದ ವರ್ಗಾವಣೆಗಳು.**

2015–16 ಮತ್ತು 2016–17ನೇ ಸಾಲಿನ ವಾರ್ಷಿಕ ಲೆಕ್ಕಗಳನ್ನು ಪರಿಶೀಲಿಸಿದಾಗ, 35 ಖಾತೆಗಳಲ್ಲಿ ಹಣವನ್ನು ಖಾತೆಯಿಂದ ಖಾತೆಗೆ ವರ್ಗಾವಣೆ ಮಾಡಿರುವುದು ಕಂಡುಬಂದಿದ್ದು, ಈ ಬಗ್ಗೆ ಪರಿಶೀಲಿಸಿದಾಗ ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಹಣ ವರ್ಗಾವಣೆ ಮಾಡಲು ಯಾವುದೇ ಧನಾದೇಶಗಳನ್ನು ಬಳಸದೆ ಕೇವಲ ಪತ್ರದ ಮೂಲಕ ವರ್ಗಾವಣೆ ಮಾಡುತ್ತಿರುವುದು ಕಂಡುಬಂದಿದ್ದು, ಈ ಕ್ರಮದಿಂದ ನಗದು ಪುಸ್ತಕಗಳಲ್ಲಿ ಹಣ ವರ್ಗಾವಣೆಯ ವ್ಯವಹಾರಗಳು ದಾಖಲಾಗದಿರುವುದನ್ನು ತೀವ್ರವಾಗಿ ಆಕ್ಷೇಪಿಸಿ, ಈ ಕ್ರಮಗಳು ಕರ್ನಾಟಕ ಆರ್ಥಿಕ ಸಂಹಿತೆ, 1958ರ ಅನುಚ್ಛೇದ 356ರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.

ಮುಂಬರುವ ಆರ್ಥಿಕ ವರ್ಷಗಳಲ್ಲಿ ಈ ರೀತಿಯ ವರ್ಗಾವಣೆಗಳನ್ನು ಧನಾದೇಶಗಳ ಮುಖಾಂತರವೇ ನಿರ್ವಹಿಸಲು ಹಾಗೂ ವರ್ಗಾವಣೆಗಳನ್ನು ನಗದು ವಹಿಗಳಲ್ಲಿ ದಾಖಲಿಸಲು ಸೂಚಿಸುತ್ತಾ ಲೆಕ್ಕಪರಿಶೋಧನೆಗೆ ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡಲು ತಿಳಿಸಿದೆ.

**05. 2015–16 ಮತ್ತು 2016–17ನೇ ಸಾಲಿನ ವಿಶ್ವವಿದ್ಯಾಲಯದ ವಿವಿಧ ಬ್ಯಾಂಕ್ ಖಾತೆಗಳ ದೃಢೀಕರಣ ಕುರಿತು.**

ವಿಶ್ವವಿದ್ಯಾಲಯದ ಆರ್ಥಿಕ ಪರಿಸ್ಥಿತಿಯ ವಿವರಣೆಯಂತೆ 35 ಬ್ಯಾಂಕ್ ಖಾತೆಗಳ ವಿವರ ತೋರಿಸಿದ್ದು, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000 – ಪ್ರಕರಣ–32(3)(i)ರನ್ವಯ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳ ಪರಿಶೀಲನೆ ಹಣಕಾಸು ಸಮಿತಿಯ ಹೊಣೆಯಾಗಿದ್ದು, ಅದರಂತೆ ಬ್ಯಾಂಕ್ ಖಾತೆಗಳ ನಿಖರತೆಯನ್ನು ದೃಢೀಕರಿಸುವುದೂ ಕೂಡ ಹಣಕಾಸು ಸಮಿತಿಯ ಹೊಣೆಯಾಗಿರುತ್ತದೆ. ಹಣಕಾಸು ಸಮಿತಿಯ ಸಭೆಯ ನಡಾವಳಿಗಳನ್ನು ಪರಿಶೀಲಿಸಿ, ಬ್ಯಾಂಕ್ ಖಾತೆಗಳನ್ನು ದೃಢೀಕರಿಸಿದ ವಿವರಗಳನ್ನು ಒದಗಿಸಿರುವುದಿಲ್ಲ. ಈ ಕಾರಣದಿಂದ ವಿವಿಧ ಬ್ಯಾಂಕ್ ಖಾತೆಗಳ ವಿವರಗಳನ್ನು ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ.

**06. 2015–16 ಮತ್ತು 2016–17ನೇ ಸಾಲಿನ ಸಮಗ್ರ ಆರ್ಥಿಕ ಪರಿಸ್ಥಿತಿಯ ವಿವರಗಳು.**

ಕುವೆಂಪು ವಿಶ್ವವಿದ್ಯಾಲಯದ 2015–16 ಮತ್ತು 2016–17ನೇ ಸಾಲಿನ ಸಮಗ್ರ ಆರ್ಥಿಕ ಪರಿಸ್ಥಿತಿಯ ವಿವರ ಈ ಕೆಳಗಿನಂತಿದೆ.

| | | **2015–16** | | **2016–17** |
|---|---|---|---|---|
| **ವಿವರ** | | **ಮೊತ್ತ ರೂ.** | | **ಮೊತ್ತ ರೂ.** |
| ಪ್ರಾರಂಭ ಶಿಲ್ಕು A | – | 385271891.00 | – | 597998561.00 |
| ಸ್ವೀಕೃತಿ B | 1945679404.00 | 1135588465.00 | 2489664494.00 | 1321393494.00 |
| Less : ವರ್ಗಾವಣೆಗೊಂಡ ಸ್ವೀಕೃತಿ (Contra) | (810090939.00) | | (1168271000.00) | |
| **ಒಟ್ಟು ಸ್ವೀಕೃತಿ ರೂ. (A +B)** | – | **1520860356.00** | – | **1919392055.00** |
| Less : ಪಾವತಿಗಳು | – | 922861795.00 | – | 1312962344.00 |
| ನಗದು ಪುಸ್ತಕದ ಅಂತಿಮ ಶಿಲ್ಕು | – | 597998561.00 | – | 606429711.00 |
| ಬ್ಯಾಂಕ್ ಪಾಸ್ ಪುಸ್ತಕದ ಅಂತಿಮ ಶಿಲ್ಕು | – | 621439982.00 | – | 743486844.00 |
| **ವ್ಯತ್ಯಾಸ** | | **23441421.00** | | **137057133.00** |

ಮೇಲ್ಕಂಡ ವ್ಯತ್ಯಾಸವು ಆರ್ಥಿಕ ವರ್ಷದ ಅಂತಿಮ ದಿನಾಂಕಕ್ಕೆ ನಗದೀಕರಣವಾಗದ ಧನಾದೇಶಗಳಿಂದ ಉಂಟಾಗಿರುತ್ತದೆ.

ಸಂಬಂಧಿಸಿದ ನಗದೀಕರಣವಾಗದ ಧನಾದೇಶಗಳನ್ನು ಪರಿಶೀಲಿಸಿದಾಗ ಧನಾದೇಶಗಳ ಅವಧಿ 90 ದಿನಗಳಾಗಿದ್ದು, ಈ ಅವಧಿಯೊಳಗೆ ನಗದೀಕರಣವಾಗದ ಧನಾದೇಶಗಳನ್ನು ನಗದು ವಹಿಯಲ್ಲಿ ಸ್ವೀಕೃತಿಯಾಗಿ ತೆಗೆದುಕೊಂಡು ಬ್ಯಾಂಕ್ ಪಾಸ್ ಪುಸ್ತಕದೊಂದಿಗೆ ಲೆಕ್ಕ ಸಮನ್ವಯ ಮಾಡಿಕೊಳ್ಳಬೇಕಾಗುತ್ತದೆ. ಆದರೆ, ಸಂಬಂಧಿಸಿದ ನಗದೀಕರಣವಾಗದ ಧನಾದೇಶಗಳನ್ನು ಪರಿಶೀಲಿಸಲಾಗಿ, 2008–09ನೇ ಸಾಲಿನಿಂದ 2015–16 ಮತ್ತು 2016–17ನೇ ಸಾಲಿನವರೆಗಿನ ಧನಾದೇಶಗಳಾಗಿದ್ದು, ಸಂಬಂಧಿಸಿದ ಸಂಸ್ಥೆಯವರು ಸೂಕ್ತ ಕ್ರಮವಹಿಸಿ, ನಗದೀಕರಣವಾಗದ 90 ದಿನ ಗತಿಸಿದ ಧನಾದೇಶಗಳ ಮೊಬಲಗನ್ನು ನಗದು ವಹಿಯಲ್ಲಿ ಸ್ವೀಕೃತಿಯಾಗಿ ತೆಗೆದುಕೊಂಡು ಬ್ಯಾಂಕ್ ಪಾಸ್ ಪುಸ್ತಕದೊಂದಿಗೆ ಲೆಕ್ಕ ಸಮನ್ವಯ ಮಾಡಿಕೊಂಡಿರುವುದಿಲ್ಲ. ಈ ಬಗ್ಗೆ ಸೂಕ್ತ ಕ್ರಮ ವಹಿಸಿ ನಗದೀಕರಣವಾಗದ 2015–16 ಮತ್ತು 2016–17ನೇ ಸಾಲಿನ ಮೊಬಲಗು ರೂ.2,34,41,421–00 ಮತ್ತು ರೂ.13,70,57,133–00ಗಳನ್ನು ಲೆಕ್ಕಸಮನ್ವಯ ಮಾಡಿಕೊಂಡು ವಾಸ್ತವಿಕ ನಗದೀಕರಣವಾಗದ ಧನಾದೇಶಗಳನ್ನು ಮಾತ್ರ ಪರಿಗಣಿಸುವಂತೆ ತಿಳಿಸಿದೆ.

## 07. ವಿಶ್ವವಿದ್ಯಾಲಯದ ಸಾಮಾನ್ಯ ಸ್ವೀಕೃತಿಗಳು ಮತ್ತು ಸಾಮಾನ್ಯ ವೆಚ್ಚಗಳು.

ಕುವೆಂಪು ವಿಶ್ವವಿದ್ಯಾಲಯವು ಆಂತರಿಕ ಸಂಪನ್ಮೂಲದ ರಾಜಸ್ವ ಮೊಬಲಗುಗಳು ಪ್ರಮುಖವಾಗಿ ಸಂಯೋಜನಾ ಶುಲ್ಕ, ಪ್ರವೇಶ ಶುಲ್ಕ ಹಾಗೂ ಪರೀಕ್ಷಾ ಶುಲ್ಕ ಮತ್ತು ದೂರಶಿಕ್ಷಣ ಕೋರ್ಸ್‌ಗಳ ಶುಲ್ಕ ಹಾಗೂ ಇತರೆ ಶುಲ್ಕಗಳು ಹಾಗೂ ಇನ್ನಿತರ ಆದಾಯಗಳಾಗಿರುತ್ತದೆ. 2015–16 ಮತ್ತು 2016–17ನೇ ಸಾಲಿನಲ್ಲಿ ಸದರಿ ಬಾಬ್ತುಗಳಿಂದ ಕುವೆಂಪು ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳಲ್ಲಿ ದಾಖಲಿಸಿರುವಂತೆ ರಾಜಸ್ವ ಸಂಗ್ರಹಣೆ ಮೊಬಲಗು ವಿವರ ಕೆಳಗಿನಂತಿದೆ.

| ಹಣಕಾಸು ವರ್ಷ | ಸಾಮಾನ್ಯ ಸ್ವೀಕೃತಿ | ಸಾಮಾನ್ಯ ವೆಚ್ಚ |
|---|---|---|
| 2013–14 | 6245.35 | 6250.56 |
| 2014–15 | 5243.27 | 5576.74 |
| 2015–16 | 4910.12 | 5735.07 |
| 2016–17 | 4099.01 | 7438.38 |

(**ಟಿಪ್ಪಣಿ:** ಸಾಲಗಳು, ಠೇವಣಿಗಳು, ಮುಂಗಡಗಳು, ಅನುದಾನಗಳು, ರಾಜಧನ, ಉಪಕರಗಳು ಇತ್ಯಾದಿ ಸ್ವೀಕೃತಿಗಳು, ಅಸಾಧಾರಣ ಸ್ವೀಕೃತಿಗಳಿಂದ ಋಣ ಶೀರ್ಷಿಕೆ ವಹಿವಾಟುಗಳು ಹೂಡಿಕೆಗಳಿಂದ ಬಂದ ಆದಾಯಗಳು, ಆಸ್ತಿಗಳ ಮಾರಾಟದಿಂದ ಬಂದ ಆದಾಯಗಳು ಇತ್ಯಾದಿಗಳನ್ನು ಹೊರತುಪಡಿಸಿ, ಸಾಮಾನ್ಯ ಸ್ವೀಕೃತಿಗಳಿಂದ ಹೊರತುಪಡಿಸಿದ ಬಾಬ್ತುಗಳಂತಹದೆ ವೆಚ್ಚಗಳನ್ನು ಹೊರತುಪಡಿಸಿ ಉಳಿದ ವೆಚ್ಚಗಳು)

ಮೇಲಿನ ಅಂಕಿ–ಅಂಶಗಳನ್ನು ಪರಿಶೀಲಿಸಲಾಗಿ, ವಿಶ್ವವಿದ್ಯಾಲಯದ 2015–16ನೇ ಸಾಲಿನ ಆಂತರಿಕ ಸಂಪನ್ಮೂಲದ ಕ್ರೋಢೀಕರಣ ಮೊತ್ತವನ್ನು 2014–15ನೇ ಸಾಲಿನ ಸ್ವೀಕೃತಿಗಳಿಗೆ ಹೋಲಿಕೆ ಮಾಡಿದಾಗ ರೂ.333.15 ಲಕ್ಷ ಸ್ವೀಕೃತಿ ಕಡಿಮೆಯಾಗಿರುವುದು ಮತ್ತು ಸಾಮಾನ್ಯ ವೆಚ್ಚಗಳು ರೂ.158.33 ಲಕ್ಷ ಕಡಿಮೆಯಾಗಿರುವುದು ಕಂಡುಬಂದಿದೆ. 2016–17ನೇ ಸಾಲಿಗೆ ಆಂತರಿಕ ಸಂಪನ್ಮೂಲ ಕ್ರೋಢೀಕರಣ ಮೊತ್ತವನ್ನು 2015–16ನೇ ಸಾಲಿಗೆ ಹೋಲಿಕೆ ಮಾಡಿದಾಗ ರೂ.811.11 ಲಕ್ಷ ವೆಚ್ಚಗಳಲ್ಲಿ ರೂ.1703.31 ಲಕ್ಷ ಹೆಚ್ಚಾಗಿರುವುದು ಕಂಡುಬಂದಿದೆ.

ಸಾಮಾನ್ಯ ಸ್ವೀಕೃತಿಗಳಿಂದ ಹೊರತುಪಡಿಸಿದ ಬಾಬ್ತುಗಳಂತಹ ವೆಚ್ಚಗಳನ್ನು 2015–16 ಮತ್ತು 2016–17ನೇ ಸಾಲಿನಲ್ಲಿ ಭರಿಸಿರುವ ಲೆಕ್ಕಪತ್ರಗಳೊಂದಿಗೆ ಪರಿಶೀಲಿಸಿದಾಗ, ವಿಶ್ವವಿದ್ಯಾಲಯವು ಆಡಳಿತಾತ್ಮಕ ಮತ್ತು ಶೈಕ್ಷಣಿಕ ಕಾರ್ಯಚಟುವಟಿಕೆಗಳಿಗಾಗಿ ವೆಚ್ಚ ಭರಿಸಿರುವಂತೆ ಮೌಲ್ಯಮಾಪಕರುಗಳಿಗೆ ಅತಿಥಿ ಭತ್ಯೆ, ಹೆಚ್ಚುವರಿ ವೇತನ ಭತ್ಯೆಗಳ ಪಾವತಿ, ವಾಹನ ಭತ್ಯೆ, ನಿಯಮಗಳನ್ನು ಪಾಲಿಸದೆ ಮಾಡಿರುವ ಖರೀದಿಗಳು, ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳಿಗೆ ಹೆಚ್ಚುವರಿ ವಿದ್ಯಾರ್ಥಿ ವೇತನ ಪಾವತಿ ಮತ್ತು ಸಮಾಲೋಚನಾ ಶುಲ್ಕ ಸಂದಾಯ ಮುಂತಾದವುಗಳಿಗೆ ವಿಶ್ವವಿದ್ಯಾಲಯದ ಪರಿನಿಯಮಗಳನ್ನು ರಚಿಸಿಕೊಳ್ಳದೆ, ಸರ್ಕಾರದ ನಿರ್ದೇಶನಗಳನ್ನೂ ಅನುಷ್ಠಾನಗೊಳಿಸದೆ ಹಾಗೂ ಚಾಲ್ತಿಯಲ್ಲಿರುವ ಸೇವಾ ನಿಯಮಗಳು ಮತ್ತು ಯು.ಜಿ.ಸಿ. ಮಾರ್ಗಸೂಚಿಗಳನ್ನು ಯಥಾವತ್ತಾಗಿ ಪಾಲಿಸದೆ ಆಂತರಿಕ ಸಂಪನ್ಮೂಲದ ರಾಜಸ್ವ ಸಂಗ್ರಹಣದ ಮೊಬಲಗನ್ನು ನಿಯಮಬಾಹಿರವಾಗಿ ವೆಚ್ಚಗಳಿಗೆ ಭರಿಸಿರುವುದನ್ನು ಹಿಂದಿನ ಲೆಕ್ಕಪರಿಶೋಧನೆಯಲ್ಲಿ ಗುರುತಿಸಿ ವಿಶ್ವವಿದ್ಯಾಲಯದ ಗಮನಕ್ಕೆ ತರಲಾಗಿದ್ದರೂ ಸಹ ಈ ವಿಚಾರದಲ್ಲಿ ಯಾವುದೇ ಸುಧಾರಣೆಯಾಗದಿರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಹಾಗೂ 2016–17ನೇ ಸಾಲಿನ ಅಸ್ವಾಭಾವಿಕ ವೆಚ್ಚ ಏರಿಕೆಯನ್ನು ಗಮನಿಸಲಾಗಿದೆ.

## 08. ಸೇವಾ ಅಂಚೆ ಚೀಟಿ ಲೆಕ್ಕದ ವಿವರ:

ಕುವೆಂಪು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಅಂಚೆ ಬಟವಾಡಿ ಕಾರ್ಯಗಳಿಗಾಗಿ ದಾಸ್ತಾನು ಖರೀದಿ ವಿಭಾಗದವರು ಅಂಚೆ ಚೀಟಿಗಳನ್ನು ಖರೀದಿಸಿ ವಿತರಿಸಿರುತ್ತಾರೆ. ಇದಕ್ಕೆ ಸಂಬಂಧಿಸಿದಂತೆ 2015–16 ಮತ್ತು 2016–17ನೇ ಸಾಲಿಗೆ ಅಂಚೆ ಚೀಟಿಗಳ ಲೆಕ್ಕ ಕೆಳಕಂಡಂತಿದೆ.

**ಘೋಷ್ವಾರೆ – 2015–16**

| ಕ್ರಮ ಸಂಖ್ಯೆ | ವಿವರ | ಮೊತ್ತ ರೂ. |
|---|---|---|
| 1 | 01–04–2015ರ ಆರಂಭಿಕ ಶಿಲ್ಕು ರೂ. | 46552.00 |
| 2 | 2015–16ನೇ ಸಾಲಿನಲ್ಲಿ ಅಂಚೆ ಚೀಟಿಗಳನ್ನು ಖರೀದಿ<br>ದಿನಾಂಕ:14–08–2015ರಂದು ರೂ.50000–00<br>ದಿನಾಂಕ:02–02–2016ರಂದು ರೂ.50000–00 | 100000.00 |
| 3 | ಒಟ್ಟು ಅಂಚೆ ಚೀಟಿಗಳು ರೂ. | 146552.00 |
| 4 | 2015–16ನೇ ಸಾಲಿಗೆ ಬಳಕೆ ರೂ. | 109229.00 |
| 5 | ದಿನಾಂಕ: 31–03–2016ಕ್ಕೆ ಅಂತಿಮ ಶಿಲ್ಕು | 37323.00 |

**ಘೋಷ್ವಾರೆ – 2016–17**

| ಕ್ರಮ ಸಂಖ್ಯೆ | ವಿವರ | ಮೊತ್ತ ರೂ. |
|---|---|---|
| 1 | 01–04–2016ರ ಆರಂಭಿಕ ಶಿಲ್ಕು | 37323.00 |
| 2 | 2016–17ನೇ ಸಾಲಿನಲ್ಲಿ ಅಂಚೆ ಚೀಟಿಗಳನ್ನು ಖರೀದಿ<br>ದಿನಾಂಕ:04–08–2016ರಂದು ರೂ.50000–00<br>ದಿನಾಂಕ:22–03–2017ರಂದು ರೂ.50000–00 | 100000.00 |
| 3 | ಒಟ್ಟು ಅಂಚೆ ಚೀಟಿಗಳು ರೂ. | 137323.00 |
| 4 | 2016–17ನೇ ಸಾಲಿಗೆ ಬಳಕೆ | 80919.00 |
| 5 | ದಿನಾಂಕ: 31–03–2017ಕ್ಕೆ ಅಂತಿಮ ಶಿಲ್ಕು | 56404.00 |

## 09. 2015–16 ಮತ್ತು 2016–17ನೇ ಸಾಲಿಗೆ ವಿತರಣೆಯಾದ ರಶೀದಿ ಪುಸ್ತಕಗಳ ಲೆಕ್ಕ.

2015–16 ಮತ್ತು 2016–17ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ಘಟಕಗಳಿಗೆ ರಶೀದಿ ಪುಸ್ತಕಗಳನ್ನು ಈ ಕೆಳಕಂಡಂತೆ ವಿತರಣೆ ಮಾಡಿದೆ.

| 2015–16 | | 2016–17 | |
|---|---|---|---|
| ಸಹ್ಯಾದ್ರಿ ವಿಜ್ಞಾನ ಕಾಲೇಜು | 100 | ಸಹ್ಯಾದ್ರಿ ವಿಜ್ಞಾನ ಕಾಲೇಜು | 125 |
| ಸಹ್ಯಾದ್ರಿ ಕಲಾ ಕಾಲೇಜು | 100 | ಎಸ್.ಎಂ.ಆರ್. ಕಾಲೇಜು | 50 |
| ಶೈಕ್ಷಣಿಕ ವಿಭಾಗ | 50 | ಸಹ್ಯಾದ್ರಿ ಕಲಾ ಕಾಲೇಜು | 100 |
| ಗ್ರಂಥಾಲಯ ವಿಭಾಗ | 200 | ಶೈಕ್ಷಣಿಕ ವಿಭಾಗ | 50 |
| | | ಗ್ರಂಥಾಲಯ ವಿಭಾಗ | 100 |
| **ಒಟ್ಟು** | **450** | **ಒಟ್ಟು** | **425** |

| | |
|---|---|
| 2015–16ನೇ ಸಾಲಿಗೆ ಆರಂಭ ಶಿಲ್ಕು | 950 |
| 2015–16ರಲ್ಲಿ ಹೊಸದಾಗಿ ಮುದ್ರಣ ಮಾಡಿಸಿದ್ದು | – |
| **ಒಟ್ಟು** | **950** |
| 2015–16ನೇ ಸಾಲಿನಲ್ಲಿ ಮೇಲ್ಕಂಡಂತೆ ವಿತರಣೆ | 450 |
| ದಿನಾಂಕ:31–03–2016ಕ್ಕ ಅಂತಿಮ ಶಿಲ್ಕು | 500 |

| | |
|---|---|
| 2016–17ನೇ ಸಾಲಿಗೆ ಆರಂಭ ಶಿಲ್ಕು | 500 |
| 2016–17ರಲ್ಲಿ ಹೊಸದಾಗಿ ಮುದ್ರಣ ಮಾಡಿಸಿದ್ದು | 1000 |
| **ಒಟ್ಟು** | **1500** |
| 2016–17ನೇ ಸಾಲಿನಲ್ಲಿ ಮೇಲ್ಕಂಡಂತೆ ವಿತರಣೆ | 425 |
| ದಿನಾಂಕ:31–03–2017ಕ್ಕೆ ಅಂತಿಮ ಶಿಲ್ಕು | 1075 |

## 10. 2015–16 ಮತ್ತು 2016–17ನೇ ಸಾಲಿನ ಅನುಮೋದಿತ ಆಯವ್ಯಯ:

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 – ಪ್ರಕರಣ–48ರಂತೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಆಯ–ವ್ಯಯವನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾಗಿರುವಂತೆ 2015–16ನೇ ಸಾಲಿನ ಆಯವ್ಯಯವು ದಿನಾಂಕ:28–03–2015ರಂದು ಅನುಮೋದನೆಗೊಂಡಿರುತ್ತದೆ. ಇದರ ವಿವರ ಕೆಳಕಂಡಂತಿದೆ.

**2015–16**

| | ನಿರೀಕ್ಷಿತ ಸ್ವೀಕೃತಿಗಳು (ಲಕ್ಷಗಳಲ್ಲಿ) | ನಿರೀಕ್ಷಿತ ವೆಚ್ಚಗಳು (ಲಕ್ಷಗಳಲ್ಲಿ) | ಷರಾ |
|---|---|---|---|
| ಯೋಜನೆ ಸ್ವೀಕೃತಿಗಳು | 732.86 | 757.86 | |
| ಯೋಜನೇತರ ಸ್ವೀಕೃತಿಗಳು | 4475.63 | 3950.81 | |
| ಆಂತರಿಕ ಸಂಪನ್ಮೂಲಗಳು | 5170.00 | 2638.32 | ಆಡಳಿತಾತ್ಮಕ ವೆಚ್ಚಗಳು |
| | 00 | 3262.14 | ಇತರೆ ವೆಚ್ಚಗಳು |
| **ಒಟ್ಟು** | **10378.49** | **10609.13** | |

ರೂ.10,378.49 ಲಕ್ಷಗಳ ಸ್ವೀಕೃತಿಗಳನ್ನು ನಿರೀಕ್ಷಿಸಲಾಗಿದ್ದು, ಯೋಜನೆ ಮತ್ತು ಯೋಜನೇತರ ವೆಚ್ಚಗಳಿಗಾಗಿ ರೂ.10,609.13 ಲಕ್ಷಗಳನ್ನು ನಿಗದಿಪಡಿಸಿ ರೂ.230.64 ಲಕ್ಷಗಳ ಕೊರತೆ ಆಯವ್ಯಯ ತಯಾರಿಸಲಾಗಿದೆ. ಸದರಿ ಅನುಮೋದಿತ ಆಯವ್ಯಯದಲ್ಲಿ ಈ ಕೆಳಕಂಡ ವರ್ಗೀಕರಣದಂತೆ ಅವಕಾಶ ಕಲ್ಪಿಸಿರುವುದಿಲ್ಲ.

1. ರಾಜಸ್ವ ಸ್ವೀಕೃತಿಗಳು – ರಾಜಸ್ವ ವೆಚ್ಚಗಳು
2. ಬಂಡವಾಳ ಸ್ವೀಕೃತಿಗಳು – ಬಂಡವಾಳ ವೆಚ್ಚಗಳು
3. ಇತರೆ ಸ್ವೀಕೃತಿಗಳು – ಇತರೆ ವೆಚ್ಚಗಳು

**2016–17**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 – ಪ್ರಕರಣ–48ರಂತೆ ವಿಶ್ವವಿದ್ಯಾಲಯದ ಸಿಂಡಿಕೇಟ್ ಆಯ–ವ್ಯಯವನ್ನು ಪರಿನಿಯಮಗಳ ಮೂಲಕ ನಿಯಮಿಸಬಹುದಾಗಿರುವಂತೆ 2016–17ನೇ ಸಾಲಿನ ಆಯವ್ಯಯವು ದಿನಾಂಕ:30–03–2016ರಂದು ಅನುಮೋದನೆಗೊಂಡಿರುತ್ತದೆ. ಇದರ ವಿವರ ಕೆಳಕಂಡಂತಿದೆ.

| | ನಿರೀಕ್ಷಿತ ಸ್ವೀಕೃತಿಗಳು (ಲಕ್ಷಗಳಲ್ಲಿ) | ನಿರೀಕ್ಷಿತ ವೆಚ್ಚಗಳು (ಲಕ್ಷಗಳಲ್ಲಿ) | ಷರಾ |
|---|---|---|---|
| ಯೋಜನೆ ಸ್ವೀಕೃತಿಗಳು | 1487.68 | 2322.68 | |
| ಯೋಜನೇತರ ಸ್ವೀಕೃತಿಗಳು | 5139.63 | 4303.87 | |
| ಆಂತರಿಕ ಸಂಪನ್ಮೂಲಗಳು | 5780.00 | 3137.33 | ಆಡಳಿತಾತ್ಮಕ ವೆಚ್ಚಗಳು |
| | 00 | 3444.09 | ಇತರೆ ವೆಚ್ಚಗಳು |
| **ಒಟ್ಟು** | **12407.31** | **13207.97** | |

ರೂ.12407.31 ಲಕ್ಷಗಳ ಸ್ವೀಕೃತಿಗಳನ್ನು ನಿರೀಕ್ಷಿಸಲಾಗಿದ್ದು, ಯೋಜನೆ ಮತ್ತು ಯೋಜನೇತರ ವೆಚ್ಚಗಳಿಗಾಗಿ ರೂ.13207.97 ಲಕ್ಷಗಳನ್ನು ನಿಗದಿಪಡಿಸಿ ರೂ.800.66 ಲಕ್ಷಗಳ ಕೊರತೆ ಆಯವ್ಯಯ ತಯಾರಿಸಲಾಗಿದೆ.

ಸದರಿ ಅನುಮೋದಿತ ಆಯವ್ಯಯದಲ್ಲಿ ಈ ಕೆಳಕಂಡ ವರ್ಗೀಕರಣದಂತೆ ಅವಕಾಶ ಕಲ್ಪಿಸಿರುವುದಿಲ್ಲ.

1. ರಾಜಸ್ವ ಸ್ವೀಕೃತಿಗಳು – ರಾಜಸ್ವ ವೆಚ್ಚಗಳು
2. ಬಂಡವಾಳ ಸ್ವೀಕೃತಿಗಳು – ಬಂಡವಾಳ ವೆಚ್ಚಗಳು
3. ಇತರೆ ಸ್ವೀಕೃತಿಗಳು – ಇತರೆ ವೆಚ್ಚಗಳು

ಯೋಜನಾ ಹಾಗೂ ಯೋಜನೇತರ ಸ್ವೀಕೃತಿ ಮತ್ತು ವೆಚ್ಚಗಳನ್ನು ಮಾತ್ರ ಆಯವ್ಯಯದಲ್ಲಿ ಪ್ರತಿಬಿಂಬಿಸಿದ್ದು, ಈ ಮೇಲಿನ ವರ್ಗೀಕರಣವನ್ನು ಪಾಲಿಸುವಲ್ಲಿ ವಿಫಲವಾಗಿರುತ್ತದೆ. ಆಯವ್ಯಯಕ್ಕಿಂತ ಹೆಚ್ಚುವರಿ ವೆಚ್ಚ ಮಾಡಿರುವ ವಿವರಗಳನ್ನು ಮುಂದಿನ ಕಂಡಿಕೆಗಳಲ್ಲಿ ಪ್ರತ್ಯೇಕವಾಗಿ ಪ್ರಸ್ತಾಪಿಸಲಾಗಿದೆ.

# ಭಾಗ–2

## ಕುವೆಂಪು ವಿಶ್ವವಿದ್ಯಾಲಯದ 2015–16 ಮತ್ತು 2016–17ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿಗೆ ಅನುಪಾಲನಾ ವರದಿ

| ಕಂಡಿಕೆ | ಆಡಿಟ್ ಕಂಡಿಕೆಯ ಸಂಕ್ಷಿಪ್ತ ವಿಷಯ |
|---|---|
| 11 | **ಅನುಮೋದಿತ ಆಯ–ವ್ಯಯಕ್ಕಿಂತ ಹೆಚ್ಚುವರಿ ವೆಚ್ಚ ಭರಿಸಿರುವುದು. ರೂ.2,95,25,679–00 (ಆಕ್ಷೇಪಣೆ)** |

2015–16 ಮತ್ತು 2016–17ನೇ ಸಾಲಿನಲ್ಲಿ ಅನುಮೋದಿತ ಆಯ–ವ್ಯಯದಲ್ಲಿ ಕಲ್ಪಿಸಿರುವ ಮೊತ್ತಕ್ಕೂ ಮತ್ತು ವಾಸ್ತವಿಕ ವೆಚ್ಚಕ್ಕೂ ವ್ಯತ್ಯಾಸ ಕಂಡುಬಂದಿದ್ದು, ವ್ಯತ್ಯಾಸದ ವಿವರ ಈ ಕೆಳಕಂಡಂತಿದೆ.

**2015–16**

| ಕ್ರ. ಸಂ. | ಖಾತೆ | ಶೀರ್ಷಿಕೆ | 2015–16ರ ಪರಿಷ್ಕೃತ ಆಯವ್ಯಯ | 2015–16ರ ವಾಸ್ತವಿಕ ವೆಚ್ಚ | ವ್ಯತ್ಯಾಸ |
|---|---|---|---|---|---|
| 1 | ಯೋಜನೆ ಖಾತೆ | ಕನ್ನಡ ಭಾಷೆಯ ಅಭಿವೃದ್ಧಿಗಾಗಿ ವಿಶೇಷ ಅನುದಾನ ವೆಚ್ಚಗಳು | 00 | 1201936.00 | –1201936.00 |
| 2 | ಪರೀಕ್ಷಾ ಖಾತೆ | ಮುದ್ರಣ ಮತ್ತು ಲೇಖನ ಸಾಮಗ್ರಿ | 12500000.00 | 21877800.00 | –9377800.00 |
| 3 | ಪರೀಕ್ಷಾ ಖಾತೆ | ಪರೀಕ್ಷೆ ಮತ್ತು ಫಲಿತಾಂಶ | 20000000.00 | 20571569.00 | –571569.00 |
| 4 | ಪರೀಕ್ಷಾ ಖಾತೆ | ದೂರಶಿಕ್ಷಣ ಪರೀಕ್ಷಾ ವೆಚ್ಚ | 35000000.00 | 43643239.00 | –8643239.00 |
| **ಒಟ್ಟು ರೂ.** | | | **67500000.00** | **87294544.00** | **–19794544.00** |

**2016–17**

| ಕ್ರ. ಸಂ. | ಖಾತೆ | ಶೀರ್ಷಿಕೆ | 2016–17ರ ಪರಿಷ್ಕೃತ ಆಯವ್ಯಯ | 2016–17ರ ವಾಸ್ತವಿಕ ವೆಚ್ಚ | ವ್ಯತ್ಯಾಸ |
|---|---|---|---|---|---|
| 1 | ಸ್ನಾತಕೋತ್ತರ ಕೇಂದ್ರ, ಕಡೂರು | ಭದ್ರತಾ ಏಜೆನ್ಸಿ ವೇತನ | 2953000.00 | 3669532.00 | –716532.00 |
| 2 | ಸಹ್ಯಾದ್ರಿ ವಿಜ್ಞಾನ ಕಾಲೇಜು | ಅತಿಥಿ ಉಪನ್ಯಾಸಕರ ವೇತನ | 13200000.00 | 13395728.00 | –195728.00 |
| 3 | ಪರೀಕ್ಷಾ ಖಾತೆ | ಮುದ್ರಣ ಮತ್ತು ಲೇಖನ ಸಾಮಗ್ರಿ | 12500000.00 | 13887580.00 | –1387580.00 |
| 4 | ಪರೀಕ್ಷಾ ಖಾತೆ | ಪರೀಕ್ಷೆ ಮತ್ತು ಫಲಿತಾಂಶ | 20000000.00 | 27431295.00 | 7431295.00 |
| **ಒಟ್ಟು ರೂ.** | | | **48653000.00** | **58384135.00** | **–9731135.00** |

ಈ ಸಂಬಂಧ ಆಡಿಟ್ ವಿಚಾರಣಾ ಸಂಖ್ಯೆ:170/28–08–2018 ವಿವರಣೆ ಕೇಳಲಾಗಿತ್ತಾದರೂ ಸದರಿ ಆಡಿಟ್ ವಿಚಾರಣಾ ಪತ್ರಕ್ಕೆ ಅನುಪಾಲನಾ ವರದಿ ಸಲ್ಲಿಸಿರುವುದಿಲ್ಲ. ಆದ್ದರಿಂದ, ಹೆಚ್ಚುವರಿ ವೆಚ್ಚ 2015–16ನೇ ಸಾಲಿಗೆ ರೂ.1,97,94,544–00 ಮತ್ತು 2016–17ನೇ ಸಾಲಿಗೆ ರೂ.97,31,135–00 ಒಟ್ಟು ರೂ.2,95,25,679–00ಗಳ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**ಅನುಪಾಲನಾ ವರದಿ**

**2015–16**

ಕ್ರ.ಸಂ.1ರ ಯೋಜನೆ ಖಾತೆಯಲ್ಲಿ ಕನ್ನಡ ಭಾಷಾಭಿವೃದ್ಧಿಗಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದಲ್ಲಿ ಹಂತ ಹಂತವಾಗಿ 2015–16ನೇ ಸಾಲಿನಲ್ಲಿ ವೆಚ್ಚ ಮಾಡಲಾಗಿದೆ. ಸದರಿ ಆರ್ಥಿಕ ವರ್ಷದಲ್ಲಿ ಯಾವುದೇ ಹಣ ಬಿಡುಗಡೆಯಾಗದಿರುವ ಪ್ರಯುಕ್ತ ಹಿಂದಿನ ಸಾಲಿನಲ್ಲಿ ಉಳಿದ ಬಾಕಿ ಮೊತ್ತದಲ್ಲೆ ವೆಚ್ಚ ಭರಿಸಲಾಗಿದೆ.

ಕ್ರ.ಸಂ.2, 3 ಮತ್ತು 4ಕ್ಕೆ ಸಂಬಂಧಿಸಿದಂತೆ 2015–16ನೇ ಸಾಲಿನ ಆಯವ್ಯಯದಲ್ಲಿ ಪರೀಕ್ಷಾ ವೆಚ್ಚಗಳಿಗಾಗಿ ರೂ.1500.00 ಲಕ್ಷಗಳನ್ನು ಕಲ್ಪಿಸಲಾಗಿದೆ. ಸದರಿ ಆಯವ್ಯಯದಲ್ಲಿ ಪರೀಕ್ಷೆಗೆ ಸಂಬಂಧಿಸಿದಂತೆ ವಿವಿಧ ಕಾರ್ಯಗಳಿಗಾಗಿ ಕಛೇರಿ ಅನುಕೂಲಕ್ಕಾಗಿ ಉಪ ಶೀರ್ಷಿಕೆ ಮಾಡಿಕೊಂಡು ಅಂದಾಜು ಮೊಬಲಗು ನಮೂದಿಸಿದೆ. ಪರೀಕ್ಷೆಗಳ ವೆಚ್ಚ ಮುಖ್ಯ ಶೀರ್ಷಿಕೆಯಡಿ ಆರ್ಥಿಕ ಸಾಲಿನಲ್ಲಿ ಒಟ್ಟಾರೆ ವೆಚ್ಚ ರೂ.1476.05 ಲಕ್ಷಗಳಾಗಿದ್ದು, ಆಯವ್ಯಯದಲ್ಲಿ ಕಲ್ಪಿಸಿರುವ ಮೊತ್ತಕ್ಕಿಂತ ಹೆಚ್ಚಾಗಿ ವೆಚ್ಚವಾಗಿರುವುದಿಲ್ಲ.

**2016–17**

ಕ್ರ.ಸಂ.1ಕ್ಕೆ ಸಂಬಂಧಿಸಿದಂತೆ, ತಾಂತ್ರಿಕ ಕಾರಣದಿಂದ 2015–16ನೇ ಸಾಲಿನ ಜನವರಿ ಮತ್ತು ಫೆಬ್ರವರಿ ಮಾಹೆಗಳ ಏಜೆನ್ಸಿ ನೌಕರರುಗಳ ಬಿಲ್ಲುಗಳನ್ನು ಮತ್ತು ಪರಿಷ್ಕೃತ(ಡಿ.ಎ.) ವೇತನವನ್ನು 2016–17ನೇ ಸಾಲಿನಲ್ಲಿ ಪಾವತಿಸಲಾದ ಸಂಬಂಧ ಆಯ–ವ್ಯಯದಲ್ಲಿ ನಿಗದಿಪಡಿಸಿದ ಅನುದಾನಕ್ಕಿಂತ ಹೆಚ್ಚಿನ ಮೊತ್ತವನ್ನು ಪಾವತಿಸಲಾಗಿದೆ. ಆದ್ದರಿಂದ ದಿನಾಂಕ:07–01–2016ರಂದು ನಡೆದ ಹಣಕಾಸು ಸಮಿತಿ ಸಭೆಯ ನಿರ್ಣಯದಂತೆ ರೂ.8.00 ಲಕ್ಷಗಳ ಹೆಚ್ಚಿನ ಅನುದಾನಕ್ಕೆ ಅನುಮತಿ ಪಡೆದುಕೊಳ್ಳಲಾಗಿದೆ.

| | |
|---|---|
| | ಕ್ರ.ಸಂ.2ಕ್ಕೆ ಸಂಬಂಧಿಸಿದಂತೆ, ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಎಲ್ಲಾ ಸ್ನಾತಕ ವಿಭಾಗಗಳ ಅತಿಥಿ ಉಪನ್ಯಾಸಕರುಗಳು ವೇತನಕ್ಕೆ 2016-17 ನೇ ಸಾಲಿನಲ್ಲಿ ರೂ.132.00 ಲಕ್ಷಗಳ ಅನುದಾನವನ್ನು ಪ್ರತ್ಯೇಕವಾಗಿ ನಿಗದಿಪಡಿಸಲಾಗಿರುತ್ತದೆ. ಇದರಲ್ಲಿ ಏಪ್ರಿಲ್-2016ರಿಂದ ಮಾರ್ಚ್-2017ಕ್ಕೆ ರೂ.102.11 ಲಕ್ಷಗಳು ವೆಚ್ಚವಾಗಿರುತ್ತದೆ.<br>ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿರುವ ಸ್ನಾತಕೋತ್ತರ ವಿಭಾಗಗಳಿಗೆ 2016-17ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರ ವೇತನಕ್ಕೆ ವಿಭಾಗವಾರು ಅನುದಾನವನ್ನು ಪ್ರತ್ಯೇಕವಾಗಿ ಹಂಚಿಕೆ ಮಾಡಿದ್ದು, (ಅನ್ವಯಿಕ ರಸಾಯನಶಾಸ್ತ್ರ ವಿಭಾಗಕ್ಕೆ ರೂ.4.75 ಲಕ್ಷ, ರಸಾಯನಶಾಸ್ತ್ರ ವಿಭಾಗಕ್ಕೆ ರೂ.10.86 ಲಕ್ಷ, ಜೈವಿಕ ತಂತ್ರಜ್ಞಾನ ವಿಭಾಗಕ್ಕೆ ರೂ.7.50 ಲಕ್ಷ, ಔದ್ಯೋಗಿಕ ರಸಾಯನಶಾಸ್ತ್ರ ವಿಭಾಗಕ್ಕೆ ರೂ.10.15 ಲಕ್ಷ ಹಾಗೂ ಪ್ರವಾಸೋದ್ಯಮ ಮತ್ತು ಆಡಳಿತ ವಿಭಾಗಕ್ಕೆ ರೂ.16.00 ಲಕ್ಷಗಳು) ಒಟ್ಟು ರೂ.49.26 ಲಕ್ಷಗಳನ್ನು ನಿಗದಿಪಡಿಸಲಾಗಿದೆ. ಇದರಲ್ಲಿ ವಿಭಾಗವಾರು ಒಟ್ಟು ರೂ.31.84 ಲಕ್ಷಗಳ ಅನುದಾನ ವೆಚ್ಚವಾಗಿರುತ್ತದೆ.<br>ಮೇಲ್ಕಂಡ ವಿವರಣೆಯನ್ನು ಅವಗಾಹನೆಗೆ ತರುತ್ತಾ, 2016-17ನೇ ಸಾಲಿನ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಸ್ನಾತಕ ಮತ್ತು ಸ್ನಾತಕೋತ್ತರ ವಿಭಾಗಗಳಿಗೆ ಅತಿಥಿ ಉಪನ್ಯಾಸಕರ ವೇತನಕ್ಕೆ ಆಯವ್ಯಯದಲ್ಲಿ ನಿಗದಿಪಡಿಸಿದ ಶೀರ್ಷಿಕೆಯ ಅನುದಾನದ ಮಿತಿಯಲ್ಲಿಯೇ ಪಾವತಿಸಲಾಗಿರುತ್ತದೆ.<br>ಕ್ರ.ಸಂ.3 ಮತ್ತು 4ಕ್ಕೆ ಸಂಬಂಧಿಸಿದಂತೆ, 2016-17ನೇ ಸಾಲಿನ ಆಯ-ವ್ಯಯದಲ್ಲಿ ಪರೀಕ್ಷಾ ವೆಚ್ಚಗಳಿಗಾಗಿ ರೂ.1500.00 ಲಕ್ಷಗಳನ್ನು ಕಲ್ಪಿಸಲಾಗಿದೆ. ಸದರಿ ಆಯವ್ಯಯದಲ್ಲಿ ಪರೀಕ್ಷೆಗೆ ಸಂಬಂಧಿಸಿದಂತೆ ವಿವಿಧ ಕಾರ್ಯಗಳಿಗಾಗಿ ಅಂದಾಜು ಮೊಬಲಗನ್ನು ನಮೂದಿಸಲಾಗಿದೆ. ಆದರೆ, ಈ ಆರ್ಥಿಕ ಸಾಲಿನಲ್ಲಿ ಒಟ್ಟಾರೆ ವೆಚ್ಚ ರೂ.1385.21 ಲಕ್ಷಗಳಾಗಿದ್ದು, ಆಯವ್ಯಯದಲ್ಲಿ ಕಲ್ಪಿಸಿರುವ ಮೊತ್ತಕ್ಕಿಂತ ಹೆಚ್ಚುವರಿಯಾಗಿ ವೆಚ್ಚವಾಗಿರುವುದಿಲ್ಲ. 2016-17ನೇ ಸಾಲಿನ ಆಯವ್ಯಯವನ್ನು 2017-18ನೇ ಸಾಲಿನಲ್ಲಿ ಪರಿಷ್ಕರಿಸಲಾಗಿದೆ. ಆದಕಾರಣ, ಕಂಡಿಕೆ ಕೈಬಿಡಲು ಕೋರಿದೆ. |
| **13** | **ಇಡುಗಂಟು ಮತ್ತು ನಿಗದಿತ ಭದ್ರತಾ ಠೇವಣಿ ವಿವರಗಳು. ರೂ.78,14,065-00 (ಆಕ್ಷೇಪಣೆ), ರೂ.38000-00 (ವಸೂಲಾತಿ)**<br>2015-16 ಮತ್ತು 2016-17ನೇ ಸಾಲಿನಲ್ಲಿ ರೂ.78,14,065-00ಗಳನ್ನು ಮರು ಪಾವತಿ ಮಾಡಲಾಗಿದೆ. ವಿವರವು **ಅನುಬಂಧ-4**ರಲ್ಲಿ ನಮೂದಾಗಿರುತ್ತದೆ.<br>ಕಾಮಗಾರಿ ಅವಧಿ ಪೂರ್ಣವಾದ ನಂತರ ಇ.ಎಂ.ಡಿ./ ಎಫ್.ಎಸ್.ಡಿ., ಇತ್ಯಾದಿಗಳಿಗೆ ಮರು ಪಾವತಿಸಲು (Refund of Security Deposit/ EMD) ಸಂಬಂಧಪಟ್ಟ ತಾಂತ್ರಿಕ ಅಧಿಕಾರಿಗಳಿಂದ ಮರು ಪಾವತಿ ಬಿಲ್‌ಗೆ (Refund of Deposit) ದೃಢೀಕರಣದೊಂದಿಗೆ ಸಲ್ಲಿಸಿದ ನಂತರ ಕ್ಲೇಮ್ ಪಾವತಿಗೆ ಕ್ರಮಕೈಗೊಳ್ಳಬೇಕಾಗಿರುತ್ತದೆ. ಸದರಿ ನಿಯಮವನ್ನು ಪಾಲಿಸದೆ ರೂ.78,14,065-00ಗಳನ್ನು ಮರು ಪಾವತಿ ಮಾಡಲಾಗಿದೆ. ಸದರಿ ಪಾವತಿಯ ಮೊತ್ತ ರೂ.78,14,065-00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.<br>ಡಿಪಾಸಿಟ್ ವಹಿಯಲ್ಲಿ ಇದ್ದ ಇ.ಎಂ.ಡಿ./ ಎಫ್.ಎಸ್.ಡಿ. ಮೊತ್ತವನ್ನು ಮರು ಪಾವತಿ ಮಾಡಿದ ನಂತರ ಡಿಪಾಸಿಟ್ ಕ್ಲೇಮು ಐಟಂಗಳನ್ನು ಸೊನ್ನೆ ಗುರುತು ಮಾಡಿ ಬಾಕಿ ಇರುವುದಿಲ್ಲವೆಂದು ನಮೂದಿಸತಕ್ಕದ್ದು ಹಾಗೂ ನಗದು ಪುಸ್ತಕದಲ್ಲಿನ ವೋಚರ್ ಅನ್ನು ಸಹ ಸೊನ್ನೆ ಗುರುತು ಮಾಡುವುದರಿಂದ 2ನೇ ಸಲ ಮರು ಪಾವತಿಗೆ ಅವಕಾಶವಿರುವುದಿಲ್ಲ (Double payment).<br>ಇ.ಎಂ.ಡಿ. ಮೊತ್ತ ರೂ.38,000-00ಗಳನ್ನು ಡಿ.ಡಿ. ನಂ.601805, ದಿನಾಂಕ:30-12-2006ರಲ್ಲಿ ಶ್ರೀ ಶಬ್ಬೀರ್ ಬಾಷ ಅವರಿಂದ "Construction of 1st Floor MBA Building at PG Centre, Davanagere" ಕಾಮಗಾರಿಯ ಟೆಂಡರ್‌ಗಾಗಿ ಪಡೆದಿರುವುದು ವೋಚರ್‌ನಲ್ಲಿ ನಮೂದಾಗಿರುತ್ತದೆ. ಶ್ರೀ ಶಬ್ಬೀರ್ ಬಾಷರವರ ಸದರಿ ಮೊತ್ತವನ್ನು ಮರು ಪಾವತಿಸಲು ದಿನಾಂಕ:15-09-2015ರಂದು ಮನವಿ ಮಾಡಿರುತ್ತಾರೆ. ಆದರೆ, ಸದರಿ ಮೊತ್ತವು ವಿಶ್ವವಿದ್ಯಾಲಯದ ಬ್ಯಾಂಕ್ ಖಾತೆಗೆ ಜಮೆ ಆಗಿರುವುದಕ್ಕೆ ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಆದ್ದರಿಂದ, ರೂ.38,000-00ಗಳನ್ನು ಸಂಬಂಧಪಟ್ಟವರಿಂದ ವಸೂಲಾತಿಗೆ ಸೂಚಿಸಿದೆ. |
| **ಅನುಪಾಲನಾ ವರದಿ** | ಹಣಕಾಸು ವಿಭಾಗದಲ್ಲಿ ಇ.ಎಂ.ಡಿ. ಹಾಗೂ ಎಫ್.ಎಸ್.ಡಿ. ವಹಿಗಳನ್ನು 2017-18ನೇ ಸಾಲಿನಿಂದ ನಿರ್ವಹಿಸಲಾಗುತ್ತಿದೆ. ಆಡಿಟ್ ಆಕ್ಷೇಪಣೆಯಂತೆ ಅದರನ್ವಯ ಪಾವತಿಯ ವಿವರಗಳನ್ನು ನಮೂದಿಸಲಾಗುತ್ತಿದೆ.<br>ಶ್ರೀ ಶಬ್ಬೀರ್ ಬಾಷ ಅವರಿಂದ "Construction of 1st Floor MBA Building at PG Centre, Davanagere" ಕಾಮಗಾರಿಯ ಟೆಂಡರ್‌ಗಾಗಿ ಪಡೆದಿರುವುದು ವೋಚರ್‌ನಲ್ಲಿ ನಮೂದಾಗಿರುವ ಮೊತ್ತವನ್ನು ಶ್ರೀ ಶಬ್ಬೀರ್ ಬಾಷರವರಿಂದ ರೂ.38,000-00ಗಳನ್ನು ವಸೂಲಿಸಲು ಕ್ರಮಕೈಗೊಳ್ಳಲಾಗಿದೆ.<br>ಆದಕಾರಣ ಕಂಡಿಕೆ ಕೈಬಿಡಲು ಕೋರಿದೆ. |

| | |
|---|---|
| **14(1)** | **ಕೆಳದಿ ಪ್ರಾಚ್ಯ ವಸ್ತುಸಂಗ್ರಹಾಲಯಕ್ಕೆ ವಿಶ್ವವಿದ್ಯಾಲಯದಿಂದ ವೆಚ್ಚಗಳನ್ನು ಭರಿಸಿರುವುದು ಹಾಗೂ ಸಿಬ್ಬಂದಿಗೆ ವೇತನ ಪಾವತಿಸಿರುವುದು. ರೂ.20,73,961–00(ಆಕ್ಷೇಪಣೆ) ಮತ್ತು ರೂ.1,19,848–00 (ವಸೂಲಾತಿ)**<br><br>ಕೆಳದಿ ಪ್ರಾಚ್ಯ ವಸ್ತುಸಂಗ್ರಹಾಲಯವನ್ನು ಸರ್ಕಾರದ ಆದೇಶ ಸಂಖ್ಯೆ: ಕೆಇ/239/ ಕೆ.ಎಂ.ಯು. 2005 ಮತ್ತು ದಿನಾಂಕ:27–06–2006ರಂದು ನಡೆದ ಸಿಂಡಿಕೇಟ್ ಸಭೆಯ ನಿರ್ಣಯದನ್ವಯ ಕೆಳದಿ ವಸ್ತುಸಂಗ್ರಹಾಲಯವನ್ನು 10 ವರ್ಷಗಳ ಅವಧಿಗೆ ವಿಶ್ವವಿದ್ಯಾಲಯದ ಸುಪರ್ದಿಗೆ ವಹಿಸಿ ಪ್ರತೀ ವರ್ಷ ನಿರ್ವಹಣೆಗಾಗಿ ಸರ್ಕಾರದ ಪ್ರಾಚ್ಯ ವಸ್ತುಸಂಗ್ರಹಾಲಯ ಇಲಾಖೆಯಿಂದ ರೂ.7.63 ಲಕ್ಷಗಳನ್ನು ಪಾವತಿಸುವ ಒಡಂಬಡಿಕೆಯಾಗಿರುತ್ತದೆ. ಈ ಬಗ್ಗೆ ವಿಚಾರಣೆ ಪತ್ರಸಂಖ್ಯೆ:12, ದಿನಾಂಕ:10–04–2018ರಲ್ಲಿ ವಿವರಣೆ ನೀಡಲು ಸೂಚಿಸಲಾಗಿತ್ತು.<br><br>2015–16 ಮತ್ತು 2016–17ನೇ ಸಾಲಿಗೆ ಸರ್ಕಾರದಿಂದ ಯಾವುದೇ ಅನುದಾನ ಬಿಡುಗಡೆಯಾಗದಿದ್ದರೂ 2015–16ರಲ್ಲಿ ರೂ.5,59,173–00 ಮತ್ತು 2016–17ರಲ್ಲಿ ರೂ.5,30,000–00 ಗಳನ್ನು ಖರ್ಚು ಮಾಡಿದ್ದು, ಸರ್ಕಾರದಿಂದ ಅನುದಾನವನ್ನು ಮರುಭರಿಕೆ ಮಾಡಿಕೊಳ್ಳುವವರೆಗೂ ರೂ.10,89,173–00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. |
| **ಅನುಪಾಲನಾ ವರದಿ** | ಕರ್ನಾಟಕ ಸರ್ಕಾರದ ನಡವಳಿಗಳ ಆದೇಶ ಸಂಖ್ಯೆ: ಸಂಕಿ 239 ಕೆಎಂಯು 2005, ಬೆಂಗಳೂರು, ದಿನಾಂಕ:27–06–2006ರ ಪ್ರಕಾರ ಕೆಳದಿ ವಸ್ತುಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರ, ಕೆಳದಿ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ ಇದನ್ನು ಕುವೆಂಪು ವಿಶ್ವವಿದ್ಯಾನಿಲಯದ ಅಡಿಯಲ್ಲಿಯೇ ವಿಲೀನಕ್ಕೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯು ಪ್ರತಿ ವರ್ಷ ರೂ.7.63 ಲಕ್ಷಗಳ ಅನುದಾನ ಹತ್ತು ವರ್ಷಗಳಿಗೆ ವಿಶ್ವವಿದ್ಯಾನಿಲಯಕ್ಕೆ ನೀಡಲು ಒಪ್ಪಿರುತ್ತದೆ.<br><br>ಈ ಆದೇಶವು ಸರ್ಕಾರದ ಹಂತದಲ್ಲಿ ಅನುಮೋದನೆಯಾಗಿರುವುದರಿಂದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಯಾಗದೆ ನೇರವಾಗಿ ಸಲ್ಲಿಸಲಾಗಿರುತ್ತದೆ. ಈ ಕುರಿತು ವಿಶ್ವವಿದ್ಯಾನಿಲಯದ ಹತ್ತು ವರ್ಷದ ಒಡಂಬಡಿಕೆ ಮುಗಿದ ನಂತರ ವಿಶ್ವವಿದ್ಯಾನಿಲಯದ ಪತ್ರಸಂಖ್ಯೆ:ಕುವಿ:ಮಾಸನಿ–7:1287:2016–17, ದಿನಾಂಕ:15/18–06–2016ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರಿಗೆ ಕೆಳದಿ ವೇತನ ಭತ್ಯೆಗೆ ಸಂಬಂಧಿಸಿದಂತೆ ಅನುದಾನ ಬಿಡುಗಡೆ ಮಾಡಲು ಕೋರಲಾಗಿತ್ತು. ಅದರಂತೆ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರ ಪತ್ರಸಂಖ್ಯೆ:ಇಡಿ 13 ಯುಎಸ್‌ವಿ 2015, ದಿನಾಂಕ:18–02–2017ರಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗಳಿಗೆ ಕೆಳದಿಗೆ ಅನುದಾನ ಬಿಡುಗಡೆ ಮಾಡಲು ದಿನಾಂಕ:22–02–2017ರಂದು ಸಭೆಯನ್ನು ಕರೆದಿದ್ದರು.<br><br>ದಿನಾಂಕ:22–02–2017ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯ ನಡಾವಳಿಯಲ್ಲಿ ಕೆಳದಿ ವಸ್ತುಸಂಗ್ರಹಾಲಯಗಳ ಇತಿಹಾಸ ಮತ್ತು ಸಂಶೋಧನಾ ಕೇಂದ್ರದ ವಾರ್ಷಿಕ ವೆಚ್ಚವು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲ ಕೊರತೆಯಿಂದ ಭರಿಸಲು ಕಷ್ಟ ಸಾಧ್ಯವಾಗುವುದರಿಂದ ಕನ್ನಡ ಮತ್ತು ಸಂಸ್ಕೃತ ಪ್ರಾಚ್ಯ ವಸ್ತು ಇಲಾಖೆಯು ಕೆಳದಿ ಸಂಸ್ಥಾನಕ್ಕೆ ತ್ವರಿತವಾಗಿ ಬಾಕಿ ಅನುದಾನವನ್ನು ಬಿಡುಗಡೆಗೊಳಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು.<br><br>ಹೆಚ್ಚುವರಿ ಅನುದಾನವನ್ನು ಬಿಡುಗಡೆಗೊಳಿಸಲಾಗದ ಪಕ್ಷದಲ್ಲಿ ಸದರಿ ಸಂಸ್ಥೆ(ಕೆಳದಿ) ಯನ್ನು ಕನ್ನಡ ಮತ್ತು ಸಂಸ್ಕೃತಿ / ಪ್ರಾಚ್ಯ ವಸ್ತು ಇಲಾಖೆಯು ತಮ್ಮ ಅಧೀನಕ್ಕೆ ಪಡೆದುಕೊಳ್ಳಬಹುದಾಗಿದೆಯೆಂದು ಅಭಿಪ್ರಾಯ ವ್ಯಕ್ತಪಡಿಸಿರುತ್ತಾರೆ.<br><br>ಈ ಕುರಿತು ವಿಶ್ವವಿದ್ಯಾಲಯದಿಂದ ಪತ್ರಸಂಖ್ಯೆ: ಕುವಿ: ಮಾಸನಿ–7: 7380: 2017–18: ದಿನಾಂಕ: 12–03–2018ರಲ್ಲಿ ಸರ್ಕಾರದ ಕಾರ್ಯದರ್ಶಿಗಳು, ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು – ಇವರಿಗೆ ದಿನಾಂಕ:22–02–2017ರಂದು ಜರುಗಿದ ನಡವಳಿಯಂತೆ ಹಾಗೂ ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು – ಇವರು ತಿಳಿಸಿರುವಂತೆ ತಮ್ಮಿಂದ ಇದುವರೆವಿಗೂ ವಿಶ್ವವಿದ್ಯಾಲಯಕ್ಕೆ ಯಾವುದೇ ಅನುದಾನ ಬಿಡುಗಡೆಯಾಗದೇ ಇರುವುದರಿಂದ ಹಾಗೂ ಈಗಾಗಲೇ ಸಾಕಷ್ಟು ವಿಳಂಬವಾಗಿರುವುದರಿಂದ ಕೆಳದಿ ವಸ್ತು ಸಂಗ್ರಹಾಲಯವನ್ನು ತಮ್ಮ ವಶಕ್ಕೆ ಪಡೆದುಕೊಳ್ಳಲು ಕೋರಲಾಗಿದೆ.<br><br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |

<table>
<tr><td>14(2)</td><td>ದಿನಾಂಕ:27–06–2006ರಲ್ಲಿ ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದ ಪ್ರಕಾರ ಕೆಳದಿ ವಸ್ತುಸಂಗ್ರಹಾಲಯದ ನೌಕರರಿಗೆ ದಿನಾಂಕ 27–06–2006ರಿಂದ 10 ವರ್ಷಗಳ ಅವಧಿಗೆ ವೇತನ ಅನುದಾನವನ್ನು ವಿಶ್ವವಿದ್ಯಾಲಯ ಪಾವತಿಸಲು ಅನುಮೋದಿಸಿದ್ದು, ಸದರಿ ಅವಧಿಯು ದಿನಾಂಕ: 26–06–20016ಕ್ಕೆ ಮುಕ್ತಾಯವಾಗಿದ್ದು, ಸರ್ಕಾರದ ಅನುದಾನದ ಬಗ್ಗೆ ಅಥವಾ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯದೇ 2016–17ನೇ ಸಾಲಿಗೆ ವೇತನ ಪಾವತಿಸಲಾಗಿದೆ. ವಿಶ್ವವಿದ್ಯಾಲಯದಿಂದ ಅನುದಾನದ ಕುರಿತು ಸರ್ಕಾರಕ್ಕೆ ಪತ್ರ ಬರೆದಿರುವುದಾಗಿ ತಿಳಿಸಲಾಗಿದ್ದು, ಈ ಬಗ್ಗೆ ಸರ್ಕಾರದಿಂದ ಯಾವುದೇ ಉತ್ತರ ಬಂದಿರುವುದಿಲ್ಲವಾದ್ದರಿಂದ, ಜುಲೈ–2016 ರಿಂದ ಮಾರ್ಚ್–2017 ರವರೆಗೆ ಪಾವತಿಸಿರುವ ವೇತನ ರೂ.20,73,961–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ಕಾಲಮಿತಿ ವೇತನ ಬಡ್ತಿ, ಹೆಚ್ಚುವರಿ ವೇತನ ಬಡ್ತಿ ಮತ್ತು ಸ್ವಯಂ ಚಾಲಿತ ವೇತನ ಬಡ್ತಿ ನೀಡಿರುವ ರೂ.1,19,848–00 ಗಳನ್ನು ವಸೂಲಾತಿಗೆ ಸೂಚಿಸಿದೆ.</td></tr>
<tr><td>ಅನುಪಾಲನಾ ವರದಿ</td><td>ಕರ್ನಾಟಕ ಸರ್ಕಾರದ ನಡವಳಿಗಳ ಆದೇಶ ಸಂಖ್ಯೆ: ಸಂಕಿ 239 ಕೆಎಂಯು 2005, ಬೆಂಗಳೂರು, ದಿನಾಂಕ:27–06–2006ರ ಪ್ರಕಾರ ಕೆಳದಿ ವಸ್ತುಸಂಗ್ರಹಾಲಯ ಮತ್ತು ಇತಿಹಾಸ ಸಂಶೋಧನಾ ಕೇಂದ್ರ, ಕೆಳದಿ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ ಇದನ್ನು ಕುವೆಂಪು ವಿಶ್ವವಿದ್ಯಾನಿಲಯದ ವಿಲೀನಕ್ಕೆ ಸಂಬಂಧಿಸಿದಂತೆ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯು ಪ್ರತಿ ವರ್ಷ ರೂ.7.63 ಲಕ್ಷಗಳ ಅನುದಾನ ಹತ್ತು ವರ್ಷಗಳಿಗೆ ವಿಶ್ವವಿದ್ಯಾನಿಲಯಕ್ಕೆ ನೀಡಲು ಒಪ್ಪಿರುತ್ತದೆ.<br><br>ಈ ಆದೇಶವು ಸರ್ಕಾರದ ಹಂತದಲ್ಲಿ ಅನುಮೋದನೆ ಯಾಗಿರುವುದರಿಂದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆಗೆ ನೇರವಾಗಿ ಸಲ್ಲಿಸಲಾಗಿರುತ್ತದೆ. ಈ ಕುರಿತು ವಿಶ್ವವಿದ್ಯಾನಿಲಯದ ಹತ್ತು ವರ್ಷದ ಒಡಂಬಡಿಕೆ ಮುಗಿದ ನಂತರ ವಿಶ್ವವಿದ್ಯಾನಿಲಯದ ಪತ್ರಸಂಖ್ಯೆ: ಕುವಿ: ಮಾಸನಿ–7:1287: 2016–17, ದಿನಾಂಕ:15/18–06–2016ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಇವರಿಗೆ ಕೆಳದಿ ವೇತನ ಭತ್ಯೆಗೆ ಸಂಬಂಧಿಸಿದಂತೆ ಅನುದಾನ ಬಿಡುಗಡೆ ಮಾಡಲು ಕೋರಲಾಗಿತ್ತು. ಕೆಳದಿ ಮತ್ತು ಇತಿಹಾಸ ಸಂಶೋಧನಾ ಕೇಂದ್ರದ ಸಿಬ್ಬಂದಿಗಳ ವೇತನ ಹಾಗೂ ಇತರೆ ಭತ್ಯೆಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ವೆಚ್ಚ ಭರಿಸುವುದು ಕಷ್ಟಸಾಧ್ಯವೆಂಬ ಅಂಶವನ್ನು ಸದರಿಯವರ ಅವಗಾಹನೆಗೆ ತರುತ್ತಾ ಈ ವಿಷಯದ ಬಗ್ಗೆ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಆಡಳಿತ ಶಾಖೆ), ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರೊಂದಿಗೆ ಸಮಾಲೋಚಿಸಿ ಸಭೆಯನ್ನು ಏರ್ಪಡಿಸಿ ನಿರ್ಣಯ ಕೈಗೊಳ್ಳಲು ಸರ್ಕಾರಕ್ಕೆ ಪತ್ರ ಬರೆಯಲಾಗಿದೆ.<br><br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ.</td></tr>
<tr><td>15</td><td>ಕಡೂರಿನಲ್ಲಿರುವ ಸ್ನಾತಕೋತ್ತರ ಕೇಂದ್ರ ನಿರ್ದೇಶಕರಿಗೆ ಮಾಹೆಯಾನ ಸ್ಥಳೀಯ ಭತ್ಯೆ ಮತ್ತು ಗೌರವ ಸಂಭಾವನೆ ಪಾವತಿಸಿರುವುದು. ರೂ.54,000–00 (ವಸೂಲಾತಿ)<br><br>ಕಡೂರು ಸ್ನಾತಕೋತ್ತರ ನಿರ್ದೇಶಕರರಿಗೆ ಮಾಹೆಯಾನ ಸ್ಥಳೀಯ ಭತ್ಯೆ ಮತ್ತು ಗೌರವ ಸಂಭಾವನೆ ಪಾವತಿಸಿದ್ದು, ಯು.ಜಿ.ಸಿ. ವೇತನ ಪಡೆಯುತ್ತಿರುವ ಅಧ್ಯಾಪಕರುಗಳಿಗೆ ಯಾವುದೇ ಗೌರವ ಸಂಭಾವನೆ ಇರುವುದಿಲ್ಲವಾದ್ದರಿಂದ, ಆದೇಶ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ, 2015–16ನೇ ಸಾಲಿನಲ್ಲಿ ಪಾವತಿಸಿದ ರೂ.36,000–00 ಮತ್ತು 2016–17ನೇ ಸಾಲಿನಲ್ಲಿ ಪಾವತಿಸಿದ ರೂ.18,000–00ಗಳನ್ನು ಒಟ್ಟು ರೂ.54,000–00ಗಳನ್ನು ವಸೂಲಾತಿಗೆ ಸೂಚಿಸಿದೆ.<br><br>ಸ್ನಾತಕೋತ್ತರ ಕೇಂದ್ರದ ಹಾಸ್ಟೆಲ್ ಹಾಗೂ ವಿದ್ಯಾರ್ಥಿ ವೇತನ ವಹಿಗಳನ್ನು ಪರಿಶೀಲಿಸಲಾಗಿ ಕ್ರಮಬದ್ಧವಾಗಿ ದಾಖಲಾತಿ ನಿರ್ವಹಿಸಿರುವುದನ್ನು ಲೆಕ್ಕ ತನಿಖೆಯು ಪರಿಶೀಲಿಸಿದೆ.</td></tr>
<tr><td>ಅನುಪಾಲನಾ ವರದಿ</td><td>ವಿಶ್ವವಿದ್ಯಾನಿಲಯದ ಶೈಕ್ಷಣಿಕ ಅಭಿವೃದ್ಧಿ ಗುಣಮಟ್ಟ ಪಾಲನೆ ಹಾಗೂ ವಿಸ್ತರಣೆ ದೃಷ್ಟಿಯಿಂದ ಪೂರಕವಾದ ಕೆಲವು ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲಾಗುತ್ತಿದೆ. ಈ ಚಟುವಟಿಕೆಗಳು ಶೈಕ್ಷಣಿಕ ಕ್ಷೇತ್ರದ ಪೂರಕ ಚಟುವಟಿಕೆಗಳಾದ್ದರಿಂದ ವಿಶ್ವವಿದ್ಯಾನಿಲಯದ ದೃಷ್ಟಿಯಿಂದ ಅನುಷ್ಠಾನಗೊಳಿಸುವುದು ಅನಿವಾರ್ಯವಾದ್ದರಿಂದ ಇಂತಹ ಕಾರ್ಯಕ್ರಮಗಳ ಮೇಲುಸ್ತುವಾರಿ ವಹಿಸಿ ನಿರ್ವಹಿಸುವ ದೈನಂದಿನ ಕಾರ್ಯಕ್ರಮಗಳ ಜೊತೆಗೆ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುವುದರಿಂದ ಅವರುಗಳಿಗೆ ಪ್ರತ್ಯೇಕವಾಗಿ ಮಾಹೆಯಾನ ಗೌರವಧನ ನೀಡುವುದು ಅನಿವಾರ್ಯವಾಗಿರುತ್ತದೆ.<br><br>2017–18ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯವು ಸ್ಥಳೀಯ ಭತ್ಯೆ ಮತ್ತು ಗೌರವಧನ ನೀಡುವುದನ್ನು ನಿಲ್ಲಿಸಲಾಗಿದೆ.<br><br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ.</td></tr>
</table>

| | |
|---|---|
| **16** | **ಶ್ರೀಮದ್ ರಂಭಾಪುರಿ ಪ್ರಥಮ ದರ್ಜೆ ಕಾಲೇಜು ಖಾತೆಯಲ್ಲಿ ವಿದ್ಯಾರ್ಥಿಗಳಿಗೆ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ದಿನಭತ್ಯೆ ನೀಡಿರುವುದು. ರೂ.38,247–00 (ಆಕ್ಷೇಪಣೆ)**<br><br>ವಿದ್ಯಾರ್ಥಿಗಳಿಗೆ ಕ್ರೀಡಾಕೂಟಗಳಲ್ಲಿ ಭಾಗವಹಿಸಲು ದಿನಭತ್ಯೆ ನೀಡಲು ಎ.ಸಿ. ಬಿಲ್ ಮೂಲಕ ಮುಂಗಡವಾಗಿ ಪಡೆಯಲಾಗಿದ್ದು, ಧನಾದೇಶ ಸಂಖ್ಯೆ: 866569/24–08–2016, ರೂ.7,500–00, ಧನಾದೇಶ ಸಂಖ್ಯೆ:866574/08–09–2016, ರೂ.18,247–00, ಧನಾದೇಶ ಸಂಖ್ಯೆ:866513/05–02–2016, ರೂ.5,500–00 ಮತ್ತು ಧನಾದೇಶ ಸಂಖ್ಯೆ:866522/01–03–2016, ರೂ.7,000–00 ಒಟ್ಟು ರೂ.38,247–00ಗಳನ್ನು ಪಾವತಿ ಮಾಡಿದ್ದು, 2015–16ನೇ ಸಾಲಿಗೆ ದಿನಭತ್ಯೆಯನ್ನು ನೀಡುವುದಕ್ಕೆ ಸಕ್ಷಮ ಪ್ರಾಧಿಕಾರದ ಮಂಜೂರಾತಿ ಆದೇಶವಿರುವುದಿಲ್ಲ. ಆದ್ದರಿಂದ, ರೂ.38,247–00ಗಳ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ. |
| **ಅನುಪಾಲನಾ ವರದಿ** | ಆದೇಶ ಸಂಖ್ಯೆ:ಕುವಿ:ದೈಶಿನಿ:1140:2016–17, ದಿನಾಂಕ:18–02–2017 ರಂದು 2015–16ನೇ ಸಾಲಿನಿಂದ ಪೂರ್ವಾನ್ವಯವಾಗುವಂತೆ ಅಂತರ ಕಾಲೇಜು ಪಂದ್ಯಾವಳಿಗಳಲ್ಲಿ ಭಾಗವಹಿಸುವ ಸ್ನಾತಕೋತ್ತರ ಕ್ರೀಡಾಪಟುಗಳು ಹಾಗೂ ದೈಹಿಕ ಶಿಕ್ಷಣ ವಿಭಾಗದ ಕ್ರೀಡಾಪಟುಗಳಿಗೆ ಒಂದು ದಿನಕ್ಕೆ ರೂ.100–00ರಂತೆ ದಿನಭತ್ಯೆ ಪಾವತಿಸಲು ಆದೇಶ ನೀಡಲಾಗಿದೆ. ಸದರಿ ವೆಚ್ಚವನ್ನು ವಿಶ್ವವಿದ್ಯಾನಿಲಯದ ಕ್ರೀಡಾ ಉಪಕರಣಗಳು/ ಅಭಿವೃದ್ಧಿ ಚಟುವಟಿಕೆಗಳ ಶೀರ್ಷಿಕೆಯಡಿ ವೆಚ್ಚ ಭರಿಸಿ ಪಾವತಿಸಲು ಮಂಜೂರಾತಿ ನೀಡಲಾಗಿರುತ್ತದೆ.<br><br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **17(1)** | **ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜಿನ ಪ್ರಾಂಶುಪಾಲರಿಗೆ ಸ್ಥಳೀಯ ಭತ್ಯೆ ಮತ್ತು ಗೌರವ ಸಂಭಾವನೆ ನೀಡಿರುವುದು. ರೂ.12,000–00(ವಸೂಲಾತಿ)**<br><br>ಪ್ರಾಂಶುಪಾಲರಿಗೆ ಮಾಹೆಯಾನ ಸ್ಥಳೀಯ ಭತ್ಯೆ ಮತ್ತು ಗೌರವ ಸಂಭಾವನೆ ಪಾವತಿಸಿದ್ದು, ಯು.ಜಿ.ಸಿ. ವೇತನ ಪಡೆಯುತ್ತಿರುವ ಅಧ್ಯಾಪಕರುಗಳಿಗೆ ಯಾವುದೇ ಗೌರವ ಸಂಭಾವನೆ ಇರುವುದಿಲ್ಲವಾದ್ದರಿಂದ, ಆದೇಶ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ, 2015–16ನೇ ಸಾಲಿನಲ್ಲಿ ಪಾವತಿಸಿದ ರೂ.12,000–00 ಗಳನ್ನು ವಸೂಲಿಸಲು ಸೂಚಿಸಿದೆ. |
| **ಅನುಪಾಲನಾ ವರದಿ** | ಪ್ರಾಂಶುಪಾಲರು ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಉಸ್ತುವಾರಿಯನ್ನು ಬೋಧಕ ವರ್ಗದವರಿಂದಲೇ ನಿರ್ವಹಿಸಬೇಕಾಗಿರುತ್ತದೆ. ಪ್ರಸ್ತುತ ಲಭ್ಯವಿರುವ ಅಧ್ಯಾಪಕ ವರ್ಗದಿಂದಲೇ ಕೆಲವು ಅಧ್ಯಯನ ವಿಭಾಗಗಳ ಉಸ್ತುವಾರಿಯನ್ನು ಶೈಕ್ಷಣಿಕ ಹಿತದೃಷ್ಟಿಯಿಂದ ಹಂಚಿಕೆ ಮಾಡಿದ್ದು, ಅಧ್ಯಾಪಕರುಗಳು ತಮ್ಮ ವಿಭಾಗಗಳ ಶೈಕ್ಷಣಿಕ/ ಸಂಶೋಧನಾ ಚಟುವಟಿಕೆಗಳ ನಿರ್ವಹಣೆ ಜೊತೆಗೆ ಪ್ರತಿಯೊಬ್ಬ ಅಧ್ಯಾಪಕರು ಹೆಚ್ಚುವರಿ ವಿಭಾಗಗಳ ಕಾರ್ಯಗಳನ್ನು ಪ್ರಾಂಶುಪಾಲರು ಮೇಲ್ವಿಚಾರಣೆ ಮಾಡುವ ಪ್ರಯುಕ್ತ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸ್ಥಳೀಯ ಭತ್ಯೆಯನ್ನು ಆಡಳಿತ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಪಾವತಿಸಲಾಗಿದೆ.<br><br>ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ:ದಾಖವಿ–2:2011–12/5190, ದಿನಾಂಕ:11–02–2012.<br><br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **17(2)** | **ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ದರಪಟ್ಟಿಯಿಲ್ಲದೆ ಮತ್ತು ದರಪಟ್ಟಿ ದರಕ್ಕಿಂತ ಹೆಚ್ಚುವರಿಯಾಗಿ ಪಾವತಿಸಿರುವುದು. ರೂ.1,22,231–00 (ಆಕ್ಷೇಪಣೆ) ಹಾಗೂ ರೂ.14,500–00 (ವಸೂಲಾತಿ)**<br><br>2016–17ನೇ ಸಾಲಿನಲ್ಲಿ ಧನಾದೇಶ ಸಂಖ್ಯೆ:892919, ದಿನಾಂಕ:21–07–2016ರಲ್ಲಿ ರೂ.70,162–00 ಗಳನ್ನು ರಾಯಲ್ ಆರ್ಕಿಡ್ ಹೋಟೆಲ್‌ಗೆ ಮತ್ತು ರೂ.52,069–00 ಗಳನ್ನು ಕನೌಜ್ ಹೋಟೆಲ್‌ಗೆ ಪಾವತಿಸಿದ್ದು, ಇದಕ್ಕೆ ಸಂಬಂಧಿಸಿದಂತೆ ವಿಚಾರಣಾ ಸಂಖ್ಯೆ:24, ದಿನಾಂಕ:28–04–2018ರಲ್ಲಿ ವಿವರಣೆ ನೀಡಲು ಸೂಚಿಸಿದ್ದರೂ ಯಾವುದೇ ದಾಖಲೆಗಳನ್ನು ಒದಗಿಸಿರುವುದಿಲ್ಲ. ಮುಂದುವರೆದು, ಇದೇ ವಿಚಾರಣಾ ಪತ್ರದಲ್ಲಿ ದರಪಟ್ಟಿಯ ದರಕ್ಕಿಂತ ಹೆಚ್ಚುವರಿಯಾಗಿ ರೂ.14,500–00ಗಳನ್ನು ಲಕ್ಷ್ಮಿ ಟ್ರಾವೆಲ್ಸ್, ಶಿವಮೊಗ್ಗ ಇವರಿಗೆ ಪಾವತಿಸಲಾಗಿದ್ದು, ಒಟ್ಟು ರೂ.1,22,231–00(70,162+52,069)ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಮತ್ತು ಹೆಚ್ಚುವರಿ ಪಾವತಿಸಿರುವ ಮೊತ್ತ ರೂ.14,500–00 ಗಳನ್ನು ವಸೂಲಾತಿಗೆ ಸೂಚಿಸಿದೆ. |

**ಅನುಪಾಲನಾ ವರದಿ**

ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜಿಗೆ ನ್ಯಾಕ್ ಪೀರ್ ಕಮಿಟಿ ಸದಸ್ಯರುಗಳು ಆಗಮಿಸಿದ್ದು, ಅವರುಗಳು ಕುಲಪತಿಗಳ ಸ್ಥಾನಮಾನದ ಗೌರವಾನ್ವಿತ ವ್ಯಕ್ತಿಗಳಾಗಿದ್ದರಿಂದ ರಾಯಲ್ ಆರ್ಕಿಡ್ ಹಾಗೂ ಕನೌಜ್ ಹೋಟೆಲ್ ಸ್ಟಾರ್ ಹೋಟೆಲ್‌ಗಳಲ್ಲಿ ವಸತಿ ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆ.

ಲಕ್ಷ್ಮಿ ಟ್ರಾವೆಲ್ಸ್, ಶಿವಮೊಗ್ಗ ಇವರ ದರಪಟ್ಟಿಯ ದರಕ್ಕಿಂತ ಹೆಚ್ಚುವರಿಯಾಗಿ ರೂ.14,500-00ಗಳನ್ನು ಪಾವತಿಸಲಾಗಿದೆ ಎಂದು ಆಕ್ಷೇಪಿಸಲಾಗಿದೆ. ಸದರಿ ನ್ಯಾಕ್ ಪೀರ್ ಕಮಿಟಿ ಸದಸ್ಯರುಗಳು ಕಾಲೇಜಿನ ವಿವಿಧ ಸ್ಥಳಗಳಿಗೆ ಸಂಚರಿಸಿದ್ದು, ದರಪಟ್ಟಿಯ ಆಧಾರದ ಮೇಲೆ ನಮೂದಿಸಿದ ಮೊತ್ತ ಪಾವತಿಸಿದೆ. ಯಾವುದೇ ಹೆಚ್ಚುವರಿ ಮೊತ್ತ ಪಾವತಿಸಿರುವುದಿಲ್ಲ.

ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ.

2015-16 ಮತ್ತು 2016-17ನೇ ಸಾಲಿನ ಲೆಕ್ಕ ತಪಾಸಣೆಯಲ್ಲಿ ಖರೀದಿಗಳಿಗೆ ಸಂಬಂಧಿಸಿದಂತೆ, ಕೆಲವು ನಿಯಮಗಳನ್ನು ಮೀರಿ ಖರೀದಿಸಿದ್ದು ಮತ್ತು ಎ.ಸಿ. ಹುಂಡಿಯಲ್ಲಿ ಮುಂಗಡವಾಗಿ ಪಡೆದ ಮೊತ್ತಗಳಿಗೆ ಲೆಕ್ಕ ಹೊಂದಾಣಿಕೆಗೆ ಎನ್.ಡಿ.ಸಿ. ಬಿಲ್‌ಗಳನ್ನು ತಡವಾಗಿ ಸಲ್ಲಿಸಿರುವುದನ್ನು ತೀವ್ರವಾಗಿ ಆಕ್ಷೇಪಿಸಲಾಗಿದೆ.

**ಅನುಪಾಲನಾ ವರದಿ**

2015-16 ಮತ್ತು 2016-17ನೇ ಸಾಲಿನಲ್ಲಿ ಖರೀದಿಗೆ ಸಂಬಂಧಿಸಿದಂತೆ ಎ.ಸಿ. ಹುಂಡಿಯಲ್ಲಿ ಮುಂಗಡವಾಗಿ ಹಣ ಪಡೆದ ಮೊತ್ತಕ್ಕೆ ಎನ್.ಡಿ.ಸಿ. ಬಿಲ್ಲುಗಳನ್ನು ತಡವಾಗಿ ಸಲ್ಲಿಸಿದವರ ಮೇಲೆ ನೋಟೀಸ್ ನೀಡಿ, ಇನ್ನುಮುಂದೆ ನಿಗದಿತ ಸಮಯದೊಳಗೆ ಎನ್.ಡಿ.ಸಿ. ಬಿಲ್ ಸಲ್ಲಿಸಲು ಸೂಚಿಸಿದೆ.

ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ.

**18(1)**

**ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ವಿದ್ಯುತ್ ಬಿಲ್‌ಗಳಿಗೆ ಹೆಚ್ಚುವರಿಯಾಗಿ ಪಾವತಿಸಿರುವುದು. ರೂ.12,213-00 (ವಸೂಲಾತಿ)**

1. ಮೆಸ್ಕಾಂ ವಿದ್ಯುತ್ ಬಿಲ್‌ಗಳಿಗೆ ಸಂಬಂಧಿಸಿದಂತೆ, ಕೆಲವೊಂದು ಬಿಲ್‌ಗಳ ಮೊತ್ತದೊಂದಿಗೆ Interest Charges for Revenue Overdue ಎಂದು ಹೆಚ್ಚುವರಿಯಾಗಿ ರೂ.12,213-00ಗಳನ್ನು ಪಾವತಿ ಮಾಡಲಾಗಿರುತ್ತದೆ. ವಿವರ ಕೆಳಕಂಡಂತಿದೆ. (ಆಡಿಟ್ ವಿಚಾರಣೆ ಸಂಖ್ಯೆ: 40)

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ ರೂ. | Interest on Revenue Overdue Rs. |
|---|---|---|---|
| 01 | 118926/22-07-2015 | 113344.00 | 1337.00 |
| 02 | 118948/25-08-2015 | 120983.00 | 258.00 |
| 03 | 118995/02-12-2015 | 138499.00 | 1357.00 |
| 04 | 119001/23-12-2015 | 111262.00 | 1383.00 |
| 05 | 119013/20-01-2016 | 107919.00 | 1111.00 |
| 06 | 119050/31-03-2016 | 158033.00 | 556.00 |
| 07 | 893047/11-08-2016 | 116731.00 | 1352.00 |
| 08 | 893134/30-01-2017 | 120931.00 | 288.00 |
| 09 | 893095/16-11-2017 | 119678.00 | 420.00 |
| 10 | 893069/05-09-2016 | 130709.00 | 1574.00 |
| 11 | 893081/13-10-2016 | 135717.00 | 100.00 |
| 12 | 569752/17-02-2017 | 132612.00 | 645.00 |
| 13 | 118967/07-10-2015 | 149726.00 | 390.00 |
| 14 | 118982/02-11-2015 | 156169.00 | 1442.00 |
| **ಹೆಚ್ಚುವರಿಯಾಗಿರುವ ಒಟ್ಟು ಮೊತ್ತ ರೂ.** | | | **12213.00** |

ಹೀಗೆ ಹೆಚ್ಚುವರಿಯಾಗಿ ಪಾವತಿಸಿರುವ ವಿದ್ಯುತ್ ಬಿಲ್‌ಗಳ ಮೇಲಿರುವ ಮೊತ್ತ ರೂ.12,213-00ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.

**ಅನುಪಾಲನಾ ವರದಿ**

Interest on Revenue Overdue ಹೆಚ್ಚುವರಿಯಾಗಿ ರೂ.12,213-00 ಗಳ ಬಿಲ್ಲುಗಳು ಮೆಸ್ಕಾಂನಿಂದ ಬಂದನಂತರ ಸದರಿ ಬಿಲ್‌ಗಳನ್ನು ಡಿ.ಸಿ. ಬಿಲ್ ಮಾಡಿ ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿ ಅಲ್ಲಿಂದ ಬಂದಂತಹ ಡಿ.ಡಿ.ಗಳು ಮೆಸ್ಕಾಂ, ಶಿವಮೊಗ್ಗ ಇವರಿಗೆ ಕಳುಹಿಸಲು ತಡವಾಗಿರುತ್ತದೆ. ಮಾರ್ಚ್-2017ರ ವಿದ್ಯುಚ್ಛಕ್ತಿ ಬಿಲ್ ದಿನಾಂಕ:17-03-2017ರಂದು ಪಾವತಿಸಬೇಕಾಗಿದ್ದು, ಸದರಿ ವಿದ್ಯುಚ್ಛಕ್ತಿ ಬಿಲ್‌ನ ಡಿ.ಡಿ. ದಿನಾಂಕ:24-03-2017ರಂದು ಹಣಕಾಸು ವಿಭಾಗಕ್ಕೆ ಸಲ್ಲಿಕೆಯಾಗಿರುತ್ತದೆ. ಇದರಿಂದ Interest on Revenue Overdue ಆಗಿರುತ್ತದೆ. ಇನ್ನುಮುಂದೆ, ನಿಗದಿ ಸಮಯದಲ್ಲಿಯೇ ವಿದ್ಯುಚ್ಛಕ್ತಿ ಬಿಲ್‌ಗಳನ್ನು ಪಾವತಿಸಲು ಕ್ರಮಕೈಗೊಳ್ಳಲಾಗುವುದು.

ಆದ್ದರಿಂದ ಕಂಡಿಕೆಯನ್ನು ಕೈಬಿಡಲು ಕೋರಿದೆ.

**18(2)**

**ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ ದೂರವಾಣಿ ಬಿಲ್‌ಗಳಿಗೆ ಹೆಚ್ಚುವರಿಯಾಗಿ ಪಾವತಿಸಿರುವುದು. ರೂ.1,778-00 (ವಸೂಲಾತಿ)**

ಕಛೇರಿಯ ದೂರವಾಣಿ ಬಾಬ್ತನ್ನು ಬಿ.ಎಸ್.ಎನ್.ಎಲ್. ಗೆ ಪಾವತಿಸಿರುತ್ತಾರೆ. ಸದರಿ ಪಾವತಿಗಳಲ್ಲಿ ದೂರವಾಣಿ ಶುಲ್ಕದೊಂದಿಗೆ ಹೆಚ್ಚುವರಿಯಾಗಿ ವಿಳಂಬ ಶುಲ್ಕ (late fee) ವನ್ನು ಕೆಳಕಂಡಂತೆ ಪಾವತಿಸಿರುವುದು ಕಂಡುಬಂದಿರುತ್ತದೆ.(ಆಡಿಟ್ ವಿಚಾರಣೆ ಸಂಖ್ಯೆ: 42)

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಪಾವತಿಸಿದ ಮೊತ್ತ ರೂ. | ಹೆಚ್ಚುವರಿಯಾಗಿ ಪಾವತಿಸಿದ ವಿಳಂಬ ಶುಲ್ಕ ರೂ. |
|---|---|---|---|
| 01 | 118884/22-05-2015 | 7226.00 | 127.00 |
| 02 | 118927/24-07-2015 | 7567.00 | 128.00 |
| 03 | 118943/22-08-2015 | 7475.00 | 130.00 |
| 04 | 119000/23-12-2015 | 7427.00 | 128.00 |
| 05 | 119048/29-03-2016 | 7663.00 | 126.00 |
| 06 | 893048/16-08-2016 | 7401.00 | 129.00 |
| 07 | 893073/23-09-2016 | 7447.00 | 128.00 |
| 08 | 569785/28-03-2017 | 7557.00 | 138.00 |
| 09 | 569785/28-03-2017 | 7431.00 | 126.00 |
| 10 | 119078/08-06-2016 | 7387.00 | 129.00 |
| 11 | 119084/25-06-2016 | 7531.00 | 127.00 |
| 12 | 893084/22-10-2016 | 9410.00 | 137.00 |
| 13 | 893130/20-01-2017 | 17121.00 | 225.00 |
| | | **ಒಟ್ಟು ರೂ.** | **1778.00** |

ಹೆಚ್ಚುವರಿಯಾಗಿ ಪಾವತಿಸಿರುವ ವಿಳಂಬ ಶುಲ್ಕಗಳ ಮೊತ್ತ ರೂ.1,778-00ಗಳನ್ನು ವಸೂಲಾತಿಗೆ ಸೂಚಿಸಲಾಗಿದೆ.

**ಅನುಪಾಲನಾ ವರದಿ**

ಕೇಂದ್ರ ಸರ್ಕಾರದ ಸ್ವಾಮ್ಯದ ಬಿ.ಎಸ್.ಎನ್.ಎಲ್. ನಿಂದ ಬಿಲ್ಲು ಸ್ವೀಕರಿಸಿದ ನಂತರ ಪರಿಶೀಲನೆಯೊಂದಿಗೆ ದಾಸ್ತಾನು ಖರೀದಿ ವಿಭಾಗಕ್ಕೆ ಸಲ್ಲಿಸಿದ್ದು, ಸದರಿ ದಾಸ್ತಾನು ಶಾಖೆಯಿಂದ ಆದೇಶದೊಂದಿಗೆ ಹಣಕಾಸು ವಿಭಾಗಕ್ಕೆ ಪಾವತಿಗಾಗಿ ಸಲ್ಲಿಸಲ್ಪಡುತ್ತದೆ. ಸದರಿ ಬಿಲ್ ಹಣಕಾಸು ವಿಭಾಗದಲ್ಲಿ ಪುನರ್ ಪರಿಶೀಲನೆಯ ನಂತರ ಅಂಗೀಕರಿಸಿ ಧನಾದೇಶವನ್ನು ಬಿ.ಎಸ್.ಎನ್.ಎಲ್. ಗೆ ಪಾವತಿಸಲು ಕಾಲೇಜಿಗೆ ಕಳುಹಿಸಲಾಗುತ್ತದೆ. ಇದರಿಂದ ಪಾವತಿ ವಿಳಂಬವಾಗುತ್ತಿದ್ದು, ಇದರ ಬಗ್ಗೆ ನಿಗದಿತ ಅವಧಿಯೊಳಗೆ ದೂರವಾಣಿ ಶುಲ್ಕ ಪಾವತಿಸಲು ಕ್ರಮಕೈಗೊಳ್ಳಲಾಗುವುದು.

ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ.

**18(3)**

**ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಿಗೆ ಸ್ಥಳೀಯ ಭತ್ಯೆ ಮತ್ತು ಗೌರವ ಸಂಭಾವನೆ ನೀಡಿರುವುದು. ರೂ.18,000-00 (ವಸೂಲಾತಿ)**

2015-16ನೇ ಸಾಲಿನಲ್ಲಿ ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಪ್ರಾಂಶುಪಾಲರಿಗೆ ಸ್ಥಳೀಯ ಭತ್ಯೆ/ ಗೌರವ ಧನ ಎಂದು ಮಾಹೆಯಾನ ರೂ.3,000-00ರಂತೆ ಒಟ್ಟು ರೂ.18,000-00ಗಳನ್ನು ಪಾವತಿ ಮಾಡಲಾಗಿರುತ್ತದೆ. ಆದರೆ, ಯು.ಜಿ.ಸಿ. ವೇತನ ಪಡೆಯುತ್ತಿರುವ ಅಧ್ಯಾಪಕರು/ ನೌಕರರಿಗೆ ಯಾವುದೇ ಗೌರವ ಧನ/ ಸ್ಥಳೀಯ ಭತ್ಯೆ ಇರುವುದಿಲ್ಲವಾದ್ದರಿಂದ ನಿಯಮಬಾಹಿರವಾಗಿ ಪಾವತಿಸಿರುವ ಮೊತ್ತ ರೂ.18,000-00 ಗಳನ್ನು ವಸೂಲಾತಿಗೆ ಸೂಚಿಸಿದೆ. (ಆಡಿಟ್ ವಿಚಾರಣೆ ಸಂಖ್ಯೆ: 60)

**ಅನುಪಾಲನಾ ವರದಿ**

ಪ್ರಾಂಶುಪಾಲರು ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಉಸ್ತುವಾರಿಯನ್ನು ಬೋಧಕ ವರ್ಗದವರಿಂದಲೇ ನಿರ್ವಹಿಸಬೇಕಾಗಿರುತ್ತದೆ. ಪ್ರಸ್ತುತ ಲಭ್ಯವಿರುವ ಅಧ್ಯಾಪಕ ವರ್ಗದಿಂದಲೇ ಕೆಲವು ಅಧ್ಯಯನ ವಿಭಾಗಗಳ ಉಸ್ತುವಾರಿಯನ್ನು ಶೈಕ್ಷಣಿಕ ಹಿತದೃಷ್ಟಿಯಿಂದ ಹಂಚಿಕೆ ಮಾಡಿದ್ದು, ಅಧ್ಯಾಪಕರುಗಳು ತಮ್ಮ ವಿಭಾಗಗಳ ಶೈಕ್ಷಣಿಕ/ ಸಂಶೋಧನಾ ಚಟುವಟಿಕೆಗಳ ನಿರ್ವಹಣೆ ಜೊತೆಗೆ ಪ್ರತಿಯೊಬ್ಬ ಅಧ್ಯಾಪಕರು ಹೆಚ್ಚುವರಿ ವಿಭಾಗಗಳ ಕಾರ್ಯಗಳನ್ನು ಪ್ರಾಂಶುಪಾಲರು ಮೇಲ್ವಿಚಾರಣೆ ಮಾಡುವ ಪ್ರಯುಕ್ತ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸ್ಥಳೀಯ ಭತ್ಯೆಯನ್ನು ಆಡಳಿತ ಮತ್ತು ಶೈಕ್ಷಣಿಕ ಹಿತದೃಷ್ಟಿಯಿಂದ ಪಾವತಿಸಲಾಗಿದೆ.

ವಿಶ್ವವಿದ್ಯಾಲಯದ ಆದೇಶ ಸಂಖ್ಯೆ:ಕುವಿ:ದಾಖವಿ-2:2011-12/5190, ದಿನಾಂಕ:11-02-2012ರ ಆದೇಶದಂತೆ ಕಾಲೇಜಿನ ಪ್ರಾಂಶುಪಾಲರಿಗೆ ಮಾಹೆಯಾನ ರೂ.3,000-00ಗಳ ಬಿಲ್ಲನ್ನು ಕ್ಲೇಮು ಮಾಡಲಾಗಿದೆ.

ಆದಕಾರಣ ಈ ಕಂಡಿಕೆಯನ್ನು ಕೈಬಿಡಲು ಕೋರಿದೆ.

| | |
|---|---|
| 18(4) | **ಸಹ್ಯಾದ್ರಿ ವಿಜ್ಞಾನ ಕಾಲೇಜಿನ ಶ್ರೀ ಸುನಿಲ್. ಎಸ್.ವಿ., ಅತಿಥಿ ಉಪನ್ಯಾಸಕರು ಇವರಿಗೆ ಸಂಭಾವನೆ ನೀಡಿರುವುದು. ರೂ.5,315–00 (ಆಕ್ಷೇಪಣೆ)**<br>ಸಹ್ಯಾದ್ರಿ ವಿಜ್ಞಾನ ಕಾಲೇಜಿನಲ್ಲಿ 2015–16ನೇ ಸಾಲಿಗೆ ಶ್ರೀ ಸುನಿಲ್. ಎಸ್.ವಿ. ಅಥಿತಿ ಉಪನ್ಯಾಸಕರಾಗಿ ಜೀವರಸಾಯನಶಾಸ್ತ್ರ ವಿಭಾಗಕ್ಕೆ ದಿನಾಂಕ:21–09–2015ರಂದು ಬೋಧನಾ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. ಸದರಿಯವರಿಗೆ ಸೆಪ್ಟಂಬರ್–2015 ಮತ್ತು ಅಕ್ಟೋಬರ್–15 ಮಾಹೆಯ ಗೌರವ ಸಂಭಾವನೆಯನ್ನು ಧನಾದೇಶ ಸಂಖ್ಯೆ:119002, ದಿನಾಂಕ:23–12–2015ರಂದು ರೂ.20,115–00ಗಳನ್ನು ಪಾವತಿಸಲಾಗಿದೆ. ಆದರೆ, ಅವರ ಬೋಧನಾ ಕರ್ತವ್ಯದ ದೃಢೀಕೃತ ಹಾಜರಾತಿ ದಾಖಲೆಯು ಲೆಕ್ಕ ತಪಾಸಣೆಯಲ್ಲಿ ಲಭ್ಯವಿಲ್ಲದ ಕಾರಣ ಆಡಿಟ್ ವಿಚಾರಣೆ ಸಂಖ್ಯೆ:43, ದಿನಾಂಕ:09–05–2018ರಂದು ದಾಖಲೆಗಳನ್ನು ನೀಡಲು ಸೂಚಿಸಲಾಗಿತ್ತು. ಆದರೆ, ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಶ್ರೀ ಸುನಿಲ್ ಎಸ್.ವಿ. ರವರಿಗೆ ಸೆಪ್ಟಂಬರ್ ಮಾಹೆಯ ಮೊದಲನೇ ದಿನದಿಂದಲೇ ಹಾಜರಾತಿಯನ್ನು ನೀಡಿರುತ್ತಾರೆ. ದಿನಾಂಕ:21–09–2015ರಲ್ಲಿ ವರದಿ ಮಾಡಿಕೊಂಡಿದ್ದಾರೆಂದು ದೃಢೀಕರಿಸಲಾಗಿದೆ. ಆದ್ದರಿಂದ, ಶ್ರೀ ಸುನಿಲ್ ಎಸ್.ವಿ. ಇವರಿಗೆ ಪಾವತಿಸಿರುವ ರೂ.5,315–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. (ಆಡಿಟ್ ವಿಚಾರಣೆ ಸಂಖ್ಯೆ:43) |
| **ಅನುಪಾಲನಾ ವರದಿ** | ಅತಿಥಿ ಉಪನ್ಯಾಸಕರಾದ ಶ್ರೀ ಸುನಿಲ್. ಎಸ್.ವಿ. ಇವರಿಗೆ ಸೆಪ್ಟಂಬರ್–2015 ಮತ್ತು ಅಕ್ಟೋಬರ್–2015ರ ಮಾಹೆಯ ಗೌರವ ಸಂಭಾವನೆಯನ್ನು ಪ್ರಾಂಶುಪಾಲರು, ಸಹ್ಯಾದ್ರಿ ವಿಜ್ಞಾನ ಕಾಲೇಜು, ಶಿವಮೊಗ್ಗ ಇವರು ಸೆಪ್ಟಂಬರ್–2015 ಮತ್ತು ಅಕ್ಟೋಬರ್–2015ರ ಮಾಹೆಯ ಹಾಜರಾತಿ ಆಧಾರದ ಮೇಲೆಯೇ ಪಾವತಿಸಲಾಗಿದೆ ಹಾಗೂ 01–09–2015 ರಿಂದ 20–09–2015ರವರೆಗಿನ ಮೊತ್ತ ರೂ.5,315–00ಗಳನ್ನು ಸಂಬಂಧಪಟ್ಟವರಿಂದ ವಸೂಲಿ ಮಾಡಲು ಕ್ರಮಕೈಗೊಳ್ಳಲಾಗಿದೆ.<br>ಆದಕಾರಣ ಈ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| 19 | **ಗೃಹ ನಿರ್ಮಾಣ ಮುಂಗಡ. ರೂ.72,152–00 (ವಸೂಲಾತಿ)**<br>ವಿಶ್ವವಿದ್ಯಾಲಯದ ಗೃಹ ನಿರ್ಮಾಣ ಮುಂಗಡ ವಹಿಯನ್ನು ಪರಿಶೀಲಿಸಲಾಗಿ ರೂ.72,152–00ಗಳು ಸುಮಾರು 2003–04ರಿಂದಲೂ ವಸೂಲಾಗದೆ ಬಾಕಿ ಉಳಿದಿದ್ದು, ವಸೂಲಿಸಲು ಯಾವುದೇ ಕ್ರಮಕೈಗೊಂಡಿಲ್ಲದಿರುವುದರಿಂದ, ಸದರಿ ಸಾಲಿನಲ್ಲಿ ರೂ.72,152–00 ಹಾಗೂ ತಡವಾದ ಪಾವತಿಯ ಅವಧಿಯ ಬಡ್ಡಿಯನ್ನು ಸಂಬಂಧಿಸಿದವರಿಂದ ವಸೂಲಿಸಲು ಸೂಚಿಸಿದೆ. |
| **ಅನುಪಾಲನಾ ವರದಿ** | ಗೃಹ ನಿರ್ಮಾಣ ಪಡೆದ ಅಧೀಕ್ಷಕರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ವಜಾ ಮಾಡಲಾಗಿದೆ. ಸದರಿಯವರ ಪತ್ನಿಯವರು ಕಾಣೆಯಾದ ಕುರಿತಂತೆ ಪೋಲಿಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ. ಸದರಿಯವರು ಪತ್ತೆಯಾಗಿರುವ ಮಾಹಿತಿ ಇದುವರೆಗೂ ವಿಶ್ವವಿದ್ಯಾನಿಲಯಕ್ಕೆ ಲಭ್ಯವಾಗಿರುವುದಿಲ್ಲ. ಸದರಿ ನೌಕರರಿಗೆ ಪಾವತಿಸಬೇಕಾದ ಮೊತ್ತದಲ್ಲಿ ಗೃಹ ನಿರ್ಮಾಣ ಮುಂಗಡವನ್ನು ಬಡ್ಡಿ ಸಮೇತ ವಸೂಲಿ ಮಾಡಲು ಕ್ರಮಕೈಗೊಳ್ಳಲಾಗುವುದು.<br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| 20 | **ದತ್ತಿನಿಧಿ ಖಾತೆಯಲ್ಲಿ ಗೋಲ್ಡ್ ಮೆಡಲ್/ ಸಿಲ್ವರ್ ಮೆಡಲ್‌ಗಳಿಗೆ ಪಾವತಿಸಿರುವುದು. ರೂ.11,54,234–00 (ಆಕ್ಷೇಪಣೆ)**<br>ವಿಶ್ವವಿದ್ಯಾಲಯ ದತ್ತಿನಿಧಿ ಖಾತೆಯಲ್ಲಿ 2015–16 ಮತ್ತು 2016–17ನೇ ಸಾಲಿನಲ್ಲಿ ಕ್ರಮವಾಗಿ ರೂ.5,72,473–00 ಮತ್ತು ರೂ.5,81,761–00, ಒಟ್ಟು ರೂ.11,54,784–00ಗಳನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗೋಲ್ಡ್ ಮೆಡಲ್‌ಗಳನ್ನು ಪ್ರದಾನ ಮಾಡಲು ಖರ್ಚು ಮಾಡಲಾಗಿರುತ್ತದೆ. ಈ ಸಂಬಂಧವಾಗಿ ಆಡಿಟ್ ವಿಚಾರಣಾ ಸಂಖ್ಯೆ: 22, ದಿನಾಂಕ:23–04–2018ರಲ್ಲಿ ವಿವರಣೆ ಕೋರಲಾಗಿದ್ದು, ಉತ್ತರವು ಸಮಂಜಸವಾಗಿರುವುದಿಲ್ಲ.<br>ಕೆ.ಟಿ.ಪಿ.ಪಿ. ಕಾಯ್ದೆ, 1999 ಮತ್ತು ನಿಯಮ, 2000 – ಸೆಕ್ಷನ್–4(b)ರಡಿಯಲ್ಲಿ ಸ್ವರ್ಣಪದಕಗಳ ಖರೀದಿ ಸಂಬಂಧ ರಚಿಸಿದ ಪರಿಶೀಲನೆ ಸಮಿತಿಯು ಸರ್ಕಾರದ ಪ್ರತಿನಿಧಿಯನ್ನು ಒಳಗೊಂಡಿರುವುದಿಲ್ಲ. ಪ್ರತಿ ಗೋಲ್ಡ್ ಮೆಡಲ್/ಸಿಲ್ವರ್ ಮೆಡಲ್‌ನ ಕೋಟೆಡ್‌ನ ಪ್ರಮಾಣೀಕರಣ ಮತ್ತು ನಿಖರತೆಯ ಬಗ್ಗೆ ದೃಢೀಕರಣ ಒದಗಿಸಿರುವುದಿಲ್ಲ. ಇದು ನಿಯಮಗಳ ಉಲ್ಲಂಘನೆಯಾಗಿದ್ದು, ಆದ್ದರಿಂದ, ರೂ.11,54,234–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. |
| **ಅನುಪಾಲನಾ ವರದಿ** | ವಿಶ್ವವಿದ್ಯಾನಿಲಯದಲ್ಲಿ ಪ್ರತೀ ವರ್ಷ ನಡೆಯುವ ಘಟಿಕೋತ್ಸವದಲ್ಲಿ ದಾನಿಗಳು ನೀಡಿರುವ ದತ್ತಿನಿಧಿಯಲ್ಲಿ ಚಿನ್ನ ಲೇಪಿತ ಸ್ವರ್ಣಪದಕಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ, 2001ರ 4(ಬಿ)ರಂತೆ ಸಮಿತಿಯನ್ನು ರಚಿಸಿ ಸಮಿತಿಯ ವರದಿ ಪಡೆದು ಸ್ವರ್ಣಪದಕ ಸರಬರಾಜು ಮಾಡುವ ರಾಜ್ಯದ ಏಕೈಕ ಮೂಲ ಸಂಸ್ಥೆಯಾದ ಬಾರ್ಟನ್ ಅಂಡ್ ಸನ್ಸ್ ಲಿಮಿಟೆಡ್, ಬೆಂಗಳೂರು ಇವರಿಂದ ಖರೀದಿಸಲಾಗಿದೆ. |

| | |
|---|---|
| | 1) ಸ್ವರ್ಣಪದಕಗಳ ಗುಣಮಟ್ಟದ ಬಗ್ಗೆ ಯಾವುದೇ ರೀತಿಯ ದೂರುಗಳು ಆಕ್ಷೇಪಣೆಗಳು ಬಂದಿರುವುದಿಲ್ಲ.<br>2) ಸರಬರಾಜು ಆಗಿರುವ 120 ಸ್ವರ್ಣಪದಕಗಳಲ್ಲಿ ಸರಿಯಾದ ಪ್ರಮಾಣದಲ್ಲಿ ಬೆಳ್ಳಿ ಮತ್ತು ಬಂಗಾರದ ಲೇಪನವಿರುವ ಬಗ್ಗೆ ಪ್ರಮಾಣ ಪತ್ರ ಪಡೆಯಲಾಗಿದೆ ಹಾಗೂ ಬಿಲ್ ಮಾಡಿದ ದಿನಾಂಕಕ್ಕೆ ಬೆಳ್ಳಿಯ ಮಾರುಕಟ್ಟೆ ಬೆಲೆ ಆಧರಿಸಿ ಸ್ವರ್ಣಪದಕಗಳ ಬೆಲೆ ನಿಗದಿ ಮಾಡಲಾಗಿದೆ.<br>ಸದರಿ ಸ್ವರ್ಣಪದಕಗಳನ್ನು ಘಟಿಕೋತ್ಸವ ಸಮಾರಂಭಕ್ಕೆ ಮುನ್ನ ವಿಶೇಷ ಸಿಂಡಿಕೇಟ್ ಹಾಗೂ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಪದಕ ವಿಜೇತರ ಪಟ್ಟಿಯನ್ನು ಅನುಮೋದನೆ ನಂತರ ಕುಲಪತಿ ಹಾಗೂ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆ ನಂತರ ವಿದ್ಯಾರ್ಥಿಗಳಿಗೆ ವಿತರಿಸಲಾಗಿದೆ.<br>ಘನತೆವೆತ್ತ ರಾಜ್ಯಪಾಲರು ಕಛೇರಿಯಿಂದ ನಿಗದಿಗೊಂಡ ದಿನಾಂಕದಲ್ಲಿ ಘಟಿಕೋತ್ಸವ ನಡೆಸಬೇಕಾಗಿರುವ ಹಿನ್ನೆಲೆಯಲ್ಲಿ ಸಮಯದ ಅಭಾವವಿದ್ದುದರಿಂದ ಇ–ಟೆಂಡರ್ ಪ್ರಕ್ರಿಯೆ ನಡೆಸುವುದು ಕಷ್ಟಸಾಧ್ಯವಾಗಿದ್ದು, ಸದರಿ ಸ್ವರ್ಣಪದಕಗಳನ್ನು ತುರ್ತಾಗಿ ಖರೀದಿಸಬೇಕಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರ ಅನುಮೋದನೆ ಪಡೆದು ಸ್ವರ್ಣಪದಕಗಳನ್ನು ಖರೀದಿಸಲಾಗಿದೆ. ಇನ್ನುಮುಂದೆ, ಸ್ವರ್ಣಪದಕಗಳನ್ನು ಇ–ಟೆಂಡರ್ ಪ್ರಕ್ರಿಯೆ ಮೂಲಕವೇ ಖರೀದಿಸಲು ಕ್ರಮಕೈಗೊಳ್ಳಲಾಗುವುದು.<br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **21(1)** | **ಪರೀಕ್ಷಾ ಖಾತೆಯಲ್ಲಿ ಬಿ.ಎಸ್ಸಿ. (ಐಟಿ) ಮತ್ತು ಎಂ.ಎಸ್ಸಿ.(ಐಟಿ) ಪರೀಕ್ಷೆಗಳಿಗೆ ಸಂಭಾವನೆ ಪಾವತಿಸಿರುವುದು. ರೂ.5,33,595–00 (ಆಕ್ಷೇಪಣೆ)**<br>ಬಿ.ಎಸ್ಸಿ. (ಐಟಿ) ಮತ್ತು ಎಂ.ಎಸ್ಸಿ.(ಐಟಿ) ಪರೀಕ್ಷೆಗಳಿಗೆ ಸಂಬಂಧಿಸಿದ ಸಂಭಾವನೆ ಪಾವತಿಗಳಿಗೆ ಹಣ ಸ್ವೀಕೃತಿ ರಶೀದಿ ಹಾಜರುಪಡಿಸದಿರುವುದು – ಧನಾದೇಶ ಸಂಖ್ಯೆ:802641/01–07–2015ರಲ್ಲಿ ರೂ.2,02,095–00 ಮತ್ತು ಧನಾದೇಶ ಸಂಖ್ಯೆ: 802601/27–04–2015ರಲ್ಲಿ ಭಾರತ್ ಎಜುಕೇಶನ್ ಸೊಸೈಟಿ ಮತ್ತು ಸ್ಪ್ರಿಂಗ್ ಮಾಡೆಲ್ ಸ್ಕೂಲ್‌ಗಳಿಗೆ ರೂ.3,31,500–00ಗಳನ್ನು ಪಾವತಿಸಿದ್ದು, ಕ್ರಮವಾಗಿ ಆಡಿಟ್ ವಿಚಾರಣೆ ಸಂಖ್ಯೆ:48 ಮತ್ತು 54ರಲ್ಲಿ ಮೇಲ್ಕಂಡ ಪಾವತಿಗಳಿಗೆ ಸಂಬಂಧಿಸಿದಂತೆ, ವಿವಿಧ ದೂರಶಿಕ್ಷಣ ಕೇಂದ್ರಗಳಿಗೆ ಸಂಭಾವನೆ ಪಾವತಿಗಳಿಗೆ ಸ್ಪಷ್ಟೀಕರಣ/ ದಾಖಲೆ ಕೋರಿದ್ದರೂ, ಹಣ ಸ್ವೀಕೃತಿ ರಶೀದಿಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿರುವುದಿಲ್ಲ. ಹಣ ಸ್ವೀಕೃತಿ ರಶೀದಿಗಳನ್ನು ಹಾಜರುಪಡಿಸುವವರೆಗೂ ಒಟ್ಟು ರೂ.5,33,595–00 (2,02,095+3,31,500) ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. (ಆಡಿಟ್ ವಿಚಾರಣೆ ಸಂಖ್ಯೆ: 48 ಮತ್ತು 54) |
| **ಅನುಪಾಲನಾ ವರದಿ** | ಮೆ: ಭಾರತ್ ಎಜುಕೇಷನ್ ಸೊಸೈಟಿ, ಬೆಂಗಳೂರು ಮತ್ತು ಮೆ: ಸ್ಪ್ರಿಂಗ್ ಮಾಡೆಲ್ ಸ್ಕೂಲ್, ನವದೆಹಲಿ ಇವರುಗಳಿಗೆ ಬಿ.ಎಸ್ಸಿ. (ಐ.ಟಿ) ಮತ್ತು ಎಂ.ಎಸ್ಸಿ. (ಐ.ಟಿ.) ಪರೀಕ್ಷೆಗಳಿಗೆ ಸಂಬಂಧಿಸಿದ ಸಂಭಾವನೆಯನ್ನು ಡಿ.ಡಿ. ಮುಖಾಂತರವೇ ಪಾವತಿಸಿದ್ದು, ಪತ್ರಸಂಖ್ಯೆ ಕ್ರಮವಾಗಿ KU/EB/EAS-1/2569/2013-14, date:18/ 23-05-2013, DD No.98246, ದಿನಾಂಕ, ಮೊತ್ತ ರೂ.1,17,300–00 ಮಾಡೆಲ್ ಪಬ್ಲಿಕ್ ಸ್ಕೂಲ್ ಇವರಿಗೆ KU/EB/EAS-1/2560/2013-14, date:18/23-05-2013, DD No.982447, ರೂ.2,14,200–00ಗಳನ್ನು ಪಾವತಿಸಲಾಗಿದೆ.<br>ಕುವೆಂಪು ವಿಶ್ವವಿದ್ಯಾನಿಲಯದ ವಿವಿಧ ರಾಜ್ಯಗಳಲ್ಲಿರುವ ದೂರಶಿಕ್ಷಣ ಅಧ್ಯಯನ ಕೇಂದ್ರಗಳಲ್ಲಿ ನಡೆಯುತ್ತಿದ್ದ ಬಿ.ಎಸ್ಸಿ.(ಐಟಿ)/ ಎಂ.ಎಸ್ಸಿ.(ಐಟಿ) ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಒಟ್ಟು ಸಂಖ್ಯೆಯ ಮಾಹಿತಿಯನ್ನು ಪರೀಕ್ಷಾ ವಿಭಾಗದ ದೂರಶಿಕ್ಷಣ ಶಾಖೆಯಿಂದ ಪಡೆದು ಪ್ರತಿ ವಿದ್ಯಾರ್ಥಿಗೆ ಸೈದ್ಧಾಂತಿಕ ಪರೀಕ್ಷೆಗಾಗಿ ತಲಾ ರೂ.150–00ರಂತೆ ಹಾಗೂ ಪ್ರಾಯೋಗಿಕ ಪರೀಕ್ಷೆಗಾಗಿ ತಲಾ ರೂ.15–00ರಂತೆ ಲೆಕ್ಕ ಹಾಕಿ ಪ್ರತಿ ಕೇಂದ್ರಕ್ಕೆ ನೀಡಬೇಕಾದ ಪರೀಕ್ಷಾ ಕೇಂದ್ರದ ಸಂಭಾವನೆ ಶೇ.25ರಷ್ಟನ್ನು ಪರೀಕ್ಷೆಯ ನಂತರ ನೀಡಲಾಗುತ್ತಿತ್ತು. ಈ ಸಂಬಂಧವಾಗಿ ಪರೀಕ್ಷಾ ಕೇಂದ್ರಗಳಿಗೆ ನೀಡಬೇಕಾದ ಒಟ್ಟು ಮೊತ್ತಕ್ಕೆ ಬ್ಯಾಂಕಿಗೆ ಒಂದು ಧನಾದೇಶ ಬರೆದು ಸಂಬಂಧಪಟ್ಟ ಕೇಂದ್ರಗಳ ಹೆಸರಿಗೆ ಡಿ.ಡಿ.ಗಳನ್ನು ಹಾಗೂ ಬ್ಯಾಂಕ್ ಖಾತೆ ನೀಡಿದ ಕೆಲವು ಕೇಂದ್ರಗಳಿಗೆ ಆರ್.ಟಿ.ಜಿ.ಎಸ್. ಮುಖಾಂತರವೂ ಪಾವತಿ ಮಾಡಲಾಗಿರುತ್ತದೆ. |
| **21(2)** | **ಎ.ಸಿ. ಹುಂಡಿಯಲ್ಲಿ ಪಡೆದ ಮೊತ್ತಕ್ಕೆ ಹಿಂದಿನ ಸಾಲುಗಳ ವೆಚ್ಚ ಭರಿಸಿರುವುದು. ರೂ.7,39,075–00 (ಆಕ್ಷೇಪಣೆ)**<br>ಧನಾದೇಶ ಸಂಖ್ಯೆ:0802601/27–04–2015ರಲ್ಲಿ ಎ.ಸಿ. ಹುಂಡಿಗೆ ಎನ್.ಡಿ.ಸಿ. ಹುಂಡಿಯನ್ನು ಪರಿಶೀಲಿಸಲಾಗಿ, ಎ.ಸಿ. ಬಿಲ್‌ನಲ್ಲಿ ಪಡೆದ ಮೊತ್ತಕ್ಕೆ ಹಿಂದಿನ ಸಾಲುಗಳ ಪರೀಕ್ಷಾ ಸಂಭಾವನೆ ಬಿಲ್‌ಗಳನ್ನು ಪಾವತಿಸಿರುವುದು ನಿಯಮಬಾಹಿರವಾಗಿದೆ. ಅಂತಹ ಬಿಲ್‌ಗಳನ್ನು ಡಿ.ಸಿ. ಬಿಲ್ಲಿನಲ್ಲಿ ತಯಾರಿಸಿ, ವೆಚ್ಚ ಭರಿಸಬೇಕಾಗಿದ್ದು, ವಿಚಾರಣೆ ಸಂಖ್ಯೆ:51 ಮತ್ತು 87, ದಿನಾಂಕ:15–05–2018ರಲ್ಲಿ ಆಕ್ಷೇಪಿಸಿದ್ದು, ಸೂಕ್ತ ಸ್ಪಷ್ಟೀಕರಣ ದೊರೆಯದ ಕಾರಣ ರೂ.7,39,075–00 (3,05,114+4,33,961) ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. (ಆಡಿಟ್ ವಿಚಾರಣೆ ಸಂಖ್ಯೆ: 51 ಮತ್ತು 87) |

| | |
|---|---|
| | 2015–16 ಮತ್ತು 2016–17ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ಪರೀಕ್ಷಾ ಖಾತೆಗೆ ಸಂಬಂಧಿಸಿದಂತೆ, ನಿರೀಕ್ಷಿತ ಆದಾಯ, ಸಂಗ್ರಹ, ಬಾಕಿ ಶುಲ್ಕದ ವಿವರವನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸುವಂತೆ ವಿಚಾರಣೆ ಸಂಖ್ಯೆ:111, ದಿನಾಂಕ:21–07–2018ರಲ್ಲಿ ಸೂಚಿಸಿರುವುದಕ್ಕೆ, ಡಿ.ಸಿ.ಬಿ. ವಹಿಯನ್ನು ನಿರ್ವಹಿಸುವ ಅವಶ್ಯಕತೆ ಕಂಡುಬರುವುದಿಲ್ಲವೆಂದು ಉತ್ತರಿಸಿದ್ದು, ಯಾವುದೇ ದಾಖಲೆಗಳನ್ನು ಹಾಜರುಪಡಿಸದಿರುವುದನ್ನು ಆಕ್ಷೇಪಿಸಿದ್ದು, ಸದರಿ ವರ್ಷಗಳ ಸಂಗ್ರಹ ಮತ್ತು ಬಾಕಿ ಶುಲ್ಕಗಳನ್ನು ದೃಢೀಕರಿಸಲು ಸಾಧ್ಯವಾಗಿರುವುದಿಲ್ಲ. ಮುಂದಿನ ಲೆಕ್ಕಪರಿಶೋಧನೆಗೆ ವಿವರಗಳನ್ನು ಹಾಜರುಪಡಿಸಲು ಸೂಚಿಸಿದೆ. |
| **ಅನುಪಾಲನಾ ವರದಿ** | ವಿವಿಧ ಪರೀಕ್ಷಾ ಕಾರ್ಯಗಳಿಗೆ ಟಿ.ಎ./ಡಿ.ಎ. ಸಂಭಾವನೆಯನ್ನು ಪಾವತಿಸಲು ವಿವಿಧ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರುಗಳಿಗೆ ವಿವಿಧ ಕಾಲೇಜುಗಳ ಪ್ರಾಂಶುಪಲರುಗಳಿಗೆ ಹಾಗೂ ಮೌಲ್ಯಮಾಪನ ಕೇಂದ್ರದ ಕೋ–ಆರ್ಡಿನೇಟರ್‌ಗಳಿಗೆ ಎ.ಸಿ. ಹುಂಡಿಯ ಮೂಲಕ ನೀಡುತ್ತಿದ್ದ ಮುಂಗಡ ಮೊತ್ತಕ್ಕೆ ಸರಿಯಾದ ಸಮಯಕ್ಕೆ ಎನ್.ಡಿ.ಸಿ. (ಸುಮಾರು 200ಕ್ಕೂ ಹೆಚ್ಚು) ಬಾರದ ಕಾರಣ ಮಾನ್ಯ ಕುಲಪತಿಗಳ ಅನುಮೋದನೆ ಹಾಗೂ ಹಣಕಾಸು ಅಧಿಕಾರಿಗಳ ಅಭಿಪ್ರಾಯದ ಮೇರೆಗೆ ಕುಲಸಚಿವ(ಪ) ಇವರೇ ಎಲ್ಲಾ ಎ.ಸಿ. ಹುಂಡಿಗಳನ್ನು ಕ್ಲೇಮು ಮಾಡಿ ಎನ್.ಡಿ.ಸಿ. ಸಲ್ಲಿಸುವ ಏಕ ಗವಾಕ್ಷಿ ಪಾವತಿ ಪದ್ಧತಿಯನ್ನು ಪ್ರಾರಂಭಿಸಲಾಯಿತು. ಎ.ಸಿ. ಹುಂಡಿಯ ಮೂಲಕ ಪಡೆಯುವ ಮುಂಗಡ ಮೊತ್ತದಲ್ಲಿ ಮೌಲ್ಯಮಾಪನ ಕಾರ್ಯದ ಹಾಗೂ ಪ್ರಾಯೋಗಿಕ ಪರೀಕ್ಷೆಗಳ ಹಾಗೂ ಸ್ನಾತಕೋತ್ತರ ವಿಭಾಗಗಳ ಪ್ರಾಯೋಗಿಕ ಪರೀಕ್ಷೆ ಪಿಹೆಚ್.ಡಿ. ವೈವಾ/ಬಿ.ಓ.ಇ. ಇತ್ಯಾದಿಗಳ ಟಿಎ./ಡಿ.ಎ. ಸಂಭಾವನೆಯನ್ನು ಪಾವತಿಸಲು ಮೊದಲ ಆದ್ಯತೆಯನ್ನು ನೀಡಲಾಗುವುದು. ಸಾಮಾನ್ಯವಾಗಿ ಪರೀಕ್ಷೆಗಳು ನಡೆದ ನಂತರವೇ ಟಿ.ಎ./ಡಿ.ಎ. ಸಂಭಾವನೆ ಬಿಲ್ಲುಗಳು ಪಾವತಿಗೆ ಬರುತ್ತದೆ. ಮೌಲ್ಯಮಾಪನ ಕಾರ್ಯಕ್ಕೆ ಹಾಗೂ ಇತ್ಯಾದಿ ತುರ್ತು ಸ್ಥಳೀಯ ಪಾವತಿಗೆ ಮೊದಲ ಆದ್ಯತೆಯನ್ನು ನೀಡಿ ನಂತರದಲ್ಲಿ ಹಣಕಾಸಿನ ಲಭ್ಯತೆಯನ್ನು ನೋಡಿಕೊಂಡು ಉಳಿದ ಬಿಲ್ಲುಗಳನ್ನು ಪಾವತಿ ಮಾಡಲಾಗುತ್ತದೆ. ಪರೀಕ್ಷೆಗೆ ಸಂಬಂಧಿಸಿದ ಬಿಲ್ಲುಗಳು ಹಣಕಾಸು ವಿಭಾಗಕ್ಕೆ ಪಾವತಿಗೆ ಬರುತ್ತದೆ. ಅಂತಹ ಬಿಲ್ಲುಗಳನ್ನು ಪರಿಶೀಲಿಸಿ, ಹಣಕಾಸಿನ ಲಭ್ಯತೆ ನೋಡಿಕೊಂಡು ಪಾವತಿಸಲಾಗುತ್ತದೆ. ಕೆಲವು ಬಿಲ್ಲುಗಳಲ್ಲಿ ನ್ಯೂನತೆಗಳು ಇದ್ದಲ್ಲಿ ಅವುಗಳನ್ನು ಸರಿಪಡಿಸಿ ಕಳುಹಿಸುವಂತೆ ತಿಳಿಸಿ ಸಂಬಂಧಿಸಿದವರಿಗೆ ಹಿಂದಿರುಗಿಸಲಾಗುತ್ತದೆ. ಈ ಹುಂಡಿಗಳ ಆಕ್ಷೇಪಣೆಗಳನ್ನು ಸರಿಪಡಿಸಿ ಪಾವತಿಗಾಗಿ ಮರು ಸಲ್ಲಿಸಿದಾಗ ಅಂತಹ ಹುಂಡಿಗಳನ್ನು ಪಾವತಿಗೆ ಅಂಗೀಕರಿಸಿರುವುದರಿಂದ ಡಿ.ಸಿ. ಬಿಲ್ಲಿನಲ್ಲಿ ಇಂತಹ ಪಾವತಿಯನ್ನು ಮಾಡದೇ ಈ ಮೊದಲು ಪಡೆದಿರುವ ಎ.ಸಿ. ಹುಂಡಿಗಳಿಗೆ ಸಂಬಂಧಿಸಿರುವುದರಿಂದ ಆ ಮೊಬಲಗಿನಲ್ಲಿಯೇ ಪಾವತಿ ಮಾಡಿ ಲೆಕ್ಕ ಹೊಂದಾಣಿಕೆ ಮಾಡಿ ಲೆಕ್ಕ ತೀರುವಳಿ ಹುಂಡಿಯನ್ನು (ಎನ್.ಡಿ.ಸಿ.) ಸಲ್ಲಿಸಲಾಗುತ್ತದೆ.<br>ಆದ್ದರಿಂದ ಈ ಕಂಡಿಕೆಯನ್ನು ವಿಶೇಷ ಸಂದರ್ಭವೆಂದು ಪರಿಗಣಿಸಿ ಆಕ್ಷೇಪಣೆಯಿಂದ ಕೈಬಿಡಲು ಕೋರಿದೆ.<br>ಪರೀಕ್ಷಾಂಗ ವಿಭಾಗಕ್ಕೆ ಎಲ್ಲಾ ಮೂಲಗಳಿಂದ ಬರುವ ಶುಲ್ಕಗಳನ್ನು ಬ್ಯಾಂಕ್ ಡಿ.ಡಿ., Paytm, Post Office Payment, ಮುಂತಾದವುಗಳ ಮೂಲಕ ನೇರವಾಗಿ ಹಣಕಾಸು ವಿಭಾಗದಲ್ಲಿ ನಿರ್ವಹಣೆ ಮಾಡುತ್ತಿರುವ ಖಾತೆ ಸಂಖ್ಯೆ:54023036246 ಖಾತೆಗೆ ಜಮಾವಾಗುತ್ತಿದೆ. ಹಾಗೂ ಹೀಗೆ ಜಮಾವಾಗುತ್ತಿರುವ ಮೊಬಲಗು ಪಾವತಿಯಾಗಿರುವ ಬಗ್ಗೆ ದೃಢೀಕರಣವಾಗದೆಯೇ ವಿದ್ಯಾರ್ಥಿಗಳಿಗೆ ತಮ್ಮ ಮುಂದಿನ ಪ್ರಕ್ರಿಯೆಗಳಿಗೆ ಗಣಕಯಂತ್ರವೇ ಅವಕಾಶ ನೀಡುವುದಿಲ್ಲವೆಂಬ ಅಂಶವನ್ನು ಕೂಡ ತಮ್ಮ ಅವಗಾಹನೆಗೆ ತರುತ್ತಾ ಈ ಕಾರಣಗಳಿಂದಾಗಿ ಹಲವಾರು ಮೂಲಗಳಿಂದ ಹಣ ಸಂಗ್ರಹಣೆಯಾಗುವುದರಿಂದ ಪರೀಕ್ಷಾ ವಿಭಾಗದಲ್ಲಿ ಡಿಸಿಬಿ ಘೋಷ್ವಾರೆ ತಯಾರಿಸಿ ಡಿಸಿಬಿ ನಿರ್ವಹಿಸುವುದು ಕಷ್ಟಸಾಧ್ಯವಾಗುವುದರಿಂದ ಹಾಗೂ ನಗದು ಮತ್ತು ಇತರೆ ಸ್ವೀಕೃತಿ ವ್ಯವಹಾರಗಳನ್ನು ಹಣಕಾಸು ವಿಭಾಗದ ನಗದು ಪುಸ್ತಕದಲ್ಲಿ ನಿರ್ವಹಿಸಲಾಗಿದೆ.<br>ವಿಶ್ವವಿದ್ಯಾಲಯದ ಪರೀಕ್ಷಾ ಖಾತೆಗೆ ಸಂಬಂಧಿಸಿದಂತೆ ಎಲ್ಲಾ ಮೂಲಗಳಿಂದ ಬರುವ ಆದಾಯಗಳು ನೇರವಾಗಿ ಹಣಕಾಸು ವಿಭಾಗದಲ್ಲಿ ನಿರ್ವಹಣೆ ಮಾಡುವ ಖಾತೆ ಸಂಖ್ಯೆ:54023036246ಗೆ ಆನ್‌ಲೈನ್ ಮುಖಾಂತರವೇ ಜಮಾ ಆಗುವುದರಿಂದ ಪರೀಕ್ಷಾಂಗ ವಿಭಾಗದಲ್ಲಿ ವಿಂಗಡಿಸಿದ ಆದಾಯ ನಮೂನೆ (ಡಿಸಿಬಿ ಘೋಷ್ವಾರೆ), ನಿರ್ವಹಣೆ ಮಾಡಲಾಗುತ್ತಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ. |
| **22** | **ಪ್ರಶ್ನೆಪತ್ರಿಕೆಗಳ ರಹಸ್ಯ ಮುದ್ರಣ ಕಾರ್ಯ. ರೂ.1,84,26,062–00 (ಆಕ್ಷೇಪಣೆ)**<br>2015–16 ಮತ್ತು 2016–17ನೇ ಸಾಲಿಗೆ ಸಂಬಂಧಿಸಿದಂತೆ, ಪರೀಕ್ಷಾ ಖಾತೆಯನ್ನು ಪರಿಶೀಲಿಸಲಾಗಿದ, ಪ್ರಶ್ನೆಪತ್ರಿಕೆ ಮುದ್ರಣಕ್ಕೆ ವಿವಿಧ ಸಂಸ್ಥೆಗಳೊಂದಿಗೆ ಕರಾರು ಮಾಡಿಕೊಂಡಿದ್ದು, ಸದರಿ ಕರಾರುಗಳನ್ನು 2011–12ರಿಂದಲೂ ನವೀಕರಿಸುತ್ತಾ, ಶೇಕಡವಾರು ದರ ಹೆಚ್ಚಿಸಿ ಪಾವತಿಸುತ್ತಿರುವುದು ಕಂಡುಬಂದಿರುತ್ತದೆ. ಈ ಬಗ್ಗೆ ಆಡಿಟ್ ವಿಚಾರಣಾ ಸಂಖ್ಯೆ: 75, ದಿನಾಂಕ: 28–05–2018ರಲ್ಲಿ ವಿವರಣೆ ಕೋರಿದ್ದು, ಕೆಲವೊಂದು ಅಂಶಗಳಿಗೆ ಉತ್ತರವು ಸಮರ್ಪಕವಾಗಿರುವುದಿಲ್ಲ. |

| | |
|---|---|
| | ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯವು ರಹಸ್ಯ ಕಾರ್ಯವಾಗಿದ್ದಾಗ್ಯೂ, ಟೆಂಡರ್ ಕರೆಯಲು ಹಲವಾರು ತೊಡಕುಗಳಿದ್ದರೂ, ಈವರೆಗೂ ಸರ್ಕಾರದ ಅನುಮತಿ ಪಡೆಯದೆ, ಕೆ.ಟಿ.ಪಿ.ಪಿ. ನಿಯಮ 4(g) ಅಡಿಯಲ್ಲಿ ವಿನಾಯಿತಿಗೆ ಅನುಮತಿ ಕೋರದೆ ಮುದ್ರಣ ಕಾರ್ಯನಿರ್ವಹಿಸುತ್ತಿರುವುದು ಆಕ್ಷೇಪಾರ್ಹವಾಗಿರುತ್ತದೆ. ಆದ್ದರಿಂದ, ಸರ್ಕಾರದಿಂದ ಸೂಕ್ತ ಅನುಮತಿ ಪಡೆಯುವವರೆಗೂ ಮುದ್ರಣ ಕಾರ್ಯಭಾರದ ಹಂಚಿಕೆಯನ್ನು ಪಾರದರ್ಶಕತೆಯಿಂದ ನಡೆಸುವವರೆಗೂ ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯಕ್ಕೆ 2015–16 ಮತ್ತು 2016–17ನೇ ಸಾಲಿನಲ್ಲಿ ಪಾವತಿಸಿದ ರೂ.1,84,26,062–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. |
| **ಅನುಪಾಲನಾ ವರದಿ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕರಾರು ಒಪ್ಪಂದವನ್ನು ನವೀಕರಿಸಲಾಗುತ್ತದೆ ಹಾಗೂ ದರ ಹೆಚ್ಚಿಸಲಾಗಿರುತ್ತದೆ. ಈ ದರವನ್ನು 2012 ಮತ್ತು 2016ರ ಮಾರುಕಟ್ಟೆ ದರದಂತೆ ಹಾಗೂ ನೌಕರರ ವೇತನವನ್ನು ಆಧರಿಸಿ, ಶೇ.5 ಮತ್ತು ಶೇ.7ರಂತೆ ದರವನ್ನು ಹೆಚ್ಚಿಸಲಾಗಿರುತ್ತದೆ. ಸಾಮಾನ್ಯವಾಗಿ ಪ್ರತಿ ಶೇ.2ರಂತೆ ದರ ಹೆಚ್ಚಳ ಮಾಡಿದ್ದರೂ ಕೂಡ ಶೇ.16ರಷ್ಟು ಆಗುತ್ತಿದ್ದು, ಕುವೆಂಪು ವಿಶ್ವವಿದ್ಯಾಲಯವು ಎಂಟು ವರ್ಷಕ್ಕೆ ಶೇ.12ರಷ್ಟು ಮಾತ್ರ ಹೆಚ್ಚಳ ಮಾಡಿರುತ್ತದೆ.<br><br>ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯವು ಬಹಳ ರಹಸ್ಯದ್ದಾಗಿದ್ದು, ಮುದ್ರಕರ ಮಾಹಿತಿಯನ್ನು ಬಹಿರಂಗಪಡಿಸುವಂತಿಲ್ಲ. ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯವು ವಹಿಸಿದ ಕೆಲಸವನ್ನು ಅತೀ ಹೆಚ್ಚಿನ ರಹಸ್ಯ ಕಾಪಾಡಿಕೊಂಡು, ನಿಗದಿತ ಅವಧಿಯಲ್ಲಿ, ಯಾವುದೇ ತಪ್ಪುಗಳಿಲ್ಲದಂತೆ ಪರೀಕ್ಷಾ ಕಾರ್ಯದ ಘನತೆಯನ್ನು ಕಾಪಾಡುವಂತಹ ಮುದ್ರಕರಿಂದ ಮಾತ್ರ ಮುದ್ರಣ ಪ್ರಕ್ರಿಯೆ ಕೈಗೊಳ್ಳಬೇಕಾಗಿರುವುದರಿಂದ ಮಾನ್ಯ ಕುಲಪತಿಯವರ ಅನುಮೋದನೆ ಪಡೆದುಕೊಂಡು ಪ್ರತಿ ವರ್ಷ ಮುದ್ರಕರೊಂದಿಗೆ ಕರಾರನ್ನು ನವೀಕರಿಸಿಕೊಳ್ಳಲಾಗುವುದು.<br><br>ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯವು ಅತೀ ಹೆಚ್ಚಿನ ರಹಸ್ಯವಾಗಿದ್ದು, ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯ ಯಾವುದೇ ತಪ್ಪುಗಳಿಲ್ಲದಂತೆ ಪರೀಕ್ಷಾ ಕಾರ್ಯದ ಘನತೆಯನ್ನು ಕಾಪಾಡುವಂತಹ ಮುದ್ರಕರಿಂದ ಮಾತ್ರ ಮುದ್ರಣ ಪ್ರಕ್ರಿಯೆ ಕೈಗೊಳ್ಳಬೇಕಾಗಿರುವುದರಿಂದ, ವಿಶ್ವವಿದ್ಯಾಲಯಕ್ಕೆ ಈ ಬಗ್ಗೆ ವಿಶ್ವಾಸವಿರುವ ಮುದ್ರಕರನ್ನು ಗುರುತಿಸಿ ಮುದ್ರಣ ಪ್ರಕ್ರಿಯೆ ಮಾಡಲಾಗುತ್ತದೆ.<br><br>ಮೇಲಿನ ಅಂಶಗಳ ಜೊತೆಯಲ್ಲಿ ಮುದ್ರಕರ ಮಾಹಿತಿಯನ್ನು ಬಹಿರಂಗಪಡಿಸದೆ ರಹಸ್ಯವಾಗಿಡುವ ಅವಶ್ಯಕತೆಯಿರುವುದರಿಂದ ಸರ್ಕಾರದ ಅನುಮತಿ ಪಡೆಯುವ ಅವಶ್ಯಕತೆ ಇರುವುದಿಲ್ಲ ಹಾಗೂ ಪ್ರಶ್ನೆಪತ್ರಿಕೆ ಮುದ್ರಣಕ್ಕೆ ಕೆಟಿಪಿಪಿ 4(ಜಿ) ಅಡಿಯಲ್ಲಿ ವಿನಾಯಿತಿ ಇರುತ್ತದೆ.<br><br>ರಾಜ್ಯದ ಇನ್ನಿತರೆ ವಿಶ್ವವಿದ್ಯಾಲಯಗಳೊಂದಿಗೆ ಮೌಖಿಕವಾಗಿ ಸಮಾಲೋಚಿಸಿ, ಸದರಿ ವಿಶ್ವವಿದ್ಯಾಲಯಗಳಲ್ಲಿ ಅನುಸರಿಸುತ್ತಿರುವ ಕ್ರಮದಂತೆ ಹಾಗೂ ಮುದ್ರಕರ ಕಾರ್ಯಾನುಭವ, ಕೆಲಸ ನಿರ್ವಹಿಸುವ ಸಾಮರ್ಥ್ಯ, ವಿಶೇಷ ಕೆಲಸಗಳಿಗೆ ಸಂಬಂಧಿಸಿದ ನೈಪುಣ್ಯತೆ ಮತ್ತು ಮುದ್ರಿಸಿ ಸರಬರಾಜು ಮಾಡಲು ಇರುವ ಸಮಯವನ್ನು ಆಧರಿಸಿ ಮಾನ್ಯ ಕುಲಪತಿಯವರು ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯವನ್ನು ವಿವಿಧ ಸಂಸ್ಥೆಗಳಿಗೆ ಹಂಚಿಕೆ ಮಾಡುತ್ತಾರೆ.<br><br>ಪ್ರಶ್ನೆಪತ್ರಿಕೆ ಮುದ್ರಣದಲ್ಲಿ ರಹಸ್ಯ ಮತ್ತು ಗೌಪ್ಯತೆ ಕಾಪಾಡುವುದು ಅಗತ್ಯವಾಗಿರುವುದರಿಂದ, ಅದಕ್ಕೆ ಅಗತ್ಯವಿರುವ ಸಿಬ್ಬಂದಿಗಳ ಕಾರ್ಯಕ್ಷಮತೆ, ಸಾಮರ್ಥ್ಯ ಇತ್ಯಾದಿಗಳನ್ನು ಆಧರಿಸಿ ಮುದ್ರಕರು ವಿಶ್ವವಿದ್ಯಾಲಯದೊಂದಿಗೆ ಸಮಾಲೋಚಿಸಿ ದರ ನಿಗದಿಪಡಿಸಿರುತ್ತಾರೆ.<br><br>ಮೇಲಿನಂತೆ ಒದಗಿಸಿರುವ ಮಾಹಿತಿಯ ಪ್ರಕಾರ ಪ್ರಶ್ನೆಪತ್ರಿಕೆ ಮುದ್ರಣದಲ್ಲಿ ವಿಶ್ವವಿದ್ಯಾಲಯವು ನಿಯಮಗಳನ್ನು ಉಲ್ಲಂಘಿಸದೆ, ಪರೀಕ್ಷಾ ಕಾರ್ಯಗಳ ಘನತೆ ಮತ್ತು ಪಾವಿತ್ರತೆಯನ್ನು ಕಾಪಾಡಿಕೊಂಡು ನಿರ್ವಹಿಸಿಕೊಂಡು ಬರಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಶ್ನೆಪತ್ರಿಕೆ ಬಹಿರಂಗದಂತಹ ಘಟನೆಗಳು ನಮ್ಮ ವಿಶ್ವವಿದ್ಯಾಲಯದಲ್ಲಿ ಇರುವುದಿಲ್ಲ. ಕುವೆಂಪು ವಿಶ್ವವಿದ್ಯಾಲಯದ ಪರೀಕ್ಷಾ ವ್ಯವಸ್ಥೆಯು ರಾಜ್ಯದಲ್ಲಿಯೇ ಉತ್ತಮದ್ದಾಗಿದ್ದು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರ ಪ್ರಶಂಸೆಗೆ ಪಾತ್ರವಾಗಿರುತ್ತದೆ.<br><br>ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಹಾಗೂ ಮೇಲೆ ಒದಗಿಸಿರುವ ಮಾಹಿತಿಯನ್ನು ಪರಿಗಣಿಸಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

**23**

**ಪರೀಕ್ಷಾ ಕಾರ್ಯದಲ್ಲಿ ಕಾರ್ಯನಿರ್ವಹಿಸಿದ ಸಿಬ್ಬಂದಿಯವರಿಗೆ ನಿಯಮಬಾಹಿರವಾಗಿ ಲಾಡ್ಜಿಂಗ್ ಚಾರ್ಜಸ್ ಪಾವತಿಸಿರುವುದು. ರೂ.34,65,839-00 (ವಸೂಲಾತಿ)**

ಕುವೆಂಪು ವಿಶ್ವವಿದ್ಯಾಲಯದಲ್ಲಿ ದೂರಶಿಕ್ಷಣ ನಿರ್ದೇಶನಾಲಯದಿಂದ ನಡೆಸಲ್ಪಡುವ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸಿದ ಸಿಬ್ಬಂದಿಯವರಿಗೆ ಪ್ರಯಾಣ ಭತ್ಯ, ದಿನಭತ್ಯೆ ನೀಡುವುದರ ಜೊತೆಗೆ ನಿಯಮಬಾಹಿರವಾಗಿ ಲಾಡ್ಜಿಂಗ್ ಚಾರ್ಜಸ್ ಪಾವತಿಸಿರುವುದು ಕಂಡುಬಂದಿದೆ. ದೂರಶಿಕ್ಷಣ ಕೇಂದ್ರದಿಂದ ನಡೆಸಲ್ಪಡುವ ಪರೀಕ್ಷಾ ಕೆಲಸಗಳಿಗಾಗಿ ಭಾರತದ ವಿವಿಧ ನಗರಗಳಿಗೆ ಪ್ರವಾಸ ಮಾಡಿರುವ ಸಿಬ್ಬಂದಿಯವರಿಗೆ ಪ್ರಯಾಣ ಭತ್ಯೆ, ದಿನಭತ್ಯೆ ಪಾವತಿಸಿರುವುದರ ಜೊತೆಗೆ ನಿಯಮಬಾಹಿರವಾಗಿ ಲಾಡ್ಜಿಂಗ್ ಚಾರ್ಜಸ್ ಎಂದು ಪ್ರತಿದಿನ ತಂಗುವಿಕೆಗೆ ರೂ.750-00 ರಿಂದ 1,000-00ದವರೆಗೆ ಒಟ್ಟಾರೆ ರೂ.20,000-00ಕ್ಕಿಂತ ಅಧಿಕವಾಗಿ ಭತ್ಯೆಯನ್ನು ಪಾವತಿಸಿರುವುದು ಕಂಡುಬಂದಿದೆ.

ಪ್ರಯಾಣ ಭತ್ಯೆ ಹಾಗೂ ದಿನಭತ್ಯೆಯನ್ನು ನೀಡುವ ಉದ್ದೇಶವೇ ಕೇಂದ್ರ ಸ್ಥಾನದಿಂದ ಕಛೇರಿ ಕರ್ತವ್ಯದ ಮೇಲೆ ಹೊರಗಡೆ ತಂಗಿದ್ದಾಗ ಖರ್ಚು-ವೆಚ್ಚಗಳನ್ನು ಭರಿಸುವಿಕೆಗಾಗಿ ಆಗಿರುತ್ತದೆ. ಕೆ.ಸಿ.ಎಸ್.ಆರ್. ನಿಯಮ-450ರ ಮೇರೆಗೆ Travelling Allowance means an allowance granted to a government servant to cover the expenses which he incurres in travelling in the interest of pulic services ಎಂದು ಸ್ಪಷ್ಟವಾಗಿರುತ್ತದೆ. ಮುಂದುವರೆದು, ದಿನಭತ್ಯೆ ಪಾವತಿಸುವ ಉದ್ದೇಶವು ಇದೇ ಆಗಿರುತ್ತದೆ. ಇವುಗಳನ್ನು ಹೊರತುಪಡಿಸಿ ಲಾಡ್ಜಿಂಗ್ ಚಾರ್ಜಸ್ ಎಂದು ಪ್ರತಿಯೊಬ್ಬರಿಗೂ ರೂ.20,000-00 ವರಗೆ ಪಾವತಿಸಿರುವುದು ನಿಯಮಬಾಹಿರವಾಗಿರುತ್ತದೆ. ವಿಶ್ವವಿದ್ಯಾಲಯದ ನೌಕರರು ಸಹ ಕೆ.ಸಿ.ಎಸ್.ಆರ್. ನಿಯಮದಡಿಯೇ ಕಾರ್ಯ ನಿರ್ವಹಿಸುತ್ತಿದ್ದು, ಪ್ರಯಾಣ ಭತ್ಯೆ, ದಿನಭತ್ಯೆಗಳು ಕೆ.ಸಿ.ಎಸ್.ಆರ್. ನಿಯಮ 45ರ ಪರಿಷ್ಕೃತ ಪ್ರಯಾಣ ದರಗಳ ಸರ್ಕಾರದ ಆದೇಶ ಸಂಖ್ಯೆ: ಆಇ3/ ಸೇ ನಿ/ 2012, ದಿನಾಂಕ: 14-06-2012ರಲ್ಲಿ ಸೂಚಿಸಿರುವ ದರಗಳಿಗನುಗುಣವಾಗಿ ಪಾವತಿಸಬೇಕಾಗುತ್ತದೆ. ಈ ಸಂಬಂಧ 2015-16 ಮತ್ತು 2016-17ನೇ ಸಾಲಿನಲ್ಲಿ ನಿಯಮಬಾಹಿರವಾಗಿ ಲಾಡ್ಜಿಂಗ್ ಚಾರ್ಜಸ್ ಎಂದು ಹೆಚ್ಚುವರಿಯಾಗಿ ಪಾವತಿಸಿರುವ ರೂ.34,65,839-00ಗಳನ್ನು ವಸೂಲಾತಿಗೆ ಸೂಚಿಸಿದೆ. ವಿವರ ಈ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ ರೂ. |
|---|---|---|
| 01 | 874107/12-12-2016 | 1206150.00 |
| 02 | 873927/13-05-2016 | 26000.00 |
| 03 | 873927/13-05-2016 | 27000.00 |
| 04 | 873929/16-05-2016 | 21500.00 |
| 05 | 873929/16-05-2016 | 25000.00 |
| 06 | 271921/09-11-2015 | 45589.00 |
| 07 | 802616/16-05-2015 | 326250.00 |
| 08 | 271906/26-09-2015 | 1237750.00 |
| 09 | 2711910/07-10-2015 | 206250.00 |
| 10 | 271924/20-11-2015 | 280350.00 |
| 11 | 271950/06-01-2016 | 64000.00 |
| | **ಒಟ್ಟು ಮೊತ್ತ ರೂ.** | **34,65,839.00** |

**ಅನುಪಾಲನಾ ವರದಿ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಯಗಳ ಅಧಿನಿಯಮ, 2000 - ಪ್ರಕರಣ-29(ಸಿ)ರ ಪ್ರಕಾರ ಪರೀಕ್ಷಾ ಕಾರ್ಯಗಳ ಉಪಲಬ್ಧಗಳು, ಪ್ರಯಾಣ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ನಿಗದಿಪಡಿಸುವ ಅಧಿಕಾರವನ್ನು ವಿಶ್ವವಿದ್ಯಾನಿಲಯದ ಉನ್ನತ ಪ್ರಾಧಿಕಾರವಾದ ಸಿಂಡಿಕೇಟ್ ಹೊಂದಿರುತ್ತದೆ. ಅದರಂತೆ ದೂರಶಿಕ್ಷಣದ ವಿವಿಧ ಸ್ನಾತಕ/ ಸ್ನಾತಕೋತ್ತರ / ಪಿ.ಜಿ. ಡಿಪ್ಲೊಮ ಪರೀಕ್ಷಾ ಕಾರ್ಯಗಳಿಗೆ ತೆರಳುವ ಅಧಿಕಾರಿ/ ಸಿಬ್ಬಂದಿಗಳಿಗೆ ಟಿ.ಎ./ ಡಿ.ಎ./ ಸಂಭಾವನೆ/ ವಾಸ್ತವ್ಯ ಭತ್ಯೆಗಳನ್ನು ಪಾವತಿಸುವ ಸಂಬಂಧ ಪರೀಕ್ಷಾ ವಿಭಾಗದಿಂದ ತಜ್ಞರ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ದಿನಾಂಕ:06-05-2010ರಂದು ಸಭೆ ಸೇರಿ ನಿಗದಿಪಡಿಸಿದ ದೂರಶಿಕ್ಷಣ ಪರೀಕ್ಷಾ ಕಾರ್ಯಗಳ ದರಗಳ ಪಟ್ಟಿಯನ್ನು ದಿನಾಂಕ:14-05-2010 ರಂದು ಜರುಗಿದ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪರೀಕ್ಷಾ ವಿಭಾಗದಿಂದ ಕಛೇರಿ ಆದೇಶ ಸಂಖ್ಯೆ: ಕುವಿ:ಲೆಶಾ-2:2010-11: 2843, ದಿನಾಂಕ:02-03-2010ರ ಆದೇಶದಂತೆ ದೂರಶಿಕ್ಷಣ ಪರೀಕ್ಷಾ ಕಾರ್ಯಗಳಿಗೆ ಅಧಿಕಾರಿ/ ಸಿಬ್ಬಂದಿಗಳಿಗೆ ಪ್ರಯಾಣ ಭತ್ಯೆ/ ದಿನಭತ್ಯೆ/ ವಾಸ್ತವ್ಯ ಭತ್ಯೆ/ ಸಂಭಾವನೆಗಳನ್ನು ಪಾವತಿಸಲಾಗುತ್ತಿದೆ.

ಕುವೆಂಪು ವಿಶ್ವವಿದ್ಯಾನಿಲಯದ ದೂರಶಿಕ್ಷಣದ ಅಡಿಯಲ್ಲಿ ಪ್ರಾರಂಭವಾದ ಸ್ನಾತಕ/ ಸ್ನಾತಕೋತ್ತರ ಮತ್ತು ಡಿಪ್ಲೊಮ ಕೋರ್ಸ್‌ಗಳ ಪದವಿ ಪರೀಕ್ಷೆಗಳ ಪರೀಕ್ಷಾ ಕಾರ್ಯನಿಮಿತ್ತ ರಾಜ್ಯದ ಒಳಗೆ ಹಾಗೂ ದೂರದ ಹೊರ ರಾಜ್ಯಗಳ ಪರೀಕ್ಷಾ ಕೇಂದ್ರಗಳಿಗೆ ವಿಶ್ವವಿದ್ಯಾನಿಲಯದ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರನ್ನು

| | |
|---|---|
| | ನಿಯೋಜಿಸಲಾಗುತ್ತಿತ್ತು. ಇದರ ಜೊತೆಗೆ ದೂರಶಿಕ್ಷಣ ಪರೀಕ್ಷಾ ಕಾರ್ಯಗಳಿಗೆ ತೆರಳುವ ವಿಶ್ವವಿದ್ಯಾನಿಲಯದ ಸಿಬ್ಬಂದಿಗಳು ತಮ್ಮ ಜೊತೆಯಲ್ಲಿ ಪರೀಕ್ಷೆ ಪ್ರಶ್ನೆಪತ್ರಿಕೆಗಳನ್ನು ಹಾಗೂ ಇತರೆ ಪರೀಕ್ಷಾ ರಹಸ್ಯ ದಾಖಲಾತಿಗಳನ್ನು ತೆಗೆದುಕೊಂಡು ಹೋಗುತ್ತಾರೆ. ಪರೀಕ್ಷಾ ಕಾರ್ಯವು ರಹಸ್ಯ ಕಾರ್ಯವಾಗಿರುವುದರಿಂದ ಹಾಗೂ ಪ್ರಶ್ನೆಪತ್ರಿಕೆ ಪರೀಕ್ಷಾ ರಹಸ್ಯ ದಾಖಲಾತಿಗಳನ್ನು ಪರೀಕ್ಷೆ ಪ್ರಾರಂಭದಿಂದ ಮುಕ್ತಾಯದವರೆಗೂ ಕಾಪಾಡಿಕೊಳ್ಳಬೇಕಾಗಿರುವುದರಿಂದ ಅವುಗಳ ಸುರಕ್ಷತೆ ಹಿತದೃಷ್ಟಿಯಿಂದ ಸುರಕ್ಷಿತವಾದ ವಾಸ್ತವ್ಯ ವ್ಯವಸ್ಥೆ ಹೊಂದಿರುವ ವಸತಿಗೃಹದಲ್ಲಿಯೇ ಸಿಬ್ಬಂದಿಗಳು ಉಳಿಯಬೇಕಾಗಿದ್ದು ಅವಶ್ಯಕವಾಗಿರುತ್ತದೆ.<br><br>ಆ ಸಂದರ್ಭದಲ್ಲಿ ಪರೀಕ್ಷಾ ಕಾರ್ಯದ ನಿಮಿತ್ತ ತೆರಳಿದ್ದ ಸಿಬ್ಬಂದಿಗಳೂ ಕ್ಲೇಮು ಮಾಡುತ್ತಿದ್ದ ಟಿ.ಎ./ಡಿ.ಎ./ ವಾಸ್ತವ್ಯ ಭತ್ಯೆ ಬಿಲ್ಲುಗಳಲ್ಲಿ ಬೇರೆ ಬೇರೆ ದರಗಳಲ್ಲಿ ಕ್ಲೇಮು ಮಾಡುತ್ತಿದ್ದರು. ಆದ್ದರಿಂದ ಈ ಸಂಬಂಧ ಏಕರೂಪದ ದರಗಳನ್ನು ಪಾವತಿಸುವ ಸಂಬಂಧ ಮಾನ್ಯ ಕುಲಪತಿಯವರ ಆದೇಶದನುಸಾರ ಒಂದು ಪರೀಕ್ಷಾ ಸಮಿತಿಯನ್ನು ರಚಿಸಲಾಯಿತು. ಸದರಿ ಸಮಿತಿಯು ಈ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ಪರೀಕ್ಷಾ ಕಾರ್ಯನಿಮಿತ್ತ ರಾಜ್ಯದ ಹಾಗೂ ಹೊರ ರಾಜ್ಯದ ವಿವಿಧ ಪ್ರದೇಶಗಳಿಗೆ ತೆರಳುವ ಸಿಬ್ಬಂದಿಗಳಿಗೆ ಆಯಾ ಪ್ರಾದೇಶಿಕ ಸ್ಥಾನಮಾನಗಳ ವರ್ಗೀಕರಣದ ಹಿನ್ನೆಲೆಯಲ್ಲಿ ತಗಲಬಹುದಾದ ದಿನಭತ್ಯೆ, ವಾಸ್ತವ್ಯ ಭತ್ಯೆ ಮತ್ತು ಇತರೆ ಸಂಭಾವ್ಯ ಭತ್ಯೆಗಳನ್ನು ಅರ್ಹಭತ್ಯೆಯೆಂದು ಪರಿಗಣಿಸಿ ಪಾವತಿಸಲು ದಿನಾಂಕ: 06-05-2010ರಂದು ನಡೆದ ಸಭೆಯಲ್ಲಿ ಶಿಫಾರಸ್ಸು ಮಾಡಿರುತ್ತದೆ.<br><br>ನಿಯೋಜಿಸಲ್ಪಡುವ ಸಿಬ್ಬಂದಿಗಳ ಟಿ.ಎ./ಡಿ.ಎ./ ಸಂಭಾವನೆ/ ವಾಸ್ತವ್ಯ ಭತ್ಯೆಗಳ ವೆಚ್ಚವನ್ನು ದೂರಶಿಕ್ಷಣ ಪರೀಕ್ಷೆಗೆಂದು ಸಂಗ್ರಹಿಸುವ ಪರೀಕ್ಷಾ ಶುಲ್ಕ ನಿಧಿಯಿಂದಲೇ ಭರಿಸಲಾಗುತ್ತಿದ್ದು, ಇದರಿಂದ ವಿಶ್ವವಿದ್ಯಾನಿಲಯಕ್ಕೆ/ ಸರ್ಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಉಂಟಾಗುವುದಿಲ್ಲ.<br><br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **24** | **ನಿಯಮಬಾಹಿರವಾಗಿ ಸ್ಥಳೀಯ ಭತ್ಯೆ (Conveyance Allowance) ಪಾವತಿಸಿರುವುದು. ರೂ.15,44,536-00 (ವಸೂಲಾತಿ)**<br>ಪರೀಕ್ಷಾ ಖಾತೆಯ ಎನ್.ಡಿ.ಸಿ. ಬಿಲ್‌ಗಳನ್ನು ಪರಿಶೀಲಿಸಲಾಗಿ, ಕುವೆಂಪು ವಿಶ್ವವಿದ್ಯಾಲಯದ ವಿವಿಧ ವಿಭಾಗದ ಅಧ್ಯಾಪಕರು ಹಾಗೂ ಸಿಬ್ಬಂದಿ ವರ್ಗದವರಿಗೆ ಪ್ರತಿದಿನ ರೂ.700-00ರಂತೆ ಸ್ಥಳೀಯ ಭತ್ಯೆ ಪಾವತಿಸಿರುವುದು ಕಂಡುಬಂದಿರುತ್ತದೆ. The Manual of Contingent Expenditure Act, 1958 Chapter 11(17) ರ ನಿಯಮಾವಳಿಗಳ ಪ್ರಕಾರ Conveyance Allowance means Allowance offered to employees of a organisation to compensate for their travel from one place to respective work location two officers concerned exceeds ONE MILE ಎಂದಿದ್ದು, ಆದಾಗ್ಯೂ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಾಪಕರು ಮತ್ತು ಸಿಬ್ಬಂದಿಗಳಿಗೆ ದೂರಶಿಕ್ಷಣ, ಪಿಹೆಚ್.ಡಿ., Viva Practice Exam, ಪರೀಕ್ಷಾ ಮೌಲ್ಯಮಾಪನ ಹಾಗೂ ಇತರೆ ಕೆಲಸಗಳಿಗೆ ವಿಶ್ವವಿದ್ಯಾಲಯದ ಆವರಣದಲ್ಲೇ ನಿರ್ವಹಿಸಿದ ಕಾರ್ಯಗಳಿಗೆ ಸ್ಥಳೀಯ ಭತ್ಯೆಯನ್ನು ಪಾವತಿಸಿರುವುದು ನಿಯಮಬಾಹಿರವಾಗಿದ್ದು, ಕಾಯ್ದೆಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಈ ಸಂಬಂಧ ಆಡಿಟ್ ವಿಚಾರಣೆ ಸಂಖ್ಯೆ: 65 ಮತ್ತು 90ರಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿದ್ದರೂ, ಸಮರ್ಪಕವಾದ ಉತ್ತರ ನೀಡಿರುವುದಿಲ್ಲ. ಆದ್ದರಿಂದ, ರೂ.15,44,536-00 (323980+1220556)ಗಳನ್ನು ವಸೂಲಾತಿಗೆ ಸೂಚಿಸಿದೆ. |
| **ಅನುಪಾಲನಾ ವರದಿ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ರ ನಿಯಮ 29(ಸಿ) ಪ್ರಕಾರ ಪರೀಕ್ಷಾ ಕಾರ್ಯಗಳ ಉಪಲಬ್ಧಗಳು, ಪ್ರವಾಸ ಭತ್ಯೆ ಮತ್ತು ಇತರೆ ಭತ್ಯೆಗಳನ್ನು ನಿಗದಿಪಡಿಸುವ ಅಧಿಕಾರವನ್ನು ಸಿಂಡಿಕೇಟ್ ಹೊಂದಿರುತ್ತದೆ. ಅದರಂತೆ ಸಿಂಡಿಕೇಟ್ ನಿರ್ಣಯದಂತೆ ವಿವಿಧ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಪ್ರವಾಸ ಭತ್ಯೆ/ದಿನಭತ್ಯೆ/ ಸಂಭಾವನೆ/ ಸ್ಥಳೀಯ ಭತ್ಯೆ/ ಪರೀಕ್ಷಾ ಸಾದಿಲ್ವಾರು ಇತ್ಯಾದಿಗಳನ್ನು ಪಾವತಿಸುವ ಸಂಬಂಧ ನಿಗದಿತ ದರಗಳನ್ನು ನಿಗದಿಪಡಿಸಿ ಆದೇಶವನ್ನು ಹೊರಡಿಸಲಾಗುತ್ತದೆ. ಸದರಿ ಆದೇಶದಲ್ಲಿ ನಿಗದಿಪಡಿಸಿದಂತೆ ವಿವಿಧ ಪರೀಕ್ಷಾ ಕಾರ್ಯಗಳ ಟಿಎ/ಡಿಎ/ ಸಂಭಾವನೆ/ ಸ್ಥಳೀಯ ಭತ್ಯೆ ಇತ್ಯಾದಿಗಳನ್ನು ಪಾವತಿಸಲಾಗುತ್ತದೆ. ಅದೇ ರೀತಿಯಲ್ಲಿ ದೈನಂದಿನ ಕೆಲಸ ಕಾರ್ಯಗಳ ಜೊತೆಗೆ ಹೆಚ್ಚುವರಿಯಾಗಿ ದೂರಶಿಕ್ಷಣ ಪರೀಕ್ಷಾ ಕಾರ್ಯಗಳನ್ನು ನಿರ್ವಹಿಸುವ ಅಧ್ಯಾಪಕರು/ ಸಿಬ್ಬಂದಿಗಳಿಗೆ ಪರೀಕ್ಷಾ ಸಂಭಾವನೆ/ ಸ್ಥಳೀಯ ಭತ್ಯೆ ಪಾವತಿ ಮಾಡಲಾಗಿರುತ್ತದೆ.<br><br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |

**25**

**ವಿಶ್ವವಿದ್ಯಾಲಯದ ವಿವಿಧ ಖಾತೆಗಳಲ್ಲಿ ಅನಧಿಕೃತ ಗೌರವ ಧನ ಮತ್ತು ಪರೀಕ್ಷಾ ಸಂಭಾವನೆ ಪಾವತಿಸಿರುವುದು. ರೂ.1,05,48,865–00 (ವಸೂಲಾತಿ)**

ಕರ್ನಾಟಕ ಸರ್ಕಾರದ ಶಿಕ್ಷಣ ಮಸೂದೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮಗಳು, 2000 ಮತ್ತು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಇಡಿ 100/ ಯು.ಎನ್.ಇ./ 2000, ಬೆಂಗಳೂರು, ದಿನಾಂಕ:08–08–2000ದ ಪ್ರಕಾರ ಯು.ಜಿ.ಸಿ./ಎ.ಐ.ಸಿ.ಟಿ.ಇ. ವೇತನ ಪಡೆಯುವ ಸಿಬ್ಬಂದಿಯವರಿಗೆ ಪರೀಕ್ಷಾ ಸಂಭಾವನೆ ಮತ್ತು ಇತರ ಗೌರವ ಧನ ಪಾವತಿ ಇರುವುದಿಲ್ಲವೆಂದಿದ್ದರೂ 2015–16 ಮತ್ತು 2016–17ನೇ ಸಾಲಿಗೆ ಒಟ್ಟು ರೂ.1,05,48,865–00ಗಳನ್ನು ಪಾವತಿಸಿದ್ದು, ವಿವರ ಕೆಳಕಂಡಂತಿದೆ.

| ಕ್ರ ಸಂ. | ವಿಭಾಗಗಳು | ಗೌರವ ಸಂಭಾವನೆ/ ಪರೀಕ್ಷಾ ಸಂಭಾವನೆ ರೂ. | |
|---|---|---|---|
| | | **2015–16** | **2016–17** |
| 1 | ವಿದ್ಯಾರ್ಥಿ ಬೆಂಬಲ ಸೇವೆಗಳು | 197600.00 | 201500.00 |
| 2 | ಯು.ಜಿ.ಸಿ. ವೇತನ ಪಡೆಯುತ್ತಿರುವ ಅಧ್ಯಾಪಕರಿಗೆ ಪಾವತಿಸಿರುವ ಪರೀಕ್ಷಾ ಸಂಭಾವನೆ | 7940738.00 | 2209027.00 |
| | **ಒಟ್ಟು ರೂ.** | **8138338.00** | **2410527.00** |

ಮೇಲ್ಕಂಡ ಆದೇಶವನ್ನು ಉಲ್ಲಂಘಿಸಿ ಪಾವತಿಸಿರುವ ಒಟ್ಟು ರೂ.1,05,48,865–00 (ರೂ.8138338+2410527)ಗಳನ್ನು ವಸೂಲಾತಿಗೆ ಸೂಚಿಸಿದೆ.

**ಅನುಪಾಲನಾ ವರದಿ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 – ಪ್ರಕರಣ–29(ಸಿ)ರ ಪ್ರಕಾರ ಪರೀಕ್ಷಾ ಕಾರ್ಯಗಳ ಉಪಲಬ್ಧಗಳು ಮತ್ತು ಇತರೆ ಭತ್ಯೆಗಳನ್ನು ನಿಗದಿಪಡಿಸುವ ಅಧಿಕಾರವನ್ನು ಸಿಂಡಿಕೇಟ್ ಹೊಂದಿದ್ದು, ಸಿಂಡಿಕೇಟ್ ನಿರ್ಣಯದಂತೆ ವಿವಿಧ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವ ಹೊರ ವಿಶ್ವವಿದ್ಯಾನಿಲಯಗಳ ಮತ್ತು ಸ್ಥಳೀಯ ವಿಶ್ವವಿದ್ಯಾನಿಲಯದ ಯು.ಜಿ.ಸಿ. ವೇತನ ಪಡೆಯುತ್ತಿರುವ ಅಧ್ಯಾಪಕರಿಗೂ ಪ್ರವಾಸ ಭತ್ಯೆ/ದಿನಭತ್ಯೆ/ಸಂಭಾವನೆ/ಸ್ಥಳೀಯ ಭತ್ಯೆ ಪಾವತಿಸಲಾಗುತ್ತಿದೆ.

ದೂರಶಿಕ್ಷಣ ಪರೀಕ್ಷಾ ಮೌಲ್ಯಮಾಪನ ನಿರ್ವಹಿಸಲು ವಿಶ್ವವಿದ್ಯಾನಿಲಯದ ಕೋರಿಕೆ ಮೇರೆಗೆ ಹೊರ ವಿಶ್ವವಿದ್ಯಾನಿಲಯದಿಂದ ಬರುವ ಅಧ್ಯಾಪಕರಿಗೆ ಭತ್ಯೆಗಳನ್ನು ಪಾವತಿಸಬೇಕಾಗಿರುತ್ತದೆ. ಮೌಲ್ಯಮಾಪಕರು ಮೌಲ್ಯಮಾಪನ ಮಾಡಲು ಬಾರದಿದ್ದ ಪಕ್ಷದಲ್ಲಿ ನಿಗದಿತ ಸಮಯದೊಳಗೆ ವಿದ್ಯಾರ್ಥಿಗಳಿಗೆ ಫಲಿತಾಂಶವನ್ನು ಕೊಡಲು ಕಷ್ಟಸಾಧ್ಯವಾಗುವುದರಿಂದ ಮೌಲ್ಯಮಾಪನ ಮಾಡಿಸಲಾಗುತ್ತದೆ.

ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ.

**26**

**2015–16ನೇ ಸಾಲಿನ ಸಹ್ಯಾದ್ರಿ ಉತ್ಸವ–2015ರ ಸಮಾರಂಭಕ್ಕೆ ಎ.ಸಿ. ಹುಂಡಿಯಲ್ಲಿ ಡ್ರಾ ಮಾಡಿದ ಮೊತ್ತಕ್ಕೆ ಸಲ್ಲಿಸಲಾದ ಎನ್.ಡಿ.ಸಿ. ಹುಂಡಿಯ ನ್ಯೂನತೆಗಳು. ರೂ.4,66,900–00 (ಆಕ್ಷೇಪಣೆ)**

ಈ ಸಂಬಂಧ **ಆಡಿಟ್ ವಿಚಾರಣೆ ಸಂಖ್ಯೆ:159, ದಿನಾಂಕ:21–08–2018**ರಲ್ಲಿ ವಿವರಣೆ ತಿಳಿಸಲು ಸೂಚಿಸಲಾಗಿತ್ತು. ಸದರಿ ವಿವರಣೆಗೆ ಸೂಕ್ತ ದಾಖಲೆಗಳು ಲಭ್ಯವಿರುವುದಿಲ್ಲ ಮತ್ತು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.

i. ರೂ.2,00,000–00ಕ್ಕಿಂತ ಮೇಲ್ಪಟ್ಟ ಹಣವನ್ನು ಎ.ಸಿ. ಹುಂಡಿಯಲ್ಲಿ ಪಡೆಯಲು ಸರ್ಕಾರದ ಆರ್ಥಿಕ ಇಲಾಖೆಯ ಅನುಮೋದನೆ ಅಗತ್ಯವೆಂಬ ನಿಯಮವಿದ್ದರೂ (ಸರ್ಕಾರದ ಆದೇಶ ಸಂಖ್ಯೆ:FD 2 TFP 2010, dated 30–10–2010) ರೂ.6,00,000–00ಗಳ ಮೊತ್ತವನ್ನು ಯಾವ ಆಧಾರದ ಮೇಲೆ ಮಂಜೂರು ಮಾಡಲಾಗಿದೆ.

ii. ಎಂ.ಸಿ.ಇ. ಕಾಯ್ದೆ, 1958 – ನಿಯಮ–36(6)ರ ಪ್ರಕಾರ, ಸದರಿ ಎ.ಸಿ. ಹುಂಡಿಗೆ ಎನ್.ಡಿ.ಸಿ. ಬಿಲ್‌ಗಳನ್ನು 3 ತಿಂಗಳ ಒಳಗಾಗಿ ಹೊಂದಾಣಿಕೆ ಮಾಡಬೇಕೆಂಬ ನಿಯಮವಿದ್ದು, ತಪ್ಪಿದಲ್ಲಿ ಎ.ಸಿ. ಹುಂಡಿಯಲ್ಲಿ ಪಡೆದುಕೊಂಡ ಅಧಿಕಾರಿಯ ಸಂಬಳವನ್ನು ತಡೆಹಿಡಿಯಬೇಕೆಂಬ ನಿಯಮವಿದ್ದು, ಸದರಿ ಎ.ಸಿ. ಹುಂಡಿಗೆ ಎನ್.ಡಿ.ಸಿ. ಬಿಲ್ ಅನ್ನು ಸುಮಾರು 10 ತಿಂಗಳು ತಡವಾಗಿ ಸಲ್ಲಿಸಿದ್ದು, ಈ ಬಗ್ಗೆ ಕೈಗೊಂಡ ಕ್ರಮದ ವಿವರ.

a) ಇಷ್ಟೊಂದು ದೊಡ್ಡಮಟ್ಟದ ಉತ್ಸವ ಆಯೋಜನೆಗೆ, ಊಟೋಪಚಾರಕ್ಕೆ ರೂ.4,66,900–00 ಗಳನ್ನು ಟೆಂಡರ್ ಕರೆಯದೇ ಪಾವತಿಸಿರುವುದು ಕೆ.ಟಿ.ಪಿ.ಪಿ. ಕಾಯ್ದೆ, 1999 ಮತ್ತು ನಿಯಮ–2000, ಸೆಕ್ಷನ್–5ರ ಉಲ್ಲಂಘನೆಯಾಗಿದೆ.

| | |
|---|---|
| | b) ಸದರಿಯವರ ದರಪಟ್ಟಿ ಪಡೆದಿದ್ದು, ದರಪಟ್ಟಿ ಪರಿಶೀಲಿಸಲಾಗಿ, ನವ್ಯಶ್ರೀ ಕೇಟರಿಂಗ್ ಸರ್ವೀಸ್ ಇವರ ದರಪಟ್ಟಿಯಲ್ಲಿ ಯಾವುದೇ TIN, PAN, Invoice Number ಮತ್ತು ಮೊಹರು ಇರುವುದಿಲ್ಲ. ಮೇಲ್ನೋಟಕ್ಕೆ ಕಂಪ್ಯೂಟರ್ ಮುದ್ರಿತ ಪತ್ರದಂತಿದೆ.<br>c) ದರಪಟ್ಟಿ ಪ್ರಕಟಣೆಯಲ್ಲಿ ಸಂಚಾಲಕರು ಎಷ್ಟು ಜನರಿಗೆ, ಅಂದಾಜು ಊಟದ ವ್ಯವಸ್ಥೆ ಎಂದು ನಮೂದಾಗಿರುವುದಕ್ಕೆ ಸೂಕ್ತ ಕಾರಣ ನೀಡಿರುವುದಿಲ್ಲ.<br>d) ನವ್ಯಶ್ರೀ ಕೇಟರಿಂಗ್ ಸರ್ವೀಸ್ ಇವರ ಬಿಲ್‌ನಲ್ಲಿ TIN ನಂಬರ್ ಹೊಂದಿದ್ದರೂ VAT/ Service Tax ಪಾವತಿಸಿದ ಮಾಹಿತಿ ಲಭ್ಯವಿರುವುದಿಲ್ಲ. ಸದರಿ ಬಿಲ್‌ಗಳನ್ನು ಹಣಕಾಸು ವಿಭಾಗದಲ್ಲಿ ಮಂಜೂರು ಮಾಡುವಾಗ ಮೇಲ್ಕಂಡ ಅಂಶಗಳಿಗೆ ಪಡೆದ ದಾಖಲೆಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿರುವುದಿಲ್ಲ.<br>ಆದ್ದರಿಂದ, ನವ್ಯಶ್ರೀ ಕೇಟರಿಂಗ್ ಸರ್ವೀಸ್ ಇವರಿಗೆ ಪಾವತಿಸಿದ ರೂ.4,66,900–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. |
| **ಅನುಪಾಲನಾ ವರದಿ** | i. ವಿಶ್ವವಿದ್ಯಾನಿಲಯವು ಪ್ರತಿ ವರ್ಷವೂ ನಡೆಸುವ ಸಹ್ಯಾದ್ರಿ ಉತ್ಸವಕ್ಕೆ ಎ.ಸಿ. ಬಿಲ್ ಮೂಲಕ ಹಣ ಪಡೆದು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದು, ಸರ್ಕಾರದ ಆದೇಶದನ್ವಯ ರೂ.2.00 ಲಕ್ಷಕ್ಕಿಂತ ಮೇಲ್ಪಟ್ಟ ಹಣವನ್ನು ಎ.ಸಿ. ಹುಂಡಿಯಲ್ಲಿ ಸರ್ಕಾರದ ಆರ್ಥಿಕ ಇಲಾಖೆಯ ಅನುಮೋದನೆ ಪಡೆಯುವ ಅಗತ್ಯವಿದೆ. ಆದರೆ, ನಿಗದಿತ ಸಮಯದೊಳಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದು ಸಹ್ಯಾದ್ರಿ ಉತ್ಸವ ನಡೆಸಲು ಅಸಾಧ್ಯವಾಗುವುದರಿಂದ ಮಾನ್ಯ ಕುಲಪತಿಗಳ ಅಧಿಕಾರ ಪ್ರದತ್ತವಾದ ಆಧಾರದ ಮೇಲೆ ಎ.ಸಿ. ಹುಂಡಿಯಲ್ಲಿ ರೂ.6.00 ಲಕ್ಷಗಳನ್ನು ಪಾವತಿಸಲಾಗಿದೆ.<br>ii. ಸದರಿ ಎ.ಸಿ. ಬಿಲ್ ಮೂಲಕ ಪಡೆದ ಮೊತ್ತಕ್ಕೆ ಮೂರು ತಿಂಗಳ ಒಳಗಾಗಿ ಎನ್.ಡಿ.ಸಿ. ಹೊಂದಾಣಿಕೆ ಮಾಡಬೇಕೆಂಬ ನಿಯಮವಿರುತ್ತದೆ. ಸದರಿ ಸಹ್ಯಾದ್ರಿ ಉತ್ಸವ ನಡೆಸಿದ ಸಂಚಾಲಕರು, ಪಠ್ಯೇತರ ಚಟುವಟಿಕೆ ವಿಭಾಗ ಇವರು ಸ್ನಾತಕೋತ್ತರ ಸಮಾಜಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದು, ಶೈಕ್ಷಣಿಕ ಒತ್ತಡದ ಮಧ್ಯೆಯೂ ಸಂಚಾಲಕರಾಗಿ ಕಾರ್ಯನಿರ್ವಹಿಸಿದ್ದು, ಸದರಿ ಎನ್.ಡಿ.ಸಿ. ಬಿಲ್‌ಗಳನ್ನು ಹಣಕಾಸು ವಿಭಾಗಕ್ಕೆ ನಿಗದಿತ ಸಮಯದೊಳಗೆ ಸಲ್ಲಿಸಲು ಸಾಧ್ಯವಾಗಿರುವುದಿಲ್ಲ.<br>a) ಸಹ್ಯಾದ್ರಿ ಉತ್ಸವ ನಡೆಸಿದ ದಿನಾಂಕಗಳಂದು ಆಗಮಿಸಿದ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ನಿಗದಿತ ಸಮಯದಲ್ಲಿ ಊಟೋಪಚಾರಕ್ಕೆ ನಿಯಮಾನುಸಾರ ಟೆಂಡರ್ ಕರೆದು ನಿರ್ವಹಿಸಲು ಹಾಗೂ ಈ ಕಾರ್ಯವನ್ನು ಅಗತ್ಯವಾಗಿ ನಿರ್ವಹಿಸಬೇಕಾಗಿರುವ ಪ್ರಯುಕ್ತ ಟೆಂಡರ್ ಕರೆದಿರುವುದಿಲ್ಲ.<br>b) ಬಿಲ್‌ನಲ್ಲಿ ಟಿನ್, ಪಾನ್ ಮತ್ತು ಇನ್‌ವಾಯ್ಸ್ ನಂ. ಇರುತ್ತದೆ ವಿನಃ ದರಪಟ್ಟಿಯಲ್ಲಿ ಇರುವುದಿಲ್ಲ ಎಂಬ ಅಂಶವನ್ನು ತರಬಯಸಿದೆ.<br>c) ವಿವಿಧ ಕಾಲೇಜುಗಳಿಂದ ವಿದ್ಯಾರ್ಥಿಗಳು, ಅಧ್ಯಾಪಕರು, ಸಹ ಕಲಾವಿದರು ಭಾಗವಹಿಸುವ ಸ್ಪಷ್ಟ ಚಿತ್ರಣ ಈ ಸಮಯದೊಳಗೆ ಲಭ್ಯವಾಗದಿದ್ದ ಕಾರಣ ಕೋರಿಕೆ ಪಟ್ಟಿ ಮತ್ತು ಮುಖಪತ್ರದಲ್ಲಿ ವಿವರವಾದ ಮಾಹಿತಿ ಸಲ್ಲಿಸಲಾಗಿದೆ.<br>d) ನವ್ಯಶ್ರೀ ಕೇಟರಿಂಗ್ ಸರ್ವೀಸ್, ಇವರಿಂದ ರೂ.4,66,900–00ಗಳಿಗೆ ಆದಾಯ ತೆರಿಗೆ ಕಟಾಯಿಸಿದ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.<br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **27** | **ದೂರಶಿಕ್ಷಣ ನಿರ್ದೇಶನಾಲಯ ಡಿ.ಸಿ.ಬಿ. ವಹಿ.**<br>**ರೂ.64,31,369–00 (ಆಕ್ಷೇಪಣೆ) ರೂ.41,21,043–00 (ವಸೂಲಾತಿ)**<br>ದೂರಶಿಕ್ಷಣ ನಿರ್ದೇಶನಾಲಯಕ್ಕೆ ಸಂಬಂಧಿಸಿದಂತೆ, ಆಡಿಟ್ ವಿಚಾರಣೆ ಸಂಖ್ಯೆ: 134ರಲ್ಲಿ ವಿವಿಧ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳ ಸಂಖ್ಯೆ, ಪಾವತಿಸಿದ ಶುಲ್ಕ ಮತ್ತು ಬಾಕಿ ಶುಲ್ಕ ವಿವರದ ಡಿ.ಸಿ.ಬಿ. ವಹಿಯನ್ನು ಹಾಜರುಪಡಿಸುವಂತೆ ಸೂಚಿಸಲಾಗಿತ್ತು. 2015–16 ಮತ್ತು 2016–17ನೇ ಸಾಲಿನ ಶುಲ್ಕದ ವಿವರಗಳನ್ನು ಹಾಜರುಪಡಿಸಿರುವುದನ್ನು ಪರಿಶೀಲಿಸಲಾಗಿ;<br>a.2015–16ನೇ ಸಾಲಿನಲ್ಲಿ ಒಟ್ಟು 70 ಅಧ್ಯಯನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 2015–16ನೇ ಸಾಲಿಗೆ ಯಾವುದೇ ಬಾಕಿ ಶುಲ್ಕ ಇರುವುದಿಲ್ಲ.<br>b. 2016–17ನೇ ಸಾಲಿಗೆ ಒಟ್ಟು 68 ಅಧ್ಯಯನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, 2016–17ನೇ ಸಾಲಿನ ಅಂತ್ಯದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ, ಹೊಸದುರ್ಗ ಮತ್ತು ಎಸ್.ಎಸ್. ಎಜುಕೇಷನಲ್ ಟ್ರಸ್ಟ್, ಬೆಂಗಳೂರು ಇವರಿಂದ ರೂ.41,21,043–00ಗಳು ಬಾಕಿ ಇದ್ದು, ವಸೂಲಾತಿಗೆ ಸೂಚಿಸಿದೆ. ವಿವರವನ್ನು <u>**ಅನುಬಂಧ–10**</u>ರಲ್ಲಿ ಲಗತ್ತಿಸಿದೆ. |

c.2015–16 ಮತ್ತು 2016–17ನೇ ಸಾಲಿನಲ್ಲಿ ನಾಲ್ಕು ವಿದ್ಯಾಸಂಸ್ಥೆಗಳ ಶುಲ್ಕ ಬಾಕಿ ಇದ್ದು, ಇದಕ್ಕೆ ಸಂಬಂಧಿಸಿದಂತೆ ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ವಹಿಸಿ ಮೊಕದ್ದಮೆಯನ್ನು ಇತ್ಯರ್ಥಪಡಿಸಿಕೊಂಡು ಬಾಕಿ ಇರುವ ಮೊತ್ತ ರೂ.64,31,369–00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು **ಅನುಬಂಧ–11**ರಲ್ಲಿ ಲಗತ್ತಿಸಿದೆ.

2015–16 ಮತ್ತು 2016–17ನೇ ಸಾಲಿನ ದೂರಶಿಕ್ಷಣ ನಿರ್ದೇಶನಾಲಯದ ಅಧ್ಯಯನ ಕೇಂದ್ರಗಳಿಗೆ ಪಾವತಿಸಬೇಕಾದ ಬಾಕಿ ಷೇರು ಮೊತ್ತಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ವಹಿಸಲು ಸೂಚಿಸಿದೆ.

**ಅನುಪಾಲನಾ ವರದಿ**

a. ಗಮನಿಸಲಾಗಿದೆ.

b. 2016–17ನೇ ಸಾಲಿನ ಅಂತ್ಯದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ, ಹೊಸದುರ್ಗ ಮತ್ತು ಎಸ್.ಎಸ್. ಎಜುಕೇಷನಲ್ ಟ್ರಸ್ಟ್, ಬೆಂಗಳೂರು ಇವರಿಂದ ರೂ.41,21,043–00ಗಳು ಬಾಕಿ ಇರುವ ಮೊತ್ತ ಕ್ರಮವಾಗಿ ಶ್ರೀ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ, ಹೊಸದುರ್ಗ ಇವರಿಂದ ರೂ.19,51,305–00 ಮತ್ತು ಎಸ್.ಎಸ್. ಎಜುಕೇಷನಲ್ ಟ್ರಸ್ಟ್, ಬೆಂಗಳೂರು ಇವರಿಂದ ರೂ.25,54,100–00ಗಳನ್ನು ಸದರಿ ಎರಡು ಸಂಸ್ಥೆಗಳಿಂದ ಒಟ್ಟು ರೂ.45,05,405–00ಗಳನ್ನು ವಸೂಲಿಸಲಾಗಿದೆ.

c. 2015–16 ಮತ್ತು 2016–17ನೇ ಸಾಲಿನಲ್ಲಿ ಈ ಕೆಳಕಂಡ ನಾಲ್ಕು ವಿದ್ಯಾಸಂಸ್ಥೆಗಳ ಶುಲ್ಕ ಬಾಕಿ ಕೆಳಗಿನಂತೆ ಇರುತ್ತದೆ. ಅದರಲ್ಲಿ ವಸೂಲು ಮಾಡಲಾದ ವಿವರ ಕೆಳಗಿನಂತಿದೆ.

| ಕ್ರ. ಸಂ. | ಸಂಸ್ಥೆಯ ಹೆಸರು | ಬಾಕಿ ಇರುವ ಮೊತ್ತ ರೂ. | ವಸೂಲಿ ಮೊತ್ತ ರೂ. | ಬಾಕಿ ಮೊತ್ತ ರೂ. |
|---|---|---|---|---|
| 1 | ಕೆ.ಸಿ.ಇ., ಧಾರವಾಡ | 7266393 | 6216654 | 1049739 |
| 2 | ವಿ.ಕೆ.ಇ., ಸಿಂಧಗಿ | 1533056 | 400000 | 1133056 |
| 3 | ಎಸ್.ಕೆ.ಇ.,ರಾಯಚೂರು | 1587724 | 1000000 | 587724 |
| 4 | ಎನ್.ವಿ.ಟಿ., ಬಿಜಾಪುರ | 7845850 | 4125000 | 3720850 |
| | **ಒಟ್ಟು ರೂ.** | **18233023** | **11741654** | **6491369** |

ಮೇಲ್ಕಂಡ ನಾಲ್ಕು ಸಂಸ್ಥೆಗಳಿಂದ ಬಾಕಿ ಇರುವ ಮೊತ್ತ ರೂ.64,91,369–00ಗಳನ್ನು 2017–18ನೇ ಸಾಲಿನಲ್ಲಿ ವಸೂಲಿಸಲಾಗಿದೆ. ಆದ ಕಾರಣ ಆಕ್ಷೇಪಣೆಯಲ್ಲಿಟ್ಟ ಮೊತ್ತ ರೂ.64,31,369–00ಗಳ ಬದಲಾಗಿ ರೂ.64,91,369–00ಗಳನ್ನು ಹೆಚ್ಚುವರಿಯಾಗಿ ರೂ.60,000–00ಗಳನ್ನು ವಸೂಲಿಸಲಾಗಿದೆ.

ಆದಕಾರಣ ಆಕ್ಷೇಪಣೆ ಕೈಬಿಡಲು ಕೋರಿದೆ.

**28**

**ದೂರಶಿಕ್ಷಣ ನಿರ್ದೇಶನಾಲಯದ ಅಧ್ಯಯನ ಸಾಮಗ್ರಿ ಮುದ್ರಣ ಮತ್ತು ಸರಬರಾಜಿಗೆ ಸಂಬಂಧಪಟ್ಟ ನ್ಯೂನತೆ. ರೂ.2,80,85,896–00 (ಆಕ್ಷೇಪಣೆ)**

2015–16 ಮತ್ತು 2016–17ನೇ ಸಾಲಿನಲ್ಲಿ ದೂರಶಿಕ್ಷಣ ವಿದ್ಯಾರ್ಥಿಗಳಿಗೆ ವಿವಿಧ ವಿಭಾಗಗಳಲ್ಲಿ ಅಧ್ಯಯನ ಸಾಮಗ್ರಿಗಳನ್ನು ಪೂರೈಸುವ ಸಲುವಾಗಿ ಟೆಂಡರ್‌ನ್ನು ಸಿಂಡಿಕೇಟ್ ಸಭೆಯಲ್ಲಿ ದಿನಾಂಕ: 28–03–2016ರಂದು ಅನುಮೋದಿಸಲಾಗಿದೆ. ಪ್ರಸ್ತುತ ಟೆಂಡರ್ ದಸ್ತಾವೇಜನ್ನು ಪರಿಶೀಲಿಸಿದಾಗ ಕೆಳಕಂಡ ನ್ಯೂನತೆಗಳು ಕಂಡುಬಂದಿರುತ್ತವೆ.

1. 2016–17ನೇ ಸಾಲಿನ ದೂರಶಿಕ್ಷಣ ಖಾತೆಯನ್ನು ಪರಿಶೀಲಿಸಲಾಗಿ, ವಿದ್ಯಾರ್ಥಿಗಳಿಗೆ ವಿತರಿಸಲು ಅಗತ್ಯವಿರುವ ಅಧ್ಯಯನ ಸಾಮಗ್ರಿಗಳ ಮುದ್ರಣ ಹಾಗೂ ಸರಬರಾಜಿನ ಟೆಂಡರ್ ಅನ್ನು ಸಿಂಡಿಕೇಟ್ ಸಭೆಯಲ್ಲಿ ದಿನಾಂಕ:28–03–2016ರಂದು ಅನುಮೋದಿಸಲಾಗಿದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ 4 ಸಂಸ್ಥೆಗಳು ಭಾಗವಹಿಸಿದ್ದು, ಇದರಲ್ಲಿ ಎರಡನ್ನು ತಾಂತ್ರಿಕ ಬಿಡ್‌ನಲ್ಲಿ ಅನರ್ಹಗೊಳಿಸಿ, ಇನ್ನುಳಿದ 2 ಸಂಸ್ಥೆಗಳ ದರವನ್ನು ತುಲನೆ ಮಾಡಿದಾಗ ಮೆ: ಮಯೂರ್ ಪ್ರಿಂಟರ್ಸ್, ಬೆಂಗಳೂರು ಇವರು ನಮೂದಿಸಿದ ಸಂಧಾನದ ದರ ರೂ.12,661–00ಗಳ ಬಗ್ಗೆ ವಿಶ್ವವಿದ್ಯಾಲಯವು ಯಾವ ರೀತಿ ಖಚಿತಪಡಿಸಿಕೊಂಡಿದೆ ಎಂಬುದರ ವಿವರ ಇರುವುದಿಲ್ಲ.
2. $L_1$ ಆಗಿರುವ ಮೆ: ಮಯೂರ್ ಪ್ರಿಂಟರ್ಸ್, ಬೆಂಗಳೂರು ಇವರು ನಮೂದಿಸಿರುವ ದರಕ್ಕೆ $L_2$ ಆಗಿರುವ ಮೆ: ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು ಇವರಿಗೆ ಕೆಲವೊಂದು ವರ್ಗಗಳನ್ನು ವಿಂಗಡಿಸಿ, ಮುದ್ರಿಸಲು ಅನುಮತಿ ನೀಡಿರುವುದನ್ನು ಯಾವ ನಿಯಮಾವಳಿಯ ರೀತ್ಯ ಅಂಗೀಕರಿಸಿದೆ.
3. ಈ ಎಲ್ಲಾ ಖರೀದಿ ಪ್ರಕ್ರಿಯೆಗಳನ್ನು ಪರಿಶೀಲಿಸಿದಾಗ ಎಲ್ಲಾ ಬಿಲ್ಲುಗಳು ಸಹ 2016–17ನೇ ಸಾಲಿನಲ್ಲಿ ನಡೆದಿದ್ದು, ಕೆಲವು ಖರೀದಿಸಿದ ಅಧ್ಯಯನ ಸಾಮಗ್ರಿಗಳನ್ನು 2015–16ನೇ ಸಾಲಿನ ದಾಸ್ತಾನು ಪುಸ್ತಕಕ್ಕೆ ತೆಗೆದುಕೊಂಡು ದೃಢೀಕರಿಸಲಾಗಿದೆ. ಆದರೆ, 2016–17ನೇ ಸಾಲಿನ ಖರೀದಿಯನ್ನು 2015–16ನೇ ಸಾಲಿನ ದಾಸ್ತಾನು ಪುಸ್ತಕಕ್ಕೆ ಯಾವ ಆಧಾರದ ಮೇಲೆ ತೆಗೆದುಕೊಳ್ಳಲಾಗಿದೆ ಎಂಬುದು ಕಂಡುಬಂದಿರುವುದಿಲ್ಲ.

4. 2016–17ನೇ ಸಾಲಿನ ಅಧ್ಯಯನ ಸಾಮಗ್ರಿಗಳ ದಾಸ್ತಾನಿನ ಅಂತಿಮ ಶಿಲ್ಕನ್ನು ಪರಿಶೀಲಿಸಿದಾಗ ಕೆಲವು ಸ್ನಾತಕೋತ್ತರ ವಿಭಾಗಗಳ ದ್ವಿತೀಯ ವರ್ಷದ ವಿದ್ಯಾರ್ಥಿಗಳ ಅಧ್ಯಯನ ಸಾಮಗ್ರಿಗಳ ಮುದ್ರಣವನ್ನು ಅವಶ್ಯಕತೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಮುದ್ರಿಸಿ ಖರೀದಿಸಿರುವುದು ಕಂಡುಬಂದಿರುತ್ತದೆ. ಈ ರೀತಿ ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ ಅಧ್ಯಯನ ಸಾಮಗ್ರಿಗಳ ಮೊತ್ತವು ವಿಶ್ವವಿದ್ಯಾಲಯದ ಆರ್ಥಿಕ ನಷ್ಟಕ್ಕೆ ಎಡೆಮಾಡಿಕೊಟ್ಟಿರುತ್ತದೆ.
5. Go No PWD 1359 So/FC 2001P(2) 25/10/2002 KTPP Rules Dividing the Quantity of Supply B/w Two $L_1$ & $L_2$ is Strictly Provided applicable to all Government Department Boards and University ಎಂದು ಸ್ಪಷ್ಟವಾದ ಆದೇಶವಿದ್ದರೂ ಸದರಿ ಆದೇಶವನ್ನು ಪಾಲಿಸಿರುವುದಿಲ್ಲ.

ಇದಕ್ಕೆ ಸಂಬಂಧಿಸಿದಂತೆ, ಆಡಿಟ್ ವಿಚಾರಣಾ ಸಂಖ್ಯೆ:140ರಲ್ಲಿ ಮಾಹಿತಿ ನೀಡಲು ಸೂಚಿಸಿತ್ತು. ಸದರಿ ಮಾಹಿತಿಗೆ ನೀಡಿರುವ ಉತ್ತರವು ಸಮಂಜಸವಿಲ್ಲದ ಕಾರಣ ಮೆ: ಮಯೂರ ಪ್ರಿಂಟರ್ಸ್ ಮತ್ತು ಮೆ: ಪೂರ್ಣಿಮಾ ಪ್ರಿಂಟರ್ಸ್‌ರವರಿಗೆ ಪಾವತಿಸಿರುವ ರೂ.2,80,85,896–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

2016–17ನೇ ಸಾಲಿನಲ್ಲಿ ಮೆ: ಮಯೂರ್ ಪ್ರಿಂಟರ್ಸ್, ಬೆಂಗಳೂರು ಮತ್ತು ಮೆ: ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು ಇವರಿಗೆ ಪಾವತಿಯಾಗಿರುವ ಅಧ್ಯಯನ ಸಾಮಗ್ರಿಗಳ ಮೊತ್ತದ ವಿವರ ಕೆಳಕಂಡಂತಿದೆ.

**ಮೆ: ಮಯೂರ್ ಪ್ರಿಂಟರ್ಸ್**

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ ರೂ. |
|---|---|---|
| 1 | 917320/22–08–2016 | 10000000.00 |
| 2 | 937321/23–08–2016 | 3858250.00 |
| 3 | 917394/31–03–2017 | 1242896.00 |
| | **ಒಟ್ಟು ರೂ.** | **1,51,01,146.00** |

**ಮೆ: ಪೂರ್ಣಿಮಾ ಪ್ರಿಂಟರ್ಸ್**

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ ರೂ. |
|---|---|---|
| 1 | 917272/13–06–2016 | 2914938.00 |
| 2 | 917316/16–08–2016 | 8959332.00 |
| 3 | 917394/31–03–2017 | 1110480.00 |
| | **ಒಟ್ಟು ರೂ.** | **1,29,84,750.00** |

**ಅನುಪಾಲನಾ ವರದಿ**

ಮಯೂರ್ ಪ್ರಿಂಟರ್ಸ್, ಬೆಂಗಳೂರು ಇವರು ನಮೂದಿಸಿದ ಸಂಧಾನದ ದರವನ್ನು ಮಾರುಕಟ್ಟೆ ದರಕ್ಕೆ ಸ್ಪರ್ಧಾತ್ಮಕವಾಗಿರುವ ಬಗ್ಗೆ ಸಂಧಾನದ ವೇಳೆಯಲ್ಲಿ ಮಾರುಕಟ್ಟೆ ದರಕ್ಕೆ ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು ಇವರ ದರವು ಮಾರುಕಟ್ಟೆಗೆ ಹತ್ತಿರವಾಗಿರುವುದನ್ನು ಖಚಿತಪಡಿಸಿಕೊಂಡ ನಂತರವೇ ಸರಬರಾಜು ಆದೇಶವನ್ನು ನೀಡಲಾಗಿದೆ.

KQ2 ಪ್ರಕಾರ ಐಟಂವಾರು ಇ–ಟೆಂಡರ್ ಕರೆಯಲಾಗಿದ್ದು, ಈ ಟೆಂಡರ್‌ನಲ್ಲಿ ಭಾಗವಹಿಸಿದ ಮಯೂರ ಪ್ರಿಂಟ್ ಆಡ್ಸ್, ಬೆಂಗಳೂರು ಮತ್ತು ಪೂರ್ಣಿಮಾ ಪ್ರಿಂಟರ್ಸ್, ಬೆಂಗಳೂರು ಸಂಸ್ಥೆಗೆ ಐಟಂವಾರು ಕಡಿಮೆ ದರ ನಮೂದಿಸಿರುವ ಎರಡು ಸಂಸ್ಥೆಗಳಿಗೆ ಮುದ್ರಣಕ್ಕೆ ಅನುಮತಿ ನೀಡಲಾಗಿದೆ.

ಕನಿಷ್ಠ ದರ ನಮೂದಿಸಿರುವ ಸಂಸ್ಥೆ ಒಂದರಿಂದಲೇ ಅಗಾಧ ಪ್ರಮಾಣದ ಅಧ್ಯಯನ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ನಿರ್ದಿಷ್ಟ ಅವಧಿಯಲ್ಲಿ ವಿತರಿಸಲು ಸಮಯಾವಕಾಶ ಪಡೆದುಕೊಳ್ಳುವುದರಿಂದ ಕನಿಷ್ಠ ದರ ನಮೂದಿಸಿದ L1 ಸಂಸ್ಥೆ ದರದಲ್ಲಿಯೇ L2 ಸಂಸ್ಥೆಯು ಸಹ ಮುದ್ರಿಸಿ ಸರಬರಾಜು ಮಾಡಲು ಲಿಖಿತ ಮನವಿಯ ಮೂಲಕ ಒಪ್ಪಿಗೆ ಸೂಚಿಸಿರುವುದರಿಂದ ಮುದ್ರಣ ಕಾರ್ಯಕ್ಕೆ ಅನುಮತಿ ನೀಡಲಾಗಿದೆ. L2 ಸಂಸ್ಥೆಯಿಂದಲೂ ಸಹ ಇ.ಎಂ.ಡಿ. ಮೊತ್ತವನ್ನು ಪಡೆಯಲಾಗಿರುತ್ತದೆ.

ದೂರಶಿಕ್ಷಣ ವಿಭಾಗದಲ್ಲಿ 2013–14ರಿಂದ ಒಂದೇ ದಾಸ್ತಾನು ವಹಿಯನ್ನು ನಿರ್ವಹಿಸಿದ್ದು, 2016–17ನೇ ಸಾಲಿನಲ್ಲಿ ಖರೀದಿಸಿದ ಅಧ್ಯಯನ ಸಾಮಗ್ರಿಗಳನ್ನು ಅಚಾತುರ್ಯದಿಂದ 2015–16ನೇ ಸಾಲಿನ ದಾಸ್ತಾನು ಪುಸ್ತಕಕ್ಕೆ ತೆಗೆದುಕೊಂಡು ದೃಢೀಕರಿಸಲಾಗಿದೆ. ಅದನ್ನು 2016–17ನೇ ಸಾಲಿನಲ್ಲಿ ಸರಿಪಡಿಸಿ ದಾಸ್ತಾನು ಪುಸ್ತಕಕ್ಕೆ ತೆಗೆದುಕೊಂಡು ದೃಡೀಕರಿಸಲಾಗಿದೆ.

ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ.

| | |
|---|---|
| **29(1)** | **ಯು.ಜಿ.ಸಿ. ಖಾತೆಯಲ್ಲಿ ಶ್ರೀ ಪರಶುರಾಮಪ್ಪ. ಹೆಚ್.ಜಿ., ಕಿರಿಯ ಸಂಶೋಧನಾರ್ಥಿ, ಕನ್ನಡ ವಿಭಾಗ ಇವರ ಮುಂಗಡ ಶಿಷ್ಯವೇತನ ಪಾವತಿಸಿರುವುದು. ರೂ.3,30,000–00 (ವಸೂಲಾತಿ)**<br>a. ಯು.ಜಿ.ಸಿ. ಖಾತೆಯಲ್ಲಿ 2016–17ನೇ ಸಾಲಿನಲ್ಲಿ ಶ್ರೀ ಪರಶುರಾಮಪ್ಪ. ಹೆಚ್.ಜಿ., ಕಿರಿಯ ಸಂಶೋಧನಾರ್ಥಿ, ಕನ್ನಡ ವಿಭಾಗ ಇವರಿಗೆ ದಿನಾಂಕ:31–03–2015 ರಿಂದ 30–03–2016 ರವರೆಗಿನ ಶಿಷ್ಯವೇತನದ ಮೊತ್ತವನ್ನು ಮುಂಗಡವಾಗಿ ಧನಾದೇಶ ಸಂಖ್ಯೆ:119888, ದಿನಾಂಕ: 17–09–2016ರಂದು ರೂ.3,30,000–00ಗಳನ್ನು ಯು.ಜಿ.ಸಿ. ಖಾತೆಯಿಂದ ಪಾವತಿ ಮಾಡಲಾಗಿದೆ.<br>b. ಆದರೆ, ಸದರಿ ಸಂಶೋಧನಾರ್ಥಿಗೆ ಪಾವತಿಸಿರುವ ಮುಂಗಡ ಹಣವನ್ನು 2017–18ನೇ ಆರ್ಥಿಕ ವರ್ಷ ಕಳೆದರೂ ಯು.ಜಿ.ಸಿ. ಖಾತೆಗೆ ವಾಪಸಾತಿ ಮಾಡಿರುವುದಿಲ್ಲ. ಈ ಬಗ್ಗೆ ಆಡಿಟ್ ವಿಚಾರಣೆ ಸಂಖ್ಯೆ:123, ದಿನಾಂಕ:06–08–2018ರಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿದ್ದರೂ, ಯಾವುದೇ ಸ್ಪಷ್ಟೀಕರಣ ನೀಡಿರುವುದಿಲ್ಲ. ಆದ್ದರಿಂದ, ಯು.ಜಿ.ಸಿ. ಇವರಿಂದ ರೂ.3,30,000–00ಗಳನ್ನು ವಸೂಲಾತಿ ಮಾಡಲು ಸೂಚಿಸಿದೆ. |
| **ಅನುಪಾಲನಾ ವರದಿ** | ಶ್ರೀ ಪರಶುರಾಮಪ್ಪ. ಹೆಚ್.ಜಿ., ಕಿರಿಯ ಸಂಶೋಧನಾರ್ಥಿ, ಕನ್ನಡ ವಿಭಾಗ ಇವರಿಗೆ ಮುಂಗಡ ಹಣ ಪಾವತಿಸಿರುವ ಕುರಿತು ಸದರಿ ವಿದ್ಯಾರ್ಥಿಯಿಂದ ನೋಂದಾವಣಿಯ ಪತ್ರವನ್ನು ಸ್ವೀಕರಿಸಿ, ಪತ್ರದಲ್ಲಿ ಲೋಪವಿದ್ದ ಕಾರಣ ವಿದ್ಯಾರ್ಥಿಯ ಶಿಷ್ಯ ವೇತನ ಪಾವತಿಗೆ ಅಡ್ಡಿಯಾಗಿದೆಯೆಂದು ಪತ್ರದಲ್ಲಿ ತಿಳಿಸಿರುತ್ತಾರೆ. ಸದರಿ ಲೋಪವನ್ನು ಸರಿಪಡಿಸಿ ಯು.ಜಿ.ಸಿ. ಗೆ ವಿಶ್ವವಿದ್ಯಾನಿಲಯದ ಪತ್ರ ಸಂಖ್ಯೆ: KU/ BCMCell–02/80/18–19/ 3956, ದಿನಾಂಕ: 07–09–2018ರಲ್ಲಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಯು.ಜಿ.ಸಿ.ಯಿಂದ ಹಣ ಸಂದಾಯವಾದ ತಕ್ಷಣ ವಿಶ್ವವಿದ್ಯಾನಿಲಯದ ಖಾತೆಗೆ ಜಮಾ ಮಾಡಲಾಗುವುದು.<br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **29(2)** | **Chronatography-580 ಉಪಕರಣ ಖರೀದಿಸಿರುವುದು. ರೂ.20,99,950–00 (ಆಕ್ಷೇಪಣೆ)**<br>a. ಸದರಿ ಖರೀದಿಗೆ ಸಂಬಂಧಿಸಿದ ಟೆಂಡರ್ ದಸ್ತಾವೇಜುಗಳನ್ನು ಪರಿಶೀಲಿಸಲಾಗಿ, ಸದರಿ ಉಪಕರಣ ಖರೀದಿಗೆ, "M/s. Cozy Sports and Science, Jamakhandi" ಇವರು ಫೈನಾನ್ಷಿಯಲ್ ಬಿಡ್‌ಗೆ ಏಕೈಕ ಬಿಡ್ಡುದಾರರಾಗಿದ್ದು, ಮರುಟೆಂಡರ್ ಕರೆಯದೇ ಇವರನ್ನೇ ಅನುಮೋದಿಸಿರುವುದು.<br>b. ಸದರಿ ಉಪಕರಣ ತಯಾರಿಸುವ ಸಂಸ್ಥೆಯಾದ, Perkin Elner, Bengaluru ಇವರಿಂದ ನೇರ ಖರೀದಿ ಅವಕಾಶಗಳಿದ್ದರೂ ಬಾಗಲಕೋಟೆಯಲ್ಲಿರುವ ಸರಬರಾಜು ಸಂಸ್ಥೆಯಿಂದ ಖರೀದಿಸಿರುವುದು.<br>c. ಸದರಿ ಟೆಂಡರ್ ಪ್ರಕಟಣೆಯಲ್ಲಿ ತಿಳಿಸಿರುವ Chronatography - 480 ಗೆ ಬದಲಾಗಿ, ಪಡೆಯಲಾದ Chronatography - 580 ಉಪಕರಣದಲ್ಲಿನ ನೂತನ ತಂತ್ರಾಂಶಗಳು, ಬದಲಿ ಉಪಕರಣದ ಮಾರುಕಟ್ಟೆ ದರವನ್ನು ಪರಿಶೀಲಿಸಿದ ತುಲನಾತ್ಮಕ ದರ ಮತ್ತು ತಾಂತ್ರಿಕ ನೈಪುಣ್ಯತಾ ಪತ್ರವನ್ನು ಲಗತ್ತಿಸಿರುವುದಿಲ್ಲ.<br>d. ಟೆಂಡರ್ ದಸ್ತಾವೇಜುಗಳ ಪ್ರಕಾರ ತಾಂತ್ರಿಕ ಬಿಡ್‌ನ ಷರತ್ತುಗಳ ಅನ್ವಯ M/s. Cozy Sports and Science, Jamakhandi ವಾರ್ಷಿಕ ವಹಿವಾಟು ರೂ.25,00,000–00 ಕ್ಕಿಂತ ಮೀರಿರಬೇಕೆಂಬ ಷರತ್ತಿದ್ದು, ಆದರೆ ದಾಖಲೆಗಳಲ್ಲಿ ಹಾಜರುಪಡಿಸಿರುವುದಿಲ್ಲ.<br>e. ಸದರಿ ಖರೀದಿಗೆ ಸಂಬಂಧಿಸಿದ ವೋಚರ್‌ಗಳನ್ನು ಪರಿಶೀಲಿಸಲಾಗಿ ಸುಮಾರು ರೂ.20,99,950–00 ಗಳ ಮೊತ್ತದ ಬಿಲ್ಲನ್ನು ಕೈಬರಹದಲ್ಲಿ ಕೊಟ್ಟಿರುವುದು ಬಿಲ್ಲಿನ ನೈಜತೆಯನ್ನು ಪ್ರಶ್ನಿಸುವಂತಿದೆ. ಸದರಿ ಕೈಬರಹದ ಬಿಲ್ಲನ್ನು ಅನುಮೋದಿಸಿರುವುದು.<br>ಮೇಲ್ಕಂಡ ಅಂಶಗಳ ಪ್ರಕಾರ ಸದರಿ ಖರೀದಿ ಪ್ರಕ್ರಿಯೆಯನ್ನು ತೀವ್ರವಾಗಿ (ವಿಚಾರಣೆ ಸಂಖ್ಯೆ:116, ದಿನಾಂಕ:02–08–2018) ಆಕ್ಷೇಪಿಸುತ್ತಾ, ಪಾವತಿಸಿದ ಮೊತ್ತ ರೂ.20,99,950–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. |
| **ಅನುಪಾಲನಾ ವರದಿ** | a. Gas Chromatography 580 GC ಖರೀದಿ ಸಂಬಂಧಿಸಿದಂತೆ ಇ–ಟೆಂಡರ್ ಕರೆಯಲಾಗಿದ್ದು, M/s. Cozy Sports and Science, ಜಮಖಂಡಿ ಏಕೈಕ ಬಿಡ್ಡುದಾರರಾಗಿರುವುದಿಲ್ಲ. ಇವರ ಜೊತೆಗೆ M/s. Toshvin Analytica Pvt. Ltd., Mubmai ರವರೂ ಸಹ ಬಿಡ್ಡುದಾರರಾಗಿರುತ್ತಾರೆ. M/s. Cozy Sports and Science, Jamakhandi ಇವರು ಫೈನಾನ್ಸಿಯಲ್ ಬಿಡ್‌ಗೆ ಏಕೈಕ ಬಿಡ್ಡುದಾರರಾಗಿದ್ದು, ಫೈನಾನ್ಸಿಯಲ್ ಬಿಡ್ ಅಂಗೀಕರಿಸಲಾಗಿದೆ. |

| | |
|---|---|
| | ಕೆಟಿಪಿಪಿ ನಿಯಮ 1999 ನಿಯಮ 2000 ಪ್ರಕರಣ 25 ಮತ್ತು 26ರಲ್ಲಿ ತಿಳಿಸಿರುವಂತೆ ಟೆಂಡರ್ ಪರಿಶೀಲನಾ ಸಮಿತಿಯು ಪರಿಶೀಲಿಸಿ ಅಂಗೀಕರಿಸಿರುತ್ತದೆ. ಸದರಿ ನಿಯಮದಲ್ಲಿ ಫೈನಾನ್ಸಿಯಲ್ ಬಿಡ್‌ನಲ್ಲಿ ಏಕೈಕ ಬಿಡ್ಡುದಾರರು ಅರ್ಹರಾದರೆ ಅಂತಹ ಸಂಸ್ಥೆಯನ್ನು ತಿರಸ್ಕರಿಸಿ ಮರುಟೆಂಡರ್ ಕರೆಯಲು ಅವಕಾಶವಿರುವುದಿಲ್ಲ.<br>b. M/s. Perkin Elmer, Bangalore ಇವರು ಟೆಂಡರ್ ತಪಾಸಣಾ ಸಮಿತಿಯಲ್ಲಿ ನೇರವಾಗಿ ಭಾಗವಹಿಸಿರುವುದಿಲ್ಲ ಬದಲಾಗಿ M/s. Cozy Sports and Science ಮತ್ತು M/s. Toshvin Analytica Pvt. Ltd., Mumbai ರವರು ಭಾಗವಹಿಸಿರುತ್ತಾರೆ.<br>c.ಟೆಂಡರ್‌ನಲ್ಲಿ Gas Chromatography 480GC ಮಾಡೆಲ್ ಅನ್ನು ಖರೀದಿಸಿರುವುದಾಗಿ ಟೆಂಡರ್ ಕರೆಯಲಾಗಿತ್ತು. ಟೆಂಡರ್ ತಪಾಸಣಾ ಸಮಿತಿಯ ಸಭೆಯಲ್ಲಿ 480GC ಮಾಡೆಲ್‌ಗಿಂತಲೂ ಉತ್ತಮವಾದ ಹಾಗೂ ನವೀಕೃತವಾದ ಹೆಚ್ಚು ಸಾಮರ್ಥ್ಯವುಳ್ಳ Gas Chromatography 480GC ಮಾಡೆಲ್ ಅನ್ನು ನೀಡುವುದಾಗಿ M/s. Cozy Sports and Science ರವರು ಟೆಂಡರ್ ತಪಾಸಣಾ ಸಮಿತಿಯ ಸಭೆಯಲ್ಲಿ ಲಿಖಿತವಾಗಿ ಮಾಹಿತಿಯನ್ನು ನೀಡಿರುತ್ತಾರೆ ಹಾಗೂ ಸಮಿತಿಯ ತಜ್ಞರು ಇದನ್ನು ಒಪ್ಪಿರುತ್ತಾರೆ.<br>d. ಉಪಕರಣ ಖರೀದಿಸಿದ ಹಿಂದಿನ ಆರ್ಥಿಕ ವರ್ಷ 01-04-2014 ರಿಂದ 31-03-2015ರ ಬಿಡ್‌ದಾರರಾದ M/s. Cozy Sports and Science ರವರು ನೀಡಿರುವ ವಾರ್ಷಿಕ ವಹಿವಾಟು ರೂ.2444782 + ರೂ.118900 = ರೂ.25,63,682-00ಗಳು ಆಗಿರುತ್ತದೆ. ಕೆ.ಟಿ.ಪಿ.ಪಿ. ನಿಯಮ 1999 ನಿಯಮ 2000 ಪ್ರಕರಣ 25(1)ರಲ್ಲಿ The Tenderer scoring the highest on the evaluation criteria ಎಂದು ತಿಳಿಸಿರುತ್ತದೆ. ಆದ್ದರಿಂದ ಟೆಂಡರ್ ಪರಿಶೀಲನಾ ಸಮಿತಿಯ ಮೌಲ್ಯಮಾಪನವು ಕ್ರಮಬದ್ಧವಾಗಿರುತ್ತದೆ.<br>e.ಬಿಲ್ಲುಗಳನ್ನು ಕೈಬರಹದಲ್ಲಿ ನೀಡಬಾರದು ಎಂದು ಯಾವ ನಿಯಮಗಳಲ್ಲಿಯೂ ತಿಳಿಸಿರುವುದಿಲ್ಲ. ಬಿಲ್ಲುಗಳಲ್ಲಿ ವಿಶ್ವವಿದ್ಯಾನಿಲಯ ಅಂಗೀಕರಿಸಿದ ದರದಂತೆ ಸರಬರಾಜು ಮಾಡಿ ಮಾಲೀಕರ ಸಹಿ ಇರುವ ಬಿಲ್ಲನ್ನು ನೀಡಿರುತ್ತಾರೆ. ಅದರಂತೆ ಬಿಲ್ಲುಗಳನ್ನು ಅಂಗೀಕರಿಸಲಾಗಿದೆ.<br><br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **29(3)** | **Refrigerated Table Top Centrifuge ಉಪಕರಣವನ್ನು ಖರೀದಿಸಿರುವುದು. ರೂ.8,03,040-00 (ಆಕ್ಷೇಪಣೆ)**<br>2016-17ನೇ ಸಾಲಿನ ಯು.ಜಿ.ಸಿ. ಖಾತೆಯಲ್ಲಿ ಧನಾದೇಶ ಸಂಖ್ಯೆ:119954/19-01-2017 ರ ಡಿ.ಸಿ. ಹುಂಡಿಯ ಮೂಲಕ ರೂ.8,03,040-00ಗಳನ್ನು VGST K-FIST Level-II ಸ್ನಾತಕೋತ್ತರ ಸೂಕ್ಷ್ಮಜೀವಾಣುಶಾಸ್ತ್ರ ಅಧ್ಯಯನ ವಿಭಾಗದಲ್ಲಿ ಸಂಶೋಧನಾ ಯೋಜನೆಗೆ ಅಗತ್ಯವಾದ Refrigerated Table Centrifuge ಉಪಕರಣವನ್ನು ಇ-ಟೆಂಡರ್ ಪ್ರಕ್ರಿಯೆಗಳ ಮೂಲಕ M/s. Beckman Coulter International S.A., Case Postale 1059, 22 Rue Juste Oliver, 1260 Nyon-1, Switzerland ಸಂಸ್ಥೆಯಿಂದ ಖರೀದಿಸಲಾಗಿದೆ.<br>a. ಈ ಬಗ್ಗೆ ಹಣಕಾಸು ಬಿಡ್ಡಿನ ದರ ಪರಿಶೀಲನಾ ಸಭೆಯ ನಡಾವಳಿಗಳಲ್ಲಿ ವಿದೇಶಿ ಕರೆನ್ಸಿಯಲ್ಲಿ ಖರೀದಿಸುವ ಉಪಕರಣಗಳ ಪಾವತಿಯ ಬಗ್ಗೆ ಹಾಗೂ ವಿದೇಶಿ ಕರೆನ್ಸಿಗಳ ಮೌಲ್ಯ ವ್ಯತ್ಯಾಸವನ್ನು (Currency Fluctuation) ಕುರಿತು ಯಾವುದೇ ನಿಖರವಾದ ಮಾಹಿತಿ ಟೆಂಡರ್ ದಸ್ತಾವೇಜಿನಲ್ಲಿ ಅಥವಾ ಕರಾರು ಪತ್ರದಲ್ಲಿ ನಮೂದಾಗಿರುವುದಿಲ್ಲ. ಸದರಿ ಉಪಕರಣಕ್ಕೆ ನಮೂದಿಸಿರುವ ದರ ಹಾಗೂ ಪ್ರಸ್ತುತ ಮಾರುಕಟ್ಟೆಯ ದರದ ತುಲನಾತ್ಮಕ ಪಟ್ಟಿಯು ಲಭ್ಯವಿರುವುದಿಲ್ಲ. ಹಾಗಾಗಿ ಉಪಕರಣದ ನೈಜ ಮೌಲ್ಯ ಸೂಚಿಸುವ ಪಟ್ಟಿಯನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿರುವುದಿಲ್ಲ.<br><br>b. ಟೆಂಡರ್ ಹಣಕಾಸು ಬಿಡ್‌ನ ಪರಿಶೀಲನಾ ಸಮಿತಿಯು ದಿನಾಂಕ:14-08-2015ರಂದು ಹಣಕಾಸು ಬಿಡ್ ಅನ್ನು ಪರಿಶೀಲಿಸಿ ಅನುಮೋದಿಸಿದ್ದು, ಅದರಲ್ಲಿ ಪಾವತಿ ವಿಧಾನ ಮತ್ತು ಪಾವತಿ ಕ್ರಮಗಳ ಬಗ್ಗೆ ಯಾವುದೇ ರೀತಿಯ ನಿಬಂಧನೆಗಳು ಇರುವುದಿಲ್ಲ. ಸದರಿ ಕಾರಣಗಳಿಂದ ವಿದೇಶಿ ವಿನಿಮಯ ದರವು ಸುಮಾರು ಪ್ರತಿ ಡಾಲರ್‌ಗೆ ರೂ.4.25ರಷ್ಟು ಏರಿಕೆಯಾಗಿದ್ದು (ದಿನಾಂಕ:14-08-2015 ರಿಂದ ಪಾವತಿ ದಿನಾಂಕ:01-02-2017) ವಿಶ್ವವಿದ್ಯಾಲಯದ ಬೊಕ್ಕಸಕ್ಕೆ ಆರ್ಥಿಕ ನಷ್ಟವಾಗಿರುತ್ತದೆ.<br>ಈ ಬಗ್ಗೆ ಒದಗಿಸಿರುವ ಮಾಹಿತಿ/ ದಾಖಲೆಗಳು ಸಮಂಜಸವಾಗಿರುವುದಿಲ್ಲವಾದ್ದರಿಂದ ರೂ.8,03,040-00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. |

| | |
|---|---|
| **ಅನುಪಾಲನಾ ವರದಿ** | ಸದರಿ ಉಪಕರಣದ ಖರೀದಿಗೆ 12,000 ಡಾಲರ್‌ಗಳಿಗೆ ಒಪ್ಪಂದವಾಗಿದ್ದು, ಆ ಸಮಯದಲ್ಲಿ ರೂಪಾಯಿ ಮೌಲ್ಯದಲ್ಲಿ 62.92 ಡಾಲರ್ ಮೌಲ್ಯವಿದ್ದು, ವ್ಯವಹಾರ ನಡೆಸಿದ ಬ್ಯಾಂಕಿನ ದಿನದಲ್ಲಿ ಡಾಲರ್ ಮೌಲ್ಯವು 68.53 ಡಾಲರ್ ಇರುತ್ತದೆ. ಈ ದರದ ಆಧಾರದ ಮೇಲೆ 11669.92 ಡಾಲರ್ ಪಾವತಿಸಿದ್ದು, ಇದು ಉಪಕರಣದ ನೈಜ ಮೌಲ್ಯವಿರುತ್ತದೆ.<br><br>ಟೆಂಡರ್ ದಸ್ತಾವೇಜಿನಲ್ಲಿ/ ಕರಾರು ಪತ್ರದಲ್ಲಿ ರೂಪಾಯಿ ದರದ ಬದಲಾಗಿ ಡಾಲರ್‌ನಲ್ಲಿ ಉಪಕರಣದ ಬೆಲೆಯನ್ನು ಪರಿಗಣಿಸಲು ತಿಳಿಸಿದ್ದು, ಉಪಕರಣವು ವಿದೇಶದಿಂದ ಖರೀದಿಸುವಂತಾಗಿದ್ದು, ರೂಪಾಯಿ ಮೊತ್ತದಲ್ಲಿ ಖರೀದಿಸಲು ಸಾಧ್ಯವಾಗದ ಪ್ರಯುಕ್ತ ಡಾಲರ್‌ನಲ್ಲಿ ಖರೀದಿಸಲಾಗಿದೆ.<br><br>ಟೆಂಡರ್ ಹಣಕಾಸು ಬಿಡ್ ಅನ್ನು ಟೆಂಡರ್ ಪರಿಶೀಲನಾ ಸಮಿತಿಯು ದಿನಾಂಕ:14-08-2015ರಂದು ಪರಿಶೀಲಿಸಿ ಅನುಮೋದಿಸಿದ ನಂತರ ಉಪಕರಣ ಖರೀದಿಸಲಾಗಿದೆ.<br><br>ಈ ಅವಧಿಯಲ್ಲಿ ಬದಲಾದ ಟೆಂಡರ್ ಬೆಲೆಯಲ್ಲಿನ ವ್ಯತ್ಯಾಸವನ್ನು ಭರಿಸಬೇಕಾದ ಅನಿವಾರ್ಯತೆಯಾಗಿದ್ದು, ಹಣ ಪಾವತಿಸಿದ ಮೊತ್ತ ಸೇರಿಸಿ ಒಟ್ಟು ರೂ.8,03,040-00ಗಳನ್ನು ಪಾವತಿಸಲಾಗಿದೆ. ಈ ಉಪಕರಣ ಖರೀದಿಯ ಪ್ರಕ್ರಿಯೆಯನ್ನು ಟೆಂಡರ್ ಪರಿಶೀಲನಾ ಸಮಿತಿ ಶಿಫಾರಸ್ಸಿನ ಮೇಲೆ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಖರೀದಿಸಲಾಗಿದೆ.<br><br>ಆದ್ದರಿಂದ ಈ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **30** | **ವಿವಿಧ ವಿಭಾಗಗಳಿಗೆ ಉಪಯೋಗಿಸುವ ಕೆಮಿಕಲ್ಸ್ ಅಂಡ್ ಗ್ಲಾಸ್‌ವೇರ್ಸ್/ ಉಪಕರಣಗಳನ್ನು ಖರೀದಿಸಿರುವುದು. ರೂ. 27,72,971-00 (ಆಕ್ಷೇಪಣೆ)**<br><br>a) ಪ್ರಸಕ್ತ ಸಾಲಿನ ಆರ್ಥಿಕ ವರ್ಷದ ಆರಂಭದಲ್ಲಿ ಆಯಾ ಸಾಲಿನ ಶೈಕ್ಷಣಿಕ ವರ್ಷಕ್ಕೆ ಈ ಕೆಮಿಕಲ್ಸ್ ಅಂಡ್ ಗ್ಲಾಸ್‌ವೇರ್ಸ್ ಹಾಗೂ ಉಪಕರಣಗಳು ಅಗತ್ಯವಿರುವ ವಿವಿಧ ವಿಭಾಗಗಳಿಗೆ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ಹಾಗೂ ಹಿಂದಿನ ಸಾಲಿನ ಉಳಿಕೆ ಲಭ್ಯತೆಯ ಆಧಾರದ ಮೇಲೆ ಖರೀದಿಸಿರುವ ವಿವರ ಇರುವುದಿಲ್ಲ.<br>b) 2015-16 ಮತ್ತು 2016-17ನೇ ಸಾಲಿನ ಅಂತ್ಯಕ್ಕೆ ಸದರಿ ವಿಭಾಗಗಳಲ್ಲಿ ಅನುಪಯುಕ್ತ ಉಪಕರಣಗಳನ್ನು ದುರಸ್ತಿಪಡಿಸಲು ಕ್ರಮಕೈಗೊಳ್ಳಲಾಗಿರುವ ಅಥವಾ ಪೂರ್ಣವಾಗಿರುವ ಬಗ್ಗೆ ಖಚಿತಪಡಿಸಿಕೊಂಡು ತದನಂತರ ಅಗತ್ಯವಿರುವ ಹೊಸ ಉಪಕರಣಗಳನ್ನು ಖರೀದಿಸಿರುವುದು ಸ್ಪಷ್ಟಪಡಿಸಿರುವುದಿಲ್ಲ.<br>c) ಅನುಪಯುಕ್ತ ಸಾಮಗ್ರಿಗಳನ್ನು ಸಾಮಗ್ರಿಯ ದಾಸ್ತಾನು ವಹಿಯಲ್ಲಿ ದಾಖಲಿಸುವುದು ಅಥವಾ ಅವುಗಳನ್ನು ಹೊಸ ಉಪಕರಣಗಳನ್ನು ಖರೀದಿಸುವ ಸಂಸ್ಥೆಯೇ ಹಿಂಪಡೆದು, ಬಿಲ್ಲಿನಲ್ಲಿ ಅದರ ಮೌಲ್ಯವನ್ನು ಕಡಿತಗೊಳಿಸುವುದು ಅಥವಾ ಅನುಪಯುಕ್ತ ಸಾಮಗ್ರಿಗಳನ್ನು ಹರಾಜಿನಿಂದ ಸ್ವೀಕೃತವಾದ ಮೊಬಲಗನ್ನು ವಿಶ್ವವಿದ್ಯಾಲಯದ ಖಾತೆಗೆ ಜಮಾ ಮಾಡಲು ಅನುಸರಿಸಿರುವ ಕ್ರಮದ ವಿವರಗಳಿರುವುದಿಲ್ಲ.<br>d) ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳನ್ನು ಪಾಲಿಸಲು ತಡೆಗಟ್ಟುವ ಉದ್ದೇಶದಿಂದ ಈ ರೀತಿಯ ಬಿಲ್ಲುಗಳ ಮೊತ್ತವನ್ನು ವಿಭಜಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.<br>e) ಈ ರೀತಿ ಎಲ್ಲಾ ವಿಭಾಗಗಳಿಗೆ ಬಿಲ್‌ಗಳ ಮೊತ್ತವನ್ನು ರೂ.1,00,000-00ಗಳ ಒಳಗೆ ಸೀಮಿತಗೊಳಿಸಿ ವಿಭಜಿಸಿ ಖರೀದಿ ಮಾಡಿರುವುದು ಸಹ ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.<br><br>ಮೇಲಿನ ಅಂಶಗಳ ಬಗ್ಗೆ ಸೂಕ್ತ ಸ್ಪಷ್ಟೀಕರಣ ನೀಡುವವರೆಗೆ ಖರೀದಿ ಪ್ರಕ್ರಿಯೆಯನ್ನು ತೀವ್ರವಾಗಿ {(ಆಡಿಟ್ ವಿಚಾರಣೆ ಸಂಖ್ಯೆ:38, ದಿನಾಂಕ: 07-05-2018 / ಸಂಖ್ಯೆ:17(6), ದಿನಾಂಕ:17-04-2018/ ಸಂಖ್ಯೆ:146, ದಿನಾಂಕ:13-08-2018)} ಆಕ್ಷೇಪಿಸುತ್ತಾ, ಭರಿಸಿದ ವೆಚ್ಚ ರೂ.27,72,971-00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ವಿವರವನ್ನು **ಅನುಬಂಧ-7**ರಲ್ಲಿ ಲಗತ್ತಿಸಿದೆ. |
| **ಅನುಪಾಲನಾ ವರದಿ** | a) ಸ್ನಾತಕೋತ್ತರ ವಿಭಾಗಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಆಧರಿಸಿ ಕೆಮಿಕಲ್ಸ್/ಗ್ಲಾಸ್‌ವೇರ್/ ಉಪಕರಣಗಳನ್ನು ಬೇಡಿಕೆ ಪಟ್ಟಿಯಂತೆ ಅನುಮೋದಿಸಲಟ್ಟು ಖರೀದಿಗೆ ಕ್ರಮಕೈಗೊಳ್ಳಲಾಗಿದೆ.<br>b) ಸ್ನಾತಕೋತ್ತರ ವಿಭಾಗಗಳಿಗೆ ಅಗತ್ಯವಾದ ಕೆಮಿಕಲ್ಸ್/ ಗ್ಲಾಸ್‌ವೇರ್/ ಉಪಕರಣಗಳನ್ನು ಖರೀದಿಸಿದ ನಂತರದಲ್ಲಿ ಹಳೆಯ ದಾಸ್ತಾನಿನ ಜೊತೆಗೆ ಪ್ರಸ್ತುತ ಖರೀದಿಸಿದ ವಿವರಗಳನ್ನು ದಾಸ್ತಾನು ವಹಿಯಲ್ಲಿ ನಮೂದಿಸಿ ಸಮರ್ಪಕವಾಗಿ ದಾಸ್ತಾನು ವಹಿ ನಿರ್ವಹಿಸುವಂತೆ ಎಲ್ಲಾ ವಿಭಾಗಗಳಿಗೆ ತಿಳಿಸಲಾಗಿರುತ್ತದೆ. |

| | |
|---|---|
| | c) ಅನುಪಯುಕ್ತ ಸಾಮಗ್ರಿಗಳ ವಹಿಯನ್ನು ಲೆಕ್ಕಪರಿಶೋಧಕರ ಸೂಚನೆಯಂತೆ ವಹಿಸಲಾಗಿದೆ. ಅನುಪಯುಕ್ತ ಸಾಮಗ್ರಿಗಳನ್ನು ಹೊಸ ಉಪಕರಣಗಳನ್ನು ಸರಬರಾಜು ಮಾಡಿದ ಸಂಸ್ಥೆ ಹಿಂಪಡೆಯಲು ಒಪ್ಪುವುದಿಲ್ಲ. ಆದ್ದರಿಂದ ಉಪಯೋಗಕ್ಕೆ ಬಾರದ / ರಿಪೇರಿ ಮಾಡಿಸಲಾಗದ ಸಾಮಗ್ರಿಗಳನ್ನು ಪಟ್ಟಿಮಾಡಿ ಅವುಗಳನ್ನು ಎಸ್ಟೇಟ್ ವಿಭಾಗಕ್ಕೆ ವಿಲೇವಾರಿ ಮಾಡಲು ಒಪ್ಪಿಸಲಾಗಿರುತ್ತದೆ. ಎಸ್ಟೇಟ್ ವಿಭಾಗವು ಅನುಪಯುಕ್ತ ವಸ್ತುಗಳನ್ನು ಹರಾಜು ಮಾಡಿದ್ದು, ಸಂಗ್ರಹವಾದ ಮೊಬಲಗನ್ನು ವಿಶ್ವವಿದ್ಯಾಲಯದ ನಿಧಿಗೆ ಜಮೆ ಮಾಡಲಾಗಿರುತ್ತದೆ.<br>d) ಆಯಾ ಸಂದರ್ಭಗಳಲ್ಲಿ ಅಗತ್ಯವಿರುವ ಸಾಮಗ್ರಿ / ಕೆಮಿಕಲ್ಸ್‌ಗಳನ್ನು ಅಗತ್ಯವಿರುವ ಪ್ರಮಾಣದಲ್ಲಿ ಖರೀದಿಸಲಾಗಿರುತ್ತದೆ. ತರಗತಿಗಳಿಗೆ ಅಗತ್ಯವಿದ್ದಾಗ ಕೆಮಿಕಲ್ಸ್/ಗ್ಲಾಸ್‌ವೆರ್ ಸಾಮಗ್ರಿಗಳನ್ನು ಪುನಃ ಖರೀದಿಸಲಾಗಿರುತ್ತದೆ. ಆರ್ಥಿಕ ವರ್ಷದಲ್ಲಿ ದರಪಟ್ಟಿ ಆಹ್ವಾನಿಸಿ ನಿಯಮನುಸಾರ ಖರೀದಿ ಕ್ರಮ ಕೈಗೊಂಡಾಗ ಕಡಿಮೆ ದರ ನಮೂದಿಸಿದ ಸಂಸ್ಥೆಯಿಂದಲೇ ಸಾಮಗ್ರಿಗಳನ್ನು ಖರೀದಿಸಬೇಕಾದ ಸಂದರ್ಭಗಳಲ್ಲಿ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಬಿಲ್ಲುಗಳಿಗೆ ಆ ವರ್ಷದಲ್ಲಿ ಸಂಸ್ಥೆಗೆ ಪಾವತಿ ಮಾಡಲಾಗಿರುತ್ತದೆ. ಆದ್ದರಿಂದ ಉದ್ದೇಶಪೂರ್ವಕವಾಗಿ ಬಿಲ್ ವಿಭಜಿಸಿರುವುದಿಲ್ಲ ಎಂಬ ಅಂಶವನ್ನು ತಮ್ಮ ಅವಗಾಹನೆಗೆ ತರಲಾಗಿದೆ.<br>e) ಸದರಿ ಹಣಕಾಸು ವರ್ಷದಲ್ಲಿ ಕೆಲವು ತಾಂತ್ರಿಕ ಕಾರಣಗಳಿಗಾಗಿ ಗ್ಲಾಸ್‌ವೆರ್/ ಕೆಮಿಕಲ್ಸ್ ಇ-ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದೇ ಇದ್ದ ಸಂದರ್ಭದಲ್ಲಿ, ಸ್ನಾತಕೋತ್ತರ ವಿಭಾಗಗಳ ತರಗತಿಗಳಿಗೆ / ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ, ರೂ.1.00 ಲಕ್ಷ ಮಿತಿಯಲ್ಲಿ ನಿಯಮಾನುಸಾರ ಖರೀದಿಸಲು ಎಲ್ಲಾ ಸ್ನಾತಕೋತ್ತರ ವಿಭಾಗಗಳಿಗೆ ಅನುಮತಿ ನೀಡಲಾಗಿತ್ತು. (ಸುತ್ತೋಲೆ ಸಂಖ್ಯೆ:ಕುವಿ/ ದಾಖವಿ–1/4251/2016–17/ದಿನಾಂಕ:08–11–2016). ಸದರಿ ಸುತ್ತೋಲೆಯಂತೆ ಆಯಾ ವಿಭಾಗಗಳ ಅಧ್ಯಕ್ಷರುಗಳೇ ನೇರವಾಗಿ ರೂ.1.00 ಲಕ್ಷಗಳ ಮಿತಿಯಲ್ಲಿ ಗ್ಲಾಸ್‌ವೇರ್/ ಕೆಮಿಕಲ್ಸ್ ಸಾಮಗ್ರಿಗಳನ್ನು ಖರೀದಿಸಲಾಗಿದೆ.<br><br>ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ. |
| **31** | **ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಲೇಖನ ಸಾಮಗ್ರಿಗಳನ್ನು ಖರೀದಿಸಿರುವುದು. ರೂ.74,70,511–00 (ಆಕ್ಷೇಪಣೆ)**<br><br>2015–16 ಮತ್ತು 2016–17ನೇ ಸಾಲಿನಲ್ಲಿ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಲೇಖನ ಸಾಮಗ್ರಿಗಳು, ಮತ್ತು ಅಂಕಪಟ್ಟಿ ಮುದ್ರಣದ ಸಂಬಂಧ ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮ, 2000 – ಸೆಕ್ಷನ್–5 ಅನ್ನು ಉಲ್ಲಂಘಿಸಿ, ಮೆ: ರಾಜು ಎಂಟರ್‌ಪ್ರೈಸಸ್, ದಾವಣಗೆರೆ ಇವರಿಗೆ ಪಾವತಿಸಿದ್ದು, ಖರೀದಿಗೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಲಾಗಿ;<br>1. ದಿನಾಂಕ:18–12–2013ರಲ್ಲಿ ಟೆಂಡರ್ ಅನ್ನು ಅನುಮೋದಿಸಿದ್ದು, ಸದರಿ ಟೆಂಡರ್‌ನ ಅವಧಿಯು 1 ವರ್ಷದ್ದಾಗಿರುತ್ತದೆ.<br>2. ಟೆಂಡರ್ ಅವಧಿಯು ದಿನಾಂಕ:17–12–2014ಕ್ಕೆ ಮುಗಿದಿದ್ದು, ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮ, 2000 – ಸೆಕ್ಷನ್(5) ಅನ್ನು ಉಲ್ಲಂಘಿಸಿ ಪುನಃ ಟೆಂಡರ್ ಆಹ್ವಾನಿಸದೆ, ದರ ಒಪ್ಪಂದದ ಮೂಲಕ ಸದರಿಯವರಿಂದ ಖರೀದಿಸಲಾಗಿದೆ.<br>3. ಟೆಂಡರ್ ಕರೆಯದೇ ಖರೀದಿಸಿರುವುದರಿಂದ ಸ್ಪರ್ಧಾತ್ಮಕ ದರದಲ್ಲಿ ಖರೀದಿಸಿರುವ ವಿವರ ಲಭ್ಯವಿರುವುದಿಲ್ಲ.<br>4. ದರ ಒಪ್ಪಂದ ಮಾಡಿಕೊಳ್ಳುವ ಪೂರ್ವದಲ್ಲಿ ದರವನ್ನು ಮಾರುಕಟ್ಟೆ ದರಕ್ಕೆ ಹೋಲಿಕೆ ಮಾಡಿ ಖರೀದಿಸಿರುವುದಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.<br>ಮೇಲ್ಕಂಡ ಕಾರಣಗಳಿಂದ ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳನ್ನು ಸ್ಪಷ್ಟ ಉಲ್ಲಂಘನೆಯಾಗಿದ್ದು, ಸದರಿಯವರಿಗೆ ಪಾವತಿಸಲಾದ ಮೊಬಲಗು ರೂ.74,70,511–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. **ಅನುಬಂಧ–8**ರಲ್ಲಿ ವಿವರಗಳನ್ನು ಲಗತ್ತಿಸಿದೆ. |
| **ಅನುಪಾಲನಾ ವರದಿ** | ವಿಶ್ವವಿದ್ಯಾನಿಲಯವು ವಿವಿಧ ವಿಭಾಗಗಳಿಗೆ ಲೇಖನ ಸಾಮಗ್ರಿಗಳನ್ನು ಖರೀದಿಸಲು ಇ–ಟೆಂಡರ್ ಕರೆದಿದ್ದು, ಟೆಂಡರ್‌ನಲ್ಲಿ ಭಾಗವಹಿಸಿದ ಮೆ: ರಾಜು ಎಂಟರ್‌ಪ್ರೈಸಸ್, ದಾವಣಗೆರೆ ಇವರ ಕಡಿಮೆ ದರ ನಮೂದಿಸಿದ್ದು, ಸದರಿ ಸಂಸ್ಥೆಯೊಡನೆ ದಿನಾಂಕ:25–01–2014ರಂದು ಒಪ್ಪಂದ ಪತ್ರ ಮಾಡಿಕೊಂಡಿದ್ದು, ಮುಂದಿನ ಆದೇಶದವರೆಗೆ ಚಾಲ್ತಿಯಲ್ಲಿರುತ್ತದೆ.<br><br>ನಂತರದಲ್ಲಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಿದ್ದು, ಕೆಲವು ತಾಂತ್ರಿಕ ಕಾರಣಗಳಿಂದ ಇ–ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳದೆ, ಮುದ್ರಣ ಮತ್ತು ಲೇಖನ ಸಾಮಗ್ರಿಗಳನ್ನು ಖರೀದಿಸುವ ಸಂಬಂಧ ಕರೆಯಲಾದ ಹಿಂದಿನ ಆದೇಶದಂತೆ ದರ ಒಪ್ಪಂದ ಮಾಡಿಕೊಂಡ ಸಂಸ್ಥೆಯಿಂದಲೇ ನಿಗದಿಪಡಿಸಿದ ದರದಲ್ಲಿಯೇ |

| | |
|---|---|
| | ಲೇಖನ ಸಾಮಗ್ರಿಗಳನ್ನು ಖರೀದಿಸಲು ಆದೇಶವಾಗಿದ್ದು, ಸದರಿ ಸಂಸ್ಥೆಯ ಇ–ಟೆಂಡರ್ ಪ್ರಕ್ರಿಯೆ ಮುಗಿಯುವವರೆಗೂ ದಿನಾಂಕ:28–12–2015ರ ಆದೇಶದಂತೆ ಮುದ್ರಣ ಲೇಖನ ಸಾಮಗ್ರಿಯ ಖರೀದಿಯು ರೂ.1.00 ಲಕ್ಷ ಮೀರಿದ್ದರಿಂದ ಮಾರುಕಟ್ಟೆಗಳ ದರಪಟ್ಟಿ ಆಹ್ವಾನಿಸಿ ದಿನಾಂಕ:28–12–2015ರ ಆದೇಶದಂತೆ ಖರೀದಿ ಮಾಡಲಾಗಿದೆ.<br><br>ಆದಕಾರಣ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **32** | **ವಿಶ್ವವಿದ್ಯಾಲಯದ ವಿವಿಧ ಖಾತೆಗಳಿಂದ (ಜ್ಞಾನಸಹ್ಯಾದ್ರಿ ಖಾತೆ ಹೊರತುಪಡಿಸಿ) ಹೊರಗುತ್ತಿಗೆ ನೌಕರರ ಹಾಗೂ ಭದ್ರತಾ ಸಿಬ್ಬಂದಿಯವರ ಸೇವೆಗೆ ಸಂಸ್ಥೆಗಳಿಗೆ ಮೊತ್ತವನ್ನು ಪಾವತಿಸಿರುವುದು. ರೂ.1,16,374–00 (ವಸೂಲಾತಿ)**<br><br>2015–16 ಮತ್ತು 2016–17ನೇ ಸಾಲಿನಲ್ಲಿ ವಿಶ್ವವಿದ್ಯಾಲಯವು ಹೊರಗುತ್ತಿಗೆ ನೌಕರ ಹಾಗೂ ಭದ್ರತಾ ಸಿಬ್ಬಂದಿ ಸೇವೆಯನ್ನು ಮೆ: ಪ್ರೈವೇಟ್ ಎಂಪ್ಲಾಯ್‌ಮೆಂಟ್ ಬ್ಯುರೋ, ಶಿವಮೊಗ್ಗ ಮತ್ತು ಮೆ: ಬಿ.ಕೆ.ಆರ್. ಸ್ವಾಮಿ ಸೆಕ್ಯೂರಿಟಿ ಏಜೆನ್ಸಿ, ಹರಿಹರ – ಇವರಿಂದ ಪಡೆದಿದ್ದು, ಸದರಿ ಒಪ್ಪಂದದಲ್ಲಿ ಕಂಡುಬಂದ ನ್ಯೂನತೆಗಳು.<br>a) ಮೆ: ಪ್ರೈವೇಟ್ ಎಂಪ್ಲಾಯ್‌ಮೆಂಟ್ ಬ್ಯುರೋ, ಶಿವಮೊಗ್ಗ ಮತ್ತು ಮೆ: ಬಿ.ಕೆ.ಆರ್. ಸ್ವಾಮಿ ಸೆಕ್ಯೂರಿಟಿ ಏಜೆನ್ಸಿ, ಹರಿಹರ – ಈ ಸಂಸ್ಥೆಗಳ ಗುತ್ತಿಗೆ ಕರಾರಿನ ಒಪ್ಪಂದವು ಕ್ರಮವಾಗಿ ದಿನಾಂಕ:31–02–2012 ಮತ್ತು 31–03–2013ಕ್ಕೆ ಮುಕ್ತಾಯಗೊಂಡಿದ್ದರೂ ಸಹ, 2015–16 ಮತ್ತು 2016–17ನೇ ಸಾಲಿನಲ್ಲಿ ಸದರಿಯವರ ಸೇವೆಯನ್ನು ಪಡೆದು, ಬಿಲ್ ಪಾವತಿಸಿರುವುದು ಕಂಡುಬಂದಿರುತ್ತದೆ.<br>b) ಮೆ: ಪ್ರೈವೇಟ್ ಎಂಪ್ಲಾಯ್‌ಮೆಂಟ್ ಬ್ಯುರೋ, ಶಿವಮೊಗ್ಗ ಮತ್ತು ಮೆ: ಬಿ.ಕೆ.ಆರ್. ಸ್ವಾಮಿ ಸೆಕ್ಯೂರಿಟಿ ಏಜೆನ್ಸಿ, ಹರಿಹರ – ಇವರು ಹಣಕಾಸು ಬಿಡ್‌ನಲ್ಲಿ ಏಜೆನ್ಸಿ ಸರ್ವೀಸ್ ಛಾರ್ಜ್ ಅನ್ನು ಮೂಲ ವೇತನದ ಮೇಲೆ ಶೇ.5ರಷ್ಟು ಪಾವತಿಸಬೇಕಾಗಿರುತ್ತದೆ ಎಂದು ನಮೂದಿಸಲಾಗಿದ್ದು, ಆದರೆ, ವಿಶ್ವವಿದ್ಯಾಲಯವು ಮೂಲ ವೇತನ, ಪಿ.ಎಫ್. ಮತ್ತು ಇ.ಎಸ್.ಐ. ಅನ್ನು ಸೇರಿಸಿ ಒಟ್ಟು ಮೊತ್ತದ ಮೇಲೆ ಶೇ.5ರಷ್ಟು ಏಜೆನ್ಸಿ ಛಾರ್ಜ್ ಅನ್ನು ಲೆಕ್ಕ ಹಾಕಿ ಪಾವತಿಸಿರುವುದು.<br>ಆದ್ದರಿಂದ, ರೂ.1,16,374–00ಗಳನ್ನು ವಸೂಲಾತಿಗೆ ಸೂಚಿಸಿದೆ. ವಿವರವನ್ನು **ಅನುಬಂಧ–9**ರಲ್ಲಿ ಲಗತ್ತಿಸಿದೆ. |
| **ಅನುಪಾಲನಾ ವರದಿ** | ಮೆ: ಪ್ರೈವೇಟ್ ಎಂಪ್ಲಾಯ್‌ಮೆಂಟ್ ಬ್ಯುರೋ, ಶಿವಮೊಗ್ಗ ಮತ್ತು ಮೆ: ಬಿ.ಕೆ.ಆರ್. ಸ್ವಾಮಿ ಸೆಕ್ಯೂರಿಟಿ ಏಜೆನ್ಸಿ, ಹರಿಹರ – ಇವರು ಹಣಕಾಸು ಬಿಡ್‌ನಲ್ಲಿ ಏಜೆನ್ಸಿ ಸರ್ವೀಸ್ ಛಾರ್ಜ್ ಅನ್ನು ಮೂಲ ವೇತನದ ಮೇಲೆ ಶೇ.5ರಷ್ಟು ಪಾವತಿಸಬೇಕಾಗಿರುತ್ತದೆ ಎಂದು ನಮೂದಿಸಲಾಗಿದ್ದು, ಆದರೆ, ವಿಶ್ವವಿದ್ಯಾಲಯವು ಮೂಲ ವೇತನ, ಪಿ.ಎಫ್. ಮತ್ತು ಇ.ಎಸ್.ಐ. ಅನ್ನು ಸೇರಿಸಿ ಒಟ್ಟು ಮೊತ್ತದ ಮೇಲೆ ಶೇ.5ರಷ್ಟು ಏಜೆನ್ಸಿ ಛಾರ್ಜ್ ಅನ್ನು ಲೆಕ್ಕ ಹಾಕಿ ಪಾವತಿಸಲಾಗಿದೆ. ಹೆಚ್ಚುವರಿಯಾಗಿ ಪಾವತಿಸಲಾಗಿರುವ ಮೊತ್ತ ಸೂಚಿಸಿರುವ ಮೊತ್ತ ರೂ.1,16,374–00ಗಳನ್ನು ಸಂಬಂಧಿಸಿದವರ ಸಂಸ್ಥೆಯ ಇ.ಎಂ.ಡಿ. ಮೊತ್ತದಲ್ಲಿ ಕಟಾಯಿಸಿ ವಿಶ್ವವಿದ್ಯಾನಿಲಯದ ನಿಧಿಗೆ ಜಮಾ ಮಾಡಿಕೊಳ್ಳಲು ಕ್ರಮಕೈಗೊಳ್ಳಲಾಗುತ್ತಿದೆ.<br>ಆದ್ದರಿಂದ, ಈ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **33(1)** | **ಕರ್ನಾಟಕ ಪಾರದರ್ಶಕ ಸಾರ್ವಜನಿಕ ಸಂಗ್ರಹಣಾ ಕಾಯ್ದೆ, 1999 ಮತ್ತು ನಿಯಮ, 2000 ದ ಪ್ರಕಾರ ಉಲ್ಲಂಘನೆಯಾಗಿರುವ ಪ್ರಕರಣಗಳು.**<br><br>ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಅಸು/ 2ಇ ಸಂಗ್ರಹ 2009, ದಿನಾಂಕ:09–10–2012ರ ಅನುಬಂಧ ಕ್ರ.ಸಂ. 58ರಲ್ಲಿ ಸೂಚಿಸಿರುವಂತೆ ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳ ಅನುಸಾರವೇ ಸರಕು/ ಸೇವೆಗಳನ್ನು ಖರೀದಿಸಬೇಕೆಂಬ ಸ್ಪಷ್ಟ ನಿರ್ದೇಶನವಿರುತ್ತದೆ. ಈ ಸಂಬಂಧ ಪರಿಶೀಲಿಸಲಾಗಿ, ಈ ಕೆಳಕಂಡ ನಿಯಮಗಳನ್ನು ಉಲ್ಲಂಘಿಸಿ ಖರೀದಿಸಿರುವುದು ಕಂಡುಬಂದಿರುತ್ತದೆ.<br>a. ಕೆ.ಟಿ.ಪಿ.ಪಿ. ಕಾಯ್ದೆ, 1999 ಮತ್ತು ನಿಯಮ, 2000 – ಸೆಕ್ಷನ್ 5ರ ಪ್ರಕಾರ 1.00 ಲಕ್ಷಕ್ಕಿಂತ ಹೆಚ್ಚು ಮೊತ್ತದ ಖರೀದಿಗೆ (ಸರಕು/ಸೇವೆ) ಟೆಂಡರ್ ಕರೆಯದಿರುವುದು.<br>b. ಸರ್ಕಾರದ ಸುತ್ತೋಲೆ PWD 1359 SO/FC 2001 (P-2)ರ ಪ್ರಕಾರ ಏಕ ಬಿಡ್ ಟೆಂಡರ್‌ಗಳನ್ನು ತಿರಸ್ಕರಿಸಿ ಮರು ಟೆಂಡರ್ ಕರೆಯುವುದು, ಟೆಂಡರ್ ಆಹ್ವಾನಿಸುವ ಅಧಿಕಾರಿಯ ಪ್ರಥಮ ಆಯ್ಕೆಯಾಗಿರುತ್ತದೆ.<br>c. ಸೆಕ್ಷನ್ 4(b) ರ ಪ್ರಕಾರ ಸರಕು ಮತ್ತು ಸೇವೆಗಳು ಏಕ ಮೂಲದಿಂದ ಲಭ್ಯವಾಗುತ್ತಿದ್ದಲ್ಲಿ ಸರಕುಗಳ ಅಥವಾ ಸೇವೆಗಳ ನಿರ್ಮಾಣ ಕಾಮಗಾರಿಗಳ ಸಂಬಂಧದಲ್ಲಿ ಸಂಪೂರ್ಣ ಹಕ್ಕನ್ನು ಹೊಂದಿದ್ದಲ್ಲಿ ಮತ್ತು ಬದಲಿ ವ್ಯವಸ್ಥೆಗಳು ಇರದಿದ್ದಲ್ಲಿ ಪರಂತು, ಈ ಖಂಡದ ಉದ್ದೇಶಕ್ಕಾಗಿ ಸಂಗ್ರಹಣಾ ಸಂಸ್ಥೆಯ ಒಬ್ಬರು ತಾಂತ್ರಿಕ ಪ್ರತಿನಿಧಿ, ಅದೇ ಬಗೆಯ ಸಂಗ್ರಹಣಾ ಕಾರ್ಯವನ್ನು ನಡೆಸುತ್ತಿರುವ ಸರ್ಕಾರಿ |

ಸಂಸ್ಥೆಯ ಒಬ್ಬರು ತಾಂತ್ರಿಕ ಪ್ರತಿನಿಧಿ ಮತ್ತು ಸರಕುಗಳು ಅಥವಾ ಸೇವೆಗಳು ಏಕೈಕ ಮೂಲದಿಂದ ಲಭ್ಯವಾಗುತ್ತವೆ ಎಂಬುದನ್ನು ಪರೀಕ್ಷಿಸುವುದಕ್ಕೆ ಮತ್ತು ಘೋಷಿಸುವುದಕ್ಕೆ ಸಂಬಂಧಿಸಿದಂತೆ ಅಂಥ ಕ್ಷೇತ್ರದಲ್ಲಿ ಅನುಭವ ಹೊಂದಿರುವ ಒಂದು ಪ್ರಸಿದ್ಧವಾದ ಶೈಕ್ಷಣಿಕ/ ಸಂಶೋಧನಾ ಸಂಸ್ಥೆ ಅಥವಾ ವಾಣಿಜ್ಯೇತರ ಸಂಸ್ಥೆಯ ಒಬ್ಬರು ಪ್ರತಿನಿಧಿ ಇವರನ್ನೊಳಗೊಂಡ ಮೂವರು ತಜ್ಞರು ಇರುವ ಸಮಿತಿಯೊಂದು ಇರತಕ್ಕದ್ದು.

d. ರೂ.5,000–00ಕ್ಕೂ ಮೇಲ್ಪಟ್ಟ ಖರೀದಿಗಳಿಗೆ ದರಪಟ್ಟಿ ಕರೆದು ಖರೀದಿಸಬೇಕೆಂಬ ಸ್ಪಷ್ಟ ನಿರ್ದೇಶನವಿದ್ದು, ಆದರೆ, ದರಪಟ್ಟಿ ಕರೆಯದೇ ಸರಕು ಸೇವೆಗಳನ್ನು ಖರೀದಿಸಿರುವುದು ಆಕ್ಷೇಪಾರ್ಹವಾಗಿರುತ್ತದೆ.

e. ರೂ.1,00,000–00ಕ್ಕೂ ಮೇಲ್ಪಟ್ಟ ಸರಕು/ಸೇವೆ ಖರೀದಿಗೆ ಟೆಂಡರ್ ಕರೆಯಬೇಕೆಂಬ ಸ್ಪಷ್ಟ ನಿರ್ದೇಶನವಿದ್ದು, ಟೆಂಡರ್ ಕರೆಯದೇ ಖರೀದಿಸಿರುವುದು ಆಕ್ಷೇಪಾರ್ಹವಾಗಿರುತ್ತದೆ.

f. ಕೆ.ಟಿ.ಪಿ.ಪಿ. ಕಾಯ್ದೆ, 1999 ಮತ್ತು ನಿಯಮ, 2000ದಂತೆ ಅಲ್ಪಾವಧಿ ಟೆಂಡರ್ ಕರೆಯದೇ ದರಪಟ್ಟಿ ಕರೆದು ಬಿಲ್‌ಗಳನ್ನು ಉದ್ದೇಶಪೂರ್ವಕವಾಗಿ ವಿಂಗಡಣೆ (Split) ಮಾಡಿ ಪಾವತಿಸಿರುವುದು ಆಕ್ಷೇಪಾರ್ಹವಾಗಿರುತ್ತದೆ.

ಈ ಮೇಲಿನ ಕಾರಣಗಳಿಂದ ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದ್ದು, ಪಾವತಿಸಲಾದ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**1. ಕೆ.ಟಿ.ಪಿ.ಪಿ. ಕಾಯ್ದೆ ಮತ್ತು ನಿಯಮಗಳನ್ನು ಉಲ್ಲಂಘಿಸಿ, ಯು.ಜಿ.ಸಿ. ಖಾತೆಯಲ್ಲಿ ಮೆ: ಜೈನ್ ಸ್ಪೋರ್ಟ್ಸ್ ಅಂಡ್ ಸೈಂಟಿಫಿಕ್ ಇವರಿಗೆ ಕೆಮಿಕಲ್ಸ್, ಗ್ಲಾಸ್‌ವೇರ್ಸ್ ಮತ್ತು ಇತರ ವಸ್ತುಗಳ ಖರೀದಿಯನ್ನು ಡಿ.ಸಿ. ಹುಂಡಿಯ ಮೂಲಕ ಪಾವತಿಸಿರುವುದು. ರೂ.17,18,410–00 (1238887+479523) (ಆಕ್ಷೇಪಣೆ)**

1. ಆರ್ಥಿಕ ಬಿಡ್‌ನಲ್ಲಿ ಮೆ: ಜೈನ್ ಸ್ಪೋರ್ಟ್ಸ್ ಅಂಡ್ ಸೈಂಟಿಫಿಕ್‌ರವರು ಏಕೈಕ ಬಿಡ್ಡುದಾರರಾಗಿದ್ದರೂ ಸಹ ಕೆಟಿಪಿಪಿ ನಿಯಮ 1999ರ ಪ್ರಕಾರ ಮರುಟೆಂಡರ್ ಕರೆಯದೆ ಸದರಿಯವರಿಗೆ ನೀಡಿರುವುದು ಸಮಂಜಸವಾಗಿರುವುದಿಲ್ಲ.
2. ಮೆ: ಜೈನ್ ಸ್ಪೋರ್ಟ್ಸ್ ಅಂಡ್ ಸೈಂಟಿಫಿಕ್‌ರವರೊಂದಿಗೆ ಮಾಡಿಕೊಂಡಿರುವ ಕರಾರು ಪತ್ರವು ಕಡತದಲ್ಲಿ ಕಂಡುಬಂದಿರುವುದಿಲ್ಲ.

**ಪಾವತಿಯ ವಿವರಗಳು ಕೆಳಕಂಡಂತಿವೆ**

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ ರೂ. |
|---|---|---|
| 01 | 119839/26–05–2016 | 492270.00 |
| 02 | 119869/05–08–2016 | 12719.00 |
| 03 | 119856/27–06–2016 | 380000.00 |
| 04 | 119993/22–03–2017 | 155034.00 |
| 05 | 119990/14–03–2017 | 198864.00 |
| | **ಒಟ್ಟು ರೂ.** | **12,38,887.00** |

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ ರೂ. |
|---|---|---|
| 1 | 917298/25–07–2016 | 216188.00 |
| 2 | 917377/12–01–2017 | 70000.00 |
| 3 | 917378/16–01–2017 | 115000.00 |
| 4 | 917248/12–05–2016 | 40000.00 |
| 5 | 917249/12–05–2016 | 38335.00 |
| | **ಒಟ್ಟು ರೂ.** | **4,79,523.00** |

ಆರ್ಥಿಕ ಬಿಡ್‌ನಲ್ಲಿ ಮೆ: ಜೈನ್ ಸ್ಪೋರ್ಟ್ಸ್ ಅಂಡ್ ಸೈಂಟಿಫಿಕ್‌ರವರು ಏಕೈಕ ಬಿಡ್ಡುದಾರರಾಗಿದ್ದರೂ ಸಹ ಕೆಟಿಪಿಪಿ ಅಧಿನಿಯಮ, 1999ರ ಪ್ರಕಾರ ಮರು ಟೆಂಡರ್ ಕರೆಯದೆ ಸದರಿಯವರಿಗೆ ನೀಡಿರುವುದು ಸಮಂಜಸವಾಗಿರುವುದಿಲ್ಲ. ಆದ್ದರಿಂದ, ರೂ.17,18,410–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**ಅನುಪಾಲನಾ ವರದಿ**

ಎ) ದಾಸ್ತಾನು ಮತ್ತು ಖರೀದಿ ವಿಭಾಗದಲ್ಲಿ ಖರೀದಿಯ ಎಲ್ಲಾ ಸಂದರ್ಭಗಳಲ್ಲಿಯೂ ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000 ಸೆಕ್ಷನ್ 5ರ ಪ್ರಕಾರ ರೂ.1.00.000 ಕ್ಕಿಂತ ಹೆಚ್ಚು ಮೊತ್ತದ ಖರೀದಿಗೆ ಇ–ಟೆಂಡರ್ ನಿಯಮಾವಳಿಯಂತೆ ಕ್ರಮಕೈಗೊಳ್ಳಲಾಗಿದೆ.

ಬಿ) ದಾಸ್ತಾನು ಮತ್ತು ಖರೀದಿ ವಿಭಾಗದಿಂದ ಖರೀದಿಗೆ ಕೈಗೊಂಡಿರುವ ಇ-ಟೆಂಡರ್‌ನಲ್ಲಿ ಪ್ರಥಮ ಮತ್ತು ದ್ವಿತೀಯ ಸಂದರ್ಭಗಳಲ್ಲಿ ಏಕ ಬಿಡ್ ಟೆಂಡರ್ ತಿರಸ್ಕರಿಸಲಾಗಿದೆ ಹಾಗೂ ಖರೀದಿಸಬೇಕಾದ ಸರಕು/ಸೇವೆ ಪಡೆಯಲು 3ನೇ ಬಾರಿಗೆ ಮರು ಇ-ಟೆಂಡರ್‌ನ್ನು ಕರೆದು, ಸಕ್ಷಮ ಪ್ರಾಧಿಕಾರಿಗಳ ಅನುಮೋದನೆ ಪಡೆದು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಏಕ ಬಿಡ್‌ದಾರರನ್ನು ಪರಿಗಣಿಸಲಾಗಿದೆ.

ಸಿ) ದಾಸ್ತಾನು ಖರೀದಿ ವಿಭಾಗದಿಂದ ಸರಕು ಮತ್ತು ಸೇವೆಗಳನ್ನು ಏಕಮೂಲ ಸಂಸ್ಥೆಯಿಂದ ಖರೀದಿ ಮಾಡಿರುವುದಿಲ್ಲ.

ಡಿ) ದಾಸ್ತಾನು ಖರೀದಿ ವಿಭಾಗದಲ್ಲಿ ರೂ.5,000-00ಗಳಿಗೆ ಮೇಲ್ಪಟ್ಟು ಖರೀದಿಗಳಿಗೆ ದರಪಟ್ಟಿ ಆಹ್ವಾನಿಸಿ ಕ್ರಮಕೈಗೊಳ್ಳಲಾಗಿದೆ.

ಇ) ದಾಸ್ತಾನು ಖರೀದಿ ವಿಭಾಗದಲ್ಲಿ ರೂ.1.00 ಲಕ್ಷಕ್ಕೂ ಮೇಲ್ಪಟ್ಟು ಸರಕು/ಸೇವೆ ಖರೀದಿಗೆ ಇ-ಟೆಂಡರ್ ಮೂಲಕ ಖರೀದಿಗೆ ಕ್ರಮಕೈಗೊಳ್ಳಲಾಗಿದೆ.

ಎಫ್) ದಾಸ್ತಾನು ಖರೀದಿ ವಿಭಾಗದಲ್ಲಿ ಖರೀದಿಯ ಎಲ್ಲಾ ಸಂದರ್ಭಗಳಲ್ಲಿಯೂ ಕೆಟಿಪಿಪಿ ಕಾಯ್ದೆ 1999 ಮತ್ತು ನಿಯಮ 2000 ಸೆಕ್ಷನ್ 5 ರ ಪ್ರಕಾರ ರೂ.1,00,000-00ಕ್ಕಿಂತ ಹೆಚ್ಚು ಮೊತ್ತದ ಖರೀದಿಗೆ ಇ-ಟೆಂಡರ್ ನಿಯಮಾವಳಿಯಂತೆ ಕ್ರಮಕೈಗೊಳ್ಳಲಾಗಿದೆ.

ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ 2015-16ನೇ ಸಾಲಿಗೆ ಅಗತ್ಯವಿರುವ ಕೆಮಿಕಲ್ಸ್/ಗ್ಲಾಸ್‌ವೇರ್/ ಮೈನರ್ ಎಕ್ಯೂಪ್‌ಮೆಂಟ್ಸ್‌ಗಳನ್ನು ಸರಬರಾಜು ಮಾಡುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಹೊರಡಿಸಲಾಗಿತ್ತು. ಟೆಂಡರ್ ಟೆಕ್ನಿಕಲ್ ಬಿಡ್‌ನಲ್ಲಿ ಈ ಕೆಳಕಂಡ ಸಂಸ್ಥೆಗಳ ಅರ್ಜಿ ಅಂಗೀಕೃತವಾಗಿರುತ್ತವೆ.

1. ಮೆ:ಸುಧಾ ಟ್ರೇಡರ್ಸ್, ಶಿವಮೊಗ್ಗ
2. ಮೆ:ಶ್ರೀ ಮಹಲಸ ಏಜೆನ್ಸೀಸ್, ಮಂಗಳೂರು
3. ಮೆ:ಶ್ರೀ ದುರ್ಗಾ ಲ್ಯಾಬೋರೇಟರಿ ಎಕ್ಯೂಪ್‌ಮೆಂಟ್ಸ್ ಸಪ್ಲೈಸ್, ಮಂಗಳೂರು
4. ಮೆ:ಜೈನ್ ಸ್ಪೋರ್ಟ್ಸ್ & ಸೈಂಟಿಫಿಕ್, ಗಾಂಧಿಬಜಾರ್, ಶಿವಮೊಗ್ಗ
5. ಮೆ:ಅನುಗ್ರಹ ಎಂಟರ್‌ಪ್ರೈಸಸ್, ಬೆಂಗಳೂರು.

ಟೆಂಡರ್ ದಸ್ತಾವೇಜಿನಲ್ಲಿ ನಮೂದಿಸಿರುವ ಷರತ್ತಿನಂತೆ, ಮೆ:ಸುಧಾ ಟ್ರೇಡರ್ಸ್, ಶಿವಮೊಗ್ಗ ಮತ್ತು ಶ್ರೀ ದುರ್ಗಾ ಲ್ಯಾಬೋರೇಟರಿ ಎಕ್ಯೂಪ್‌ಮೆಂಟ್ ಸಪ್ಲೈಸ್, ಮಂಗಳೂರು- ಟೆಂಡರ್‌ದಾರರ ಫೈನಾನ್ಷಿಯಲ್ ಬಿಡ್‌ನಲ್ಲಿ ಇ-ಪೋರ್ಟಲ್‌ನಲ್ಲಿ '0' ಎಂದು ನಮೂದಿಸಿ ತಿರಸ್ಕೃತಗೊಂಡಿರುವುದರಿಂದ ಈ ಎರಡು ಸಂಸ್ಥೆಗಳನ್ನು ಹೊರತುಪಡಿಸಿ, ಮೆ:ಜೈನ್ ಸ್ಪೋರ್ಟ್ಸ್ & ಸೈಂಟಿಫಿಕ್, ಶಿವಮೊಗ್ಗ – ಇವರು ಫೈನಾನ್ಷಿಯಲ್ ಬಿಡ್‌ನಲ್ಲಿ ಯಶಸ್ವಿಯಾಗಿದ್ದು, ಸದರಿ ಸಂಸ್ಥೆಯೊಡನೆ ದರಸಂಧಾನ ನಡೆಸಿ, ದಿನಾಂಕ: 24-07-2015ರಂದು ದರ ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ವಿಶ್ವವಿದ್ಯಾಲಯ ಆದೇಶ ಸಂಖ್ಯೆ: KU/ SPD-1 /5956 / 2015-16/ Dt:05-02-2016ರಂತೆ ಆದೇಶ ಹೊರಡಿಸಲಾಗಿದೆ.

1. ಇ-ಟೆಂಡರ್ ಪರಿಶೀಲನಾ ಸಮಿತಿಯ ನಿರ್ಣಯದಂತೆ ಮೆ:ಜೈನ್ ಸ್ಪೋರ್ಟ್ಸ್&ಸೈಂಟಿಫಿಕ್ -ಸಂಸ್ಥೆಯು ಬಿಡ್‌ನಲ್ಲಿ ಅಂಗೀಕೃತಗೊಂಡಿದ್ದು, ಸದರಿಯವರಿಗೆ ಆದೇಶ ನೀಡಲಾಗಿತ್ತು. ಸದರಿ ಸಂಸ್ಥೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವ ಸಂದರ್ಭದಲ್ಲಿ ಹಾಗೂ ಇತರೆ ಬಿಡ್‌ದಾರರು ಇವರು ಟೆಂಡರ್‌ನಲ್ಲಿ ನಮೂದಿಸಿರುವ ಕೆಲವು ಸಂಸ್ಥೆಗಳ ಅಧಿಕೃತ ಸರಬರಾಜುದಾರಿಕೆಯ ಬಗ್ಗೆ ದೂರನ್ನು ಸಲ್ಲಿಸಿದ್ದರಿಂದ, ಸದರಿಯವರು ಟೆಂಡರ್ ಹಂತದಲ್ಲಿ ಸಲ್ಲಿಸಿರುವ ದಾಖಲೆಗಳ ನೈಜತೆ ಪರಿಶೀಲನೆಗೆ ಒಳಪಡಿಸಿದ್ದು, ಈ ಸಂದರ್ಭದಲ್ಲಿ ಈ ಸಂಸ್ಥೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳದೆ, ಆದೇಶ ಸಂಖ್ಯೆ:ಕುವಿ/ ದಾಖವಿ-1/3141/2016-17/ ದಿ:16-09-2016ರ ಆದೇಶದಲ್ಲಿ ದರ ಒಪ್ಪಂದ ರದ್ದುಪಡಿಸಲಾಗಿರುತ್ತದೆ.
2. ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಜ್ಞಾನ ವಿಭಾಗಗಳ ದೈನಂದಿನ ಕಾರ್ಯಚಟುವಟಿಕೆಗೆ ಕೆಲವು ಕೆಮಿಕಲ್ಸ್ / ಗ್ಲಾಸ್‌ವೇರ್‌ಗಳು ಅತಿ ಅಗತ್ಯವಾಗಿದ್ದರಿಂದ ಸದರಿ ಟೆಂಡರ್‌ನಲ್ಲಿ ಅತಿ ಕಡಿಮೆ ದರ ನಮೂದಿಸಿದ ಸಂಸ್ಥೆಯವರಿಂದ ಖರೀದಿಗೆ ಅನುಮೋದಿಸಲಾಗಿರುತ್ತದೆ.
3. ಇ-ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗಿದ್ದು, ಈ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಜ್ಞಾನ ವಿಭಾಗಗಳಿಗೆ ತುರ್ತಾಗಿ ಅಗತ್ಯವಿರುವ ಕೆಮಿಕಲ್ಸ್/ ಗ್ಲಾಸ್‌ವೇರ್‌ಗಳನ್ನು ಖರೀದಿಸಲು, ಖರೀದಿಪೂರ್ವ ಅನುಮೋದನೆ ಪಡೆದು ನಂತರ ನಿಯಮಾನುಸಾರ ಖರೀದಿ ಪ್ರಕ್ರಿಯೆ ಕೈಗೊಂಡು ರೂ.1.00 ಲಕ್ಷಗಳ ಮಿತಿಯೊಳಗೆ ಕೆಮಿಕಲ್ಸ್/ ಗ್ಲಾಸ್‌ವೇರ್ಸ್/ ಮೈನರ್ ಎಕ್ಯೂಪ್‌ಮೆಂಟ್ಸ್‌ಗಳನ್ನು ಖರೀದಿಸಲು ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸುತ್ತೋಲೆ ಹೊರಡಿಸಲಾಗಿದೆ. (ಸಂ.ಕುವಿ/ದಾಖವಿ-1/4251/2016-17/ ದಿನಾಂಕ:08-11-2016). ಸದರಿ ಸುತ್ತೋಲೆಯಂತೆ ಖರೀದಿ ಮಾಡಲಾಗಿದೆ.

ಆದ್ದರಿಂದ, ಸದರಿ ಆಕ್ಷೇಪಣೆಗಳನ್ನು ಕೈಬಿಡಲು ಕೋರಿದೆ.

**33(2)** **ವಾರ್ಷಿಕ ರೂ.1,00,000–00ಕ್ಕೂ ಮೇಲ್ಪಟ್ಟು ಖರೀದಿಸಿರುವುದು. ರೂ.1,53,339–00 (ಆಕ್ಷೇಪಣೆ)**

ಕೆ.ಟಿ.ಪಿ.ಪಿ. ಕಾಯ್ದೆ, 1999 ಮತ್ತು ನಿಯಮ, 2000 – ಸೆಕ್ಷನ್–5ರ ಪ್ರಕಾರ ಟೆಂಡರ್ ಕರೆಯದೇ ಮೆ: ಅಭಿಷೇಕ್ ಎಂಟರ್‌ಪ್ರೈಸಸ್, ಶಿವಮೊಗ್ಗ ಇವರಿಂದ ಕಾರ್ಟಿಡ್ಜ್, ಟೋನರ್ ಖರೀದಿಸಿರುವುದು ನಿಯಮದ ಉಲ್ಲಂಘನೆಯಾಗಿದೆ. ವಾರ್ಷಿಕ ಟೆಂಡರ್ ಕರೆಯದೇ ಖರೀದಿಸಿದ ಮೊತ್ತ ರೂ.1,53,339–00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ ರೂ. |
|---|---|---|
| 1 | 873954/13–06–2016 | 79653.00 |
| 2 | 874002/13–07–2016 | 30420.00 |
| 3 | 915720/24–03–2017 | 43266.00 |
| | **ಒಟ್ಟು ಮೊತ್ತ ರೂ.** | **153339.00** |

**ಅನುಪಾಲನಾ ವರದಿ**

ವಿಶ್ವವಿದ್ಯಾಲಯದ ಕೇಂದ್ರ ಕಛೇರಿಯಲ್ಲಿ ತೋಷಿಬಾ ಹೆಸರಿನ ಜೆರಾಕ್ಸ್ ಯಂತ್ರವಿದ್ದು, ಇದನ್ನು ಅಧಿಕೃತ ಮಾರಾಟಗಾರರಾದ ಮೆ:ಅಭಿಷೇಕ್ ಎಂಟರ್‌ಪ್ರೈಸಸ್, ಶಿವಮೊಗ್ಗ–ಇವರಿಂದ ಖರೀದಿಸಲಾಗಿರುತ್ತದೆ. ಇದಕ್ಕೆ ಸಂಬಂಧಿಸಿದ ಟೋನರ್ ಕಾಟ್ರಿಡ್ಜ್‌ಗಳನ್ನು ಅವಶ್ಯಕತೆಗೆ ಅನುಸಾರವಾಗಿ ರೂ.1.00 ಲಕ್ಷದ ಮಿತಿಗೊಳಪಟ್ಟು ಖರೀದಿಸಲಾಗಿರುತ್ತದೆ. ಕೆಲಸದ ಅವಶ್ಯಕತೆಗೆ ಅನುಗುಣವಾಗಿ ಟೋನರ್ ಕಾಟ್ರಿಡ್ಜ್‌ಗಳನ್ನು ತುರ್ತಾಗಿ ಎರಡು ಮೂರು ಬಾರಿ ಟೋನರ್ ಕಾಟ್ರಿಡ್ಜ್‌ಗಳನ್ನು ಖರೀದಿಸಲಾಗಿದೆ. ಇದರ ಮೊತ್ತ ರೂ.1,53,339–00ಗಳಾಗಿರುತ್ತದೆ. ಇನ್ನುಮುಂದೆ ಹೀಗಾಗದಂತೆ ಎಚ್ಚರ ವಹಿಸಲಾಗುವುದು.

ಆದ್ದರಿಂದ ಸದರಿ ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲಾಗಿದೆ.

**33(3)** **ಪರೀಕ್ಷಾ ಖಾತೆಯಲ್ಲಿ ಲ್ಯಾಮಿನೇಷನ್ ರೋಲ್ ಖರೀದಿಸಿರುವುದು. ರೂ.46,52,996–00 (ಆಕ್ಷೇಪಣೆ) (ಆಡಿಟ್ ವಿಚಾರಣೆ ಸಂಖ್ಯೆ:68)**

ದಿನಾಂಕ:04–12–2014ರಂದು ಟೆಂಡರ್ ಪರಿಶೀಲನಾ ಸಮಿತಿಯ ನಡಾವಳಿಗಳ ಪ್ರಕಾರ ದರ ಒಪ್ಪಂದ ಮಾಡಿಕೊಳ್ಳಲಾಗಿದೆ. ಪ್ರಸ್ತುತ ಟೆಂಡರ್ ಪ್ರಕ್ರಿಯೆಯಲ್ಲಿ ಮೆ: ರಾಜು ಎಂಟರ್‌ಪ್ರೈಸಸ್ ಮತ್ತು ಅಭಿಷೇಕ್ ಎಂಟರ್‌ಪ್ರೈಸಸ್ ಸಂಸ್ಥೆಗಳು ಭಾಗವಹಿಸಿದ್ದರೂ ಸಹ ತಾಂತ್ರಿಕ ಬಿಡ್‌ನಲ್ಲಿ ಅಭಿಷೇಕ್ ಎಂಟರ್‌ಪ್ರೈಸಸ್‌ರವರ ಅನರ್ಹದ ಕಾರಣ, Financial Bid ಗೆ ಕೇವಲ ಒಂದು ಸಂಸ್ಥೆ ಮಾತ್ರ ಉಳಿದಿರುವ ಹಿನ್ನೆಲೆಯಲ್ಲಿ ಕೆಟಿಪಿಪಿ ನಿಯಮದ ಪ್ರಕಾರ ಸಿಂಗಲ್ ಟೆಂಡರ್ ಆಗಿದ್ದು, ಸಿಂಗಲ್ ಟೆಂಡರ್ ಅನುಮೋದಿಸಲು ಅವಕಾಶಗಳು ಇಲ್ಲದಿರುವ ಕಾರಣ ಮರುಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಬದಲು ಮೆ: ರಾಜು ಎಂಟರ್‌ಪ್ರೈಸಸ್ ಸಂಸ್ಥೆಯನ್ನು ಅನುಮೋದಿಸಿ ಸಿಂಡಿಕೇಟ್‌ಗೆ ಶಿಫಾರಸ್ಸು ಮಾಡಿರುವುದು ನಿಯಮಬಾಹಿರವೆಂದು ಅಭಿಪ್ರಾಯಪಡುತ್ತಾ, ಸಿಂಡಿಕೇಟ್ ಸಭೆಗೆ ತಪ್ಪು ಮಾಹಿತಿ ನೀಡಿರುವುದೆಂದು ಮೇಲ್ನೋಟಕ್ಕೆ ಕಂಡುಬಂದಿದೆ. ಈ ಬಗ್ಗೆ ಸಮರ್ಥನೆ ಅಗತ್ಯ.

ಮುಂದುವರೆದು, ನಮೂದಿಸಿರುವ ದರ ಹಾಗೂ ಅಂಗೀಕರಿಸಿರುವ ದರವನ್ನು ಯಾವ ಆಧಾರದಲ್ಲಿ ಸಂಸ್ಥೆಯು ಖಚಿತಪಡಿಸಿಕೊಂಡಿದೆ ಎಂಬ ಬಗ್ಗೆ ವಿವರವಿಲ್ಲ. ಯಾವುದೇ ದರ ನಿರ್ಧರಿಸುವ ಮುನ್ನ ಮಾರುಕಟ್ಟೆ ದರಕ್ಕೆ ಪೂರಕವಾಗಿ ಸ್ಪರ್ಧಾತ್ಮಕವಾಗಿರಬೇಕೆಂದು ತಿಳಿಸುತ್ತಾ, ಪಾವತಿಸಿದ ಮೊತ್ತ ರೂ.46,52,996–00ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

| ಕ್ರಮ ಸಂಖ್ಯೆ | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ ರೂ. |
|---|---|---|
| 01 | 802646/03–07–2015 | 1331063.00 |
| 02 | 271931/05–12–2015 | 1359688.00 |
| 03 | 271975/31–03–2016 | 407907.00 |
| 04 | 915586/05–01–2017 | 1554338.00 |
| | **ಒಟ್ಟು ಮೊತ್ತ ರೂ.** | **46,52,996.00** |

**ಅನುಪಾಲನಾ ವರದಿ**

ಮಾನ್ಯ ಕುಲಸಚಿವರು(ಆಡಳಿತ) ಇವರ ಸೂಚನೆಯಂತೆ ಪರೀಕ್ಷಾ ವಿಭಾಗದಲ್ಲಿ ಲ್ಯಾಮಿನೇಷನ್ ರೋಲ್‌ಗಳ ಖರೀದಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ಈ ಕುರಿತಂತೆ ಟೆಂಡರ್ ಪ್ರಕಟಣೆಯನ್ನು ರಾಜ್ಯ ವ್ಯಾಪಿ ದಿನಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಆದರೆ ಇಬ್ಬರು ಟೆಂಡರ್‌ದಾರರು ಮಾತ್ರ ಭಾಗವಹಿಸಿದ್ದು, ಇವರಲ್ಲಿ ಒಬ್ಬರು ಮಾತ್ರ ತಾಂತ್ರಿಕ ಬಿಡ್‌ನಲ್ಲಿ ಅರ್ಹಗೊಂಡಿದ್ದು, ಲಕ್ಷಾಂತರ ವಿದ್ಯಾರ್ಥಿಗಳ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ತುರ್ತಾಗಿ ಲ್ಯಾಮಿನೇಷನ್ ಮಾಡಿ ನೀಡಬೇಕಾದ್ದರಿಂದ ಹಾಗೂ ಕಾಲಾವಕಾಶ ಕಡಿಮೆ ಇದ್ದುದರಿಂದ ಸದರಿಯವರ ಟೆಂಡರ್‌ನ್ನು ಅಂಗೀಕರಿಸಿ, ಈ ಹಿಂದಿನ ಸಾಲುಗಳಲ್ಲಿನ ದರಗಳನ್ನು ಪರಿಶೀಲಿಸಿ, ಅವರೊಂದಿಗೆ ದರ ಸಂಧಾನ ಮಾಡಿ ಟೆಂಡರ್ ಪರಿಶೀಲನಾ ಸಮಿತಿ ನೀಡಿದ ವರದಿಯನ್ನು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ಅನುಮೋದನೆಯನ್ನು

ಪಡೆಯಲಾಗಿರುತ್ತದೆ. ಪ್ರಸ್ತುತ ಲ್ಯಾಮಿನೇಷನ್ ರಹಿತವಾಗಿರುವ ರಕ್ಷಣಾತ್ಮಕ ಗುಣಗಳಿರುವ ಅಂಕಪಟ್ಟಿಗಳನ್ನು ಸರ್ಕಾರದಿಂದ ಅಂಗೀಕೃತಗೊಂಡ MSIL ಸಂಸ್ಥೆಯಿಂದ ಖರೀದಿಸುತ್ತಿರುವುದರಿಂದ ಮತ್ತು ಮುಂದಿನ ಟೆಂಡರ್ ಪ್ರಕ್ರಿಯೆಯಲ್ಲಿ ತಾವು ತಿಳಿಸಿರುವ ಆಕ್ಷೇಪಣೆಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮಕೈಗೊಳ್ಳಲಾಗುವುದು.

ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

**33(4)** **ದರಪಟ್ಟಿ ಇಲ್ಲದೆ ಪಾವತಿಸಿದ ಮೊತ್ತ. ರೂ.1,78,205-00(ಆಕ್ಷೇಪಣೆ)**

ವಿವಿಧ ಖಾತೆಗಳ ವೋಚರ್‌ಗಳನ್ನು ಪರಿಶೀಲಿಸಿದಾಗ, ದರಪಟ್ಟಿ ಕರೆಯದೆ ಈ ಕೆಳಕಂಡ ಮೊತ್ತಗಳನ್ನು ಪಾವತಿಸಿರುವುದು.

| ಕ್ರ.ಸಂ. | ಧನಾದೇಶ ಸಂಖ್ಯೆ/ ದಿನಾಂಕ | ವಿವರ | ಮೊತ್ತ ರೂ. |
|---|---|---|---|
| 01 | 917154/06-12-2015 | WEP Printronix LMP P1500 Printer ನ ರೀಪೇರಿಗೆ (ಆಡಿಟ್ ವಿಚಾರಣೆ ಸಂಖ್ಯೆ: 144) | 25764.00 |
| 02 | 802633/23-06-2015 | ಜಾಹಿರಾತು ವೆಚ್ಚ (ಆಡಿಟ್ ವಿಚಾರಣೆ ಸಂಖ್ಯೆ: 81) | 26280.00 |
| 03 | 271926/24-11-2015 | ಕಿರಣ್ ಪ್ರಿಂಟರ್ಸ್‌ರವರಿಗೆ ಬ್ಯಾಡ್ಜ್‌ಗಳನ್ನು ಖರೀದಿಸಿರುವುದು. (ಆಡಿಟ್ ವಿಚಾರಣೆ ಸಂಖ್ಯೆ: 84) | 18885.00 |
| 04 | 894416/01-09-2015 | ನಾಡಿಗ್ ಗ್ರಾಫಿಕ್ಸ್, ಗುರುತಿನ ಚೀಟಿ ಖರೀದಿ. | 81256.00 |
| 05 | 569859/18-03-2017 | ಅಗ್ನಿಶಾಮಕ ಖರೀದಿ | 26020.00 |
| | | **ಒಟ್ಟು ರೂ.** | **1,78,205.00** |

**ಅನುಪಾಲನಾ ವರದಿ**

1. 2015-16ನೇ ಸಾಲಿನಲ್ಲಿ ಪರೀಕ್ಷಾ ವಿಭಾಗದಲ್ಲಿರುವ ಅನುಪಯುಕ್ತ ಕಾಗದ ಪತ್ರಗಳ ವಿಲೇವಾರಿಗೆ ಸಂಬಂಧಿಸಿದಂತೆ ಇ-ಟೆಂಡರ್ ಪ್ರಕ್ರಿಯೆ ಕೈಗೊಂಡು ಟೆಂಡರ್ ಪ್ರಕಟಣೆಯನ್ನು ರಾಜ್ಯವ್ಯಾಪಿ ದಿನಪತ್ರಿಕೆಯಲ್ಲಿ ಜಾಹಿರಾತು ರೂಪದಲ್ಲಿ ಪ್ರಕಟಿಸಲು, ಜಿಲ್ಲಾ ವಾರ್ತಾ ಇಲಾಖೆ, ಶಿವಮೊಗ್ಗ ಇವರಿಗೆ ಪತ್ರ ಬರೆಯಲಾಗಿತ್ತು. ಅದರನ್ವಯ ಸದರಿಯವರು ಅವರ ಇಲಾಖಾ ನಿಯಮಾವಳಿಯಂತೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ವಿಶ್ವವಿದ್ಯಾಲಯದ ಮೇಲ್ಕಂಡ ಇ-ಟೆಂಡರ್ ಪ್ರಕಟಣೆಯನ್ನು ಪ್ರಕಟಿಸಲು ತಿಳಿಸಿದ್ದು, ದಿನಪತ್ರಿಕೆಯಲ್ಲಿ ಟೆಂಡರ್ ಪ್ರಕಟಣೆಯನ್ನು ಜಾಹಿರಾತು ರೂಪದಲ್ಲಿ ಪ್ರಕಟಿಸಿದ ನಂತರ ಪ್ರಜಾವಾಣಿ ದಿನಪತ್ರಿಕೆಯ ಪ್ರತಿನಿಧಿಯಾದ ರವಿ ಅಡ್ವರ್‌ಟೈಸರ್ಸ್‌ರವರು ಪ್ರಕಟಣಾ ವೆಚ್ಚ ರೂ.26,280/-ರ ಹುಂಡಿಯನ್ನು ಸಲ್ಲಿಸಿದ್ದರಿಂದ, ಹುಂಡಿಯನ್ನು ಹಣಕಾಸು ವಿಭಾಗಕ್ಕೆ ಕಳುಹಿಸಿ, ಅಲ್ಲಿಂದ ಧನಾದೇಶದ ಮೂಲಕ ಪ್ರಕಟಣಾ ವೆಚ್ಚ ಪಾವತಿಯಾಗಿರುತ್ತದೆ. ಆದುದರಿಂದ ಈ ವೆಚ್ಚಕ್ಕೆ ದರಪಟ್ಟಿ ಇರುವುದಿಲ್ಲ. ಹಾಗೂ ದಿನಪತ್ರಿಕೆಗಳಲ್ಲಿ ಜಾಹಿರಾತು ರೂಪದಲ್ಲಿ ಪ್ರಕಟಣೆಗಳನ್ನು ನೀಡಿದಾಗ ವಾರ್ತಾ ಇಲಾಖೆ ನಿಗದಿಪಡಿಸಿರುವ ದರಗಳಂತೆಯೆ ಪಾವತಿ ಮಾಡಲಾಗಿರುತ್ತದೆ.

2. ಘಟಿಕೋತ್ಸವದ ಕಾರ್ಯಕ್ರಮಕ್ಕೆ ಅತ್ಯವಶ್ಯಕವಾಗಿ ಬೇಕಾಗಿದ್ದಂತಹ 1450 ಬ್ಯಾಡ್ಜ್‌ಗಳನ್ನು ತುರ್ತಾಗಿ ಮಾಡಿಸಬೇಕಾದ ಸಂದರ್ಭ ಒದಗಿಬಂದಿದ್ದರಿಂದ ಕಿರಣ್ ಪ್ರಿಂಟರ್ಸ್, ಬಿ.ಆರ್. ಪ್ರಾಜೆಕ್ಟ್ ಇವರಿಂದ ಮಾಡಿಸಲಾಗಿದೆ. ಮುಂದೆ ಈ ರೀತಿ ಆಗದಂತೆ ಗಮನಹರಿಸಲಾಗುವುದು

ಆದ್ದರಿಂದ ಈ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

**34** **ಎ.ಸಿ. ಬಿಲ್‌ಗಳ ಮೂಲಕ ಮುಂಗಡವಾಗಿ ಪಡೆದ ಮೊತ್ತಗಳಿಗೆ ಲೆಕ್ಕ ಹೊಂದಾಣಿಕೆಗೆ ಸಲ್ಲಿಸಲಾದ ಎನ್.ಡಿ.ಸಿ. ಬಿಲ್‌ಗಳ ನ್ಯೂನತೆಗಳು. ರೂ.1,60,83,700-00 (ಆಕ್ಷೇಪಣೆ)**

2015-16 ಮತ್ತು 2016-17ನೇ ಸಾಲಿನಲ್ಲಿ ವಿವಿಧ ಖಾತೆಗಳಿಂದ ಎ.ಸಿ. ಹುಂಡಿಗಳ ಮೂಲಕ ಮುಂಗಡವಾಗಿ ಪಡೆದ ಮೊತ್ತಗಳಿಗೆ (ಜ್ಞಾನಸಹ್ಯಾದ್ರಿ, ಪಿಂಚಣಿ, ಯೋಜನೆ ಖಾತೆಯನ್ನು ಹೊರತುಪಡಿಸಿ) ಲೆಕ್ಕ ಹೊಂದಾಣಿಕೆಗೆ ಎನ್.ಡಿ.ಸಿ. ಬಿಲ್‌ಗಳನ್ನು ಹಾಗೂ ಉಳಿಕೆ ಮೊತ್ತವನ್ನು ಸುಮಾರು ಒಂದು ವರ್ಷದ ಬಳಿಕ ಸಲ್ಲಿಸಿರುವುದು ಕಂಡುಬಂದಿರುತ್ತದೆ.

- ಎ.ಸಿ. ಹುಂಡಿಯಲ್ಲಿ ಅವಶ್ಯಕತೆಗೆ ತಕ್ಕಂತೆ ಮುಂಗಡ ಹಣ ಪಡೆಯಬೇಕೆಂಬ ನಿಯಮವಿದ್ದರೂ ಹೆಚ್ಚುವರಿ ಮೊತ್ತವನ್ನು ಡ್ರಾ ಮಾಡಿ ವಿಳಂಬವಾಗಿ ಲೆಕ್ಕ ತೀರುವಳಿ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಸಂಕ್ಷಿಪ್ತ ಸಾದಿಲ್ವಾರು ವೆಚ್ಚಗಳ ಕೈಪಿಡಿ ನಿಯಮ, 1958ರ ಸೆಕ್ಷನ್-36(6)ರನ್ವಯ ಹೆಚ್ಚುವರಿ ಮೊತ್ತಕ್ಕೆ ನಿಯಮಾನುಸಾರ ಬಡ್ಡಿ ವಿಧಿಸಿ, ಸಂಬಂಧಿಸಿದವರಿಂದ ವಸೂಲಾತಿ ಮಾಡಲು ಸೂಚಿಸಿದೆ. ವಿವರವನ್ನು **ಅನುಬಂಧ-10**ರಲ್ಲಿ ಲಗತ್ತಿಸಿದೆ.

**ಅನುಪಾಲನಾ ವರದಿ**

2015–16 ಮತ್ತು 2016–17ನೇ ಸಾಲಿನಲ್ಲಿ ತುರ್ತು ಕಾರ್ಯದ ಅಗತ್ಯತೆಗೆ ಅನುಸಾರವಾಗಿ ಎ.ಸಿ. ಬಿಲ್‌ಗಳಲ್ಲಿ ಮುಂಗಡ ಮಂಜೂರು ಮಾಡಲಾಗಿದೆ. ಎ.ಸಿ. ಬಿಲ್‌ನಲ್ಲಿ ಪಡೆದ ಪರೀಕ್ಷಾಂಗ ವಿಭಾಗ, ದೂರಶಿಕ್ಷಣ ನಿರ್ದೇಶನಾಲಯ ಹಾಗೂ ಇತರೆ ವಿಭಾಗದವರು ಪರೀಕ್ಷೆಗೆ ಸಂಬಂಧಪಟ್ಟ ಮೌಲ್ಯಮಾಪನ ಹಾಗೂ ಇತರೆ ಕಾರ್ಯಕ್ರಮಗಳನ್ನು ನಡೆಸಿದ್ದು ಅವರಿಗೆ ಸಂಭಾವನೆ ಪಾವತಿಸಿದ್ದು, ಸಂಬಂಧಪಟ್ಟವರಿಂದ ನಿಗದಿತ ಸಮಯದಲ್ಲಿ ವೋಚರ್‌ಗಳನ್ನು ಪಡೆಯುಲು ಸಾಧ್ಯವಾಗದಿರುವ ಕಾರಣ ಎನ್.ಡಿ.ಸಿ. ಹೊಂದಾಣಿಕೆ ತಡವಾಗಿರುತ್ತದೆ. ಇನ್ನುಮುಂದೆ, ತಡವಾಗಿ ಎನ್.ಡಿ.ಸಿ. ಬಿಲ್ ಸಲ್ಲಿಸುವವರ ಮೇಲೆ ಬಡ್ಡಿ ಸಮೇತ ಹಣ ವಸೂಲಿಗೆ ಕ್ರಮಕೈಗೊಳ್ಳಲಾಗಿದೆ.

ಆದಕಾರಣ ಈ ಕಂಡಿಕೆಯನ್ನು ಕೈಬಿಡಲು ಕೋರಿದೆ.

**35** **ಕಾಮಗಾರಿ ಬಿಲ್ಲುಗಳಲ್ಲಿ ರಾಜಧನ ಕಟಾಯಿಸಿರುವುದು. ರೂ.5,412–00 (ವಸೂಲಾತಿ)**

2015–16ನೇ ಸಾಲಿನ ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ, ರೂ.5,412–00ಗಳ ರಾಜಧನ ಮೊತ್ತ ಕಡಿಮೆ ಕಟಾಯಿಸಿರುವುದು. ಈ ಬಗ್ಗೆ ಆಡಿಟ್ ವಿಚಾರಣೆ ಪತ್ರಸಂಖ್ಯೆ:173ರಲ್ಲಿ ಸ್ಪಷ್ಟೀಕರಣ ನೀಡುವಂತೆ ಕೋರಿದಾಗ್ಯೂ ಯಾವುದೇ ಸ್ಪಷ್ಟೀಕರಣ ನೀಡಿರುವುದಿಲ್ಲ. ಆದ್ದರಿಂದ, ಕಡಿಮೆ ಕಟಾಯಿಸಿರುವ ರಾಜಧನ ಮೊತ್ತ ರೂ.5,412–00 ಗಳನ್ನು ಸಂಬಂಧಿಸಿದವರಿಂದ ವಸೂಲಿಸಿ ಸಂಬಂಧಿಸಿದ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿಸಲು ಸೂಚಿಸಿದೆ, ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಕಾಮಗಾರಿಯ ಹೆಸರು | ರಾಜಧನ ಕಟಾಯಿಸ ಬೇಕಾಗಿರುವುದು | ರಾಜಧನ ಕಟಾಯಿಸಿ ರುವುದು | ಕಡಿಮೆ ಕಟಾಯಿಸಿ ರವುದು | ಎಂಬಿ/ಪಿ | ಗುತ್ತಿಗೆದಾರರ ಹೆಸರು | ಧನಾದೇಶ ಸಂಖ್ಯೆ/ ದಿನಾಂಕ/ ರೂ. |
|---|---|---|---|---|---|---|---|
| 1 | The work of formation road and construction of drain Dobhikatte near Ladies Hostel | 8094 | 5115 | 2979 | 2589/18 | ರಂಜಿತ್ ಕುಮಾರ | 599367/04–05–15 ರೂ.178168/– |
| 2 | Constructiopn of Drain and revetment near old Ladies Hostel of Kuvempu University | 5780 | 4994 | 786 | 2586/38 | ಮಹಮದ್ ಗೌಸ್ | 599387/ 14–7–15 ರೂ.152515/– |
| 3 | Filling pot holes and patch repairs to the roads towards MBA Library circle | 661 | 0 | 661 | 2474/ 33–39 | ಪರಶು ರಾಮ್ | 599375/06–06–15 ರೂ.319046 |
| 4 | Providing roofing tiles, Flagging concrete flooring and rain water pipes to Archeaological Museaum building at Keladi | 2558 | 2335 | 223 | 2527/ 33–35 | ಕೃಷ್ಣೋಜಿ ರಾವ್ | 599381/11–06–15 ರೂ.233953/– |
| 5 | Providing pipe crassing painting and other repair works to Archealogical Museaum building at Keladi | 2160 | 1397 | 763 | 2527/ 32 | ಕೃಷ್ಣಮೂರ್ತಿ | 599380/11–06–15 ರೂ.178149/– |
| | ಒಟ್ಟು ಮೊತ್ತ ರೂ. | | | **5412** | | | |

**ಅನುಪಾಲನಾ ವರದಿ**

ಸೂಚಿತ ಕಾಮಗಾರಿಗಳ ಬಿಲ್ಲಿನಲ್ಲಿ ಸರ್ಕಾರದ ಅಧಿಸೂಚನಾ ಪತ್ರಸಂಖ್ಯೆ: ಸಿಐ 81 ಎಂ.ಎಂ.ಎನ್. 2014 ಬೆಂಗಳೂರು: ದಿನಾಂಕ: 05–03–2014ರಲ್ಲಿ ಸೂಚಿಸಿದಂತೆ ಕಡಿಮೆ ಕಟಾಯಿಸಿದ ರಾಜಧನವನ್ನು ಸಂಬಂಧಿಸಿದ ಗುತ್ತಿಗೆದಾರರಿಂದ ಕಟಾಯಿಸಲಾಗಿದೆ.

ಆದ್ದರಿಂದ ಕಂಡಿಕೆಯನ್ನು ಕೈಬಿಡಲು ಕೋರಿದೆ.

**36** **ಕೆ.ಟಿ.ಪಿ.ಪಿ. ನಿಯಮ 2000ದ ಪ್ರಕಾರ ಕಾಮಗಾರಿಗೆ ಟೆಂಡರ್ ಕರೆಯದೇ ಗುತ್ತಿಗೆ ನೀಡಿರುವುದು ಹಾಗೂ ಅಂದಾಜು ಪಟ್ಟಿಗೆ ಮುಖ್ಯ ಇಂಜಿನಿಯರ್‌ರವರಿಂದ ತಾಂತ್ರಿಕ ಅನುಮೋದನೆ ಪಡೆಯದಿರುವುದು. ರೂ.20,93,083–00 (ಆಕ್ಷೇಪಣೆ)**

ವಿಶ್ವವಿದ್ಯಾಲಯದ ಕಾಮಗಾರಿ ಬಿಲ್ಲುಗಳನ್ನು ಪರಿಶೀಲಿಸಲಾಗಿ ರೂ.2.16 ಕೋಟಿ ಅಂದಾಜು ವೆಚ್ಚದ ಕಾಮಗಾರಿಗೆ ಕೆ.ಟಿ.ಪಿ.ಪಿ. ನಿಯಮ, 2000 ಪ್ರಕಾರ ಟೆಂಡರ್ ಕರೆಯದೇ ಕಾಮಗಾರಿ ಗುತ್ತಿಗೆ ನೀಡಿರುವುದು ಹಾಗೂ ಮುಖ್ಯ ಇಂಜಿನಿಯರ್‌ರವರಿಂದ ಸದರಿ ಕಾಮಗಾರಿಯ ಅಂದಾಜು ವೆಚ್ಚಕ್ಕೆ ತಾಂತ್ರಿಕ ಅನುಮತಿ ಪಡೆಯದೇ ಇರುವ ಕಾಮಗಾರಿಗೆ ರೂ.20,93,083–00ಗಳ ಬಿಲ್ ಪಾವತಿಸಿರುವುದು ಕಂಡುಬಂದಿರುತ್ತದೆ.

ಈ ಬಗ್ಗೆ ಆಡಿಟ್ ವಿಚಾರಣಾ ಪತ್ರ ಸಂಖ್ಯೆ:174ರಲ್ಲಿ ಸ್ಪಷ್ಟೀಕರಣ ನೀಡುವಂತೆ ಕೋರಿದಾಗ್ಯೂ ಯಾವುದೇ ಸ್ಪಷ್ಟೀಕರಣ ನೀಡಿರುವುದಿಲ್ಲ. ಕೆ.ಟಿ.ಪಿ.ಪಿ. ನಿಯಮ, 2000ದ ಪ್ರಕಾರ ರೂ.5.00 ಲಕ್ಷಕ್ಕಿಂತ ಯಾವುದೇ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸಬೇಕಾದರೆ, ಕಡ್ಡಾಯವಾಗಿ ಇ-ಟೆಂಡರ್ ಪ್ರಕ್ರಿಯೆ ಮೂಲಕ ನಿರ್ವಹಿಸಬೇಕಿರುತ್ತದೆ ಹಾಗೂ ರೂ.50.00 ಲಕ್ಷಕ್ಕಿಂತ ಹೆಚ್ಚಿನ ಅಂದಾಜು ಮೊತ್ತದ ಕಾಮಗಾರಿಗಳಿಗೆ ಕಡ್ಡಾಯವಾಗಿ ಮುಖ್ಯ ಇಂಜಿನಿಯರ್‌ರವರಿಂದ ತಾಂತ್ರಿಕ ಅನುಮೋದನೆ ಪಡೆದಿರುವುದಿಲ್ಲ.

ಮುಂದುವರೆದು, ಸದರಿ ಕಾಮಗಾರಿಗೆ 2009–10ರ S.R. ದರದಂತೆ ಅಂದಾಜು ಪಟ್ಟಿ ತಯಾರಿಸಿ ಅಧೀಕ್ಷಕ ಇಂಜಿನಿಯರ್ (ಎಸ್.ಇ) ರವರ ಅನುಮೋದನೆಗೆ ಕಡತ ಕಳುಹಿಸಿದ್ದು, ಅಧೀಕ್ಷಕ ಇಂಜಿನಿಯರ್‌ರವರು ಸದರಿ ಸಮಯದಲ್ಲಿ 2010–11ರ S.R. ದರ ಜಾರಿಯಾಗಿದ್ದು, 2010–11ರ S.R. ದರಕ್ಕೆ ಅಂದಾಜು ಪಟ್ಟಿ ತಯಾರಿಸಿ ಮರು ಪ್ರಸ್ತಾವನೆ ಸಲ್ಲಿಸಲು ಕಡತ ಹಿಂದಿರುಗಿಸಿರುತ್ತಾರೆ. ಆದರೆ, 2010–11ರ S.R. ದರದಂತೆ ಅಂದಾಜು ಪಟ್ಟಿ ತಯಾರಿಸಿ ಮುಖ್ಯ ಇಂಜಿನಿಯರ್‌ರವರಿಂದ ತಾಂತ್ರಿಕ ಅನುಮೋದನೆ ಪಡೆಯದೇ, ಈ ಮೊದಲೇ 2009–10ರ S.R. ದರದಲ್ಲಿ ತಯಾರಿಸಿದ ಅಂದಾಜು ಪಟ್ಟಿಗೆ ಶೇ.22ರ S.R. ದರಕ್ಕಿಂತ ಹೆಚ್ಚುವರಿ ಪಾವತಿಸಲು ಒಪ್ಪಿ ಮೊದಲನೇ ಮಹಡಿಗೆ ಗುತ್ತಿಗೆ ನೀಡಿದ ಶಿವಾನಿ ಕನ್ಸ್ಟ್ರಕ್ಷನ್ ಸಂಸ್ಥೆಗೆ ಕಾಮಗಾರಿ ಗುತ್ತಿಗೆ ನೀಡಿರುತ್ತಾರೆ.

ಇದರು ಕೆ.ಟಿ.ಪಿ.ಪಿ. ನಿಯಮ, 2000 ರ ಸ್ಪಷ್ಟ ಉಲ್ಲಂಘನೆಯಾಗಿದೆ ಹಾಗೂ ಭಾರತೀಯ ಸಂವಿಧಾನ ಅನುಚ್ಛೇದ–14ರ ಸಮಾನ ಅವಕಾಶ ತತ್ವಕ್ಕೆ ವಿರುದ್ಧವಾಗಿರುತ್ತದೆ ಹಾಗೂ ರೂ.50.00 ಲಕ್ಷಕ್ಕಿಂತ ಹೆಚ್ಚಿನ ಮೊತ್ತದ ಕಾಮಗಾರಿಯಾಗಿದ್ದು, ಮುಖ್ಯ ಇಂಜಿನಿಯರ್‌ರವರಿಂದ ಅಂದಾಜು ಪಟ್ಟಿಗೆ ತಾಂತ್ರಿಕ ಅನುಮೋದನೆ ಪಡೆಯದೇ ಇರುವುದರಿಂದ, ಕಾಮಗಾರಿ ಬಿಲ್ಲಿನ ಮೊತ್ತ ರೂ.20,93,083–00ಗಳನ್ನು ಆಕ್ಷೇಪಣೆಯಲ್ಲಿರಿಸಿದೆ. ಪಾವತಿ ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ | 2015–16ರ ಬಿಲ್ ಮೊತ್ತ | ತೆರಿಗೆ/ ಇತರೆ ಕಡಿತ | ಪಾವತಿ ರೂ. | ಧನಾದೇಶ ಸಂಖ್ಯೆ/ ದಿನಾಂಕ |
|---|---|---|---|---|---|---|
| 1 | Construction IInd Floor Master of Tourism and Administration Block at Sahyadri College Campus. | 2.16 ಕೋಟಿ | 2093083.00 | 217629.00 | 1795454.00 | 599367/ 01–06–15 ರೂ.178168/– |

**ಅನುಪಾಲನಾ ವರದಿ**

ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುವಂತಹ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಸ್ನಾತಕೋತ್ತರ ಕೇಂದ್ರಗಳನ್ನು ಆಯಾ ಕಾಲೇಜುಗಳಲ್ಲಿ ಪ್ರಾರಂಭಿಸಲಾಗಿದ್ದು, ಅಗತ್ಯತೆಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಕೊಠಡಿಗಳನ್ನು ಪೂರೈಸಬೇಕಾದ ಹಿನ್ನೆಲೆಯಲ್ಲಿ ಮತ್ತು ಮೊದಲನೇ ಮಹಡಿ ಟೆಂಡರ್‌ನಲ್ಲಿ ಕಾಮಗಾರಿ ಕೈಗೆತ್ತಿಕೊಂಡಿದ್ದರಿಂದ ದಿ:09–12–2010ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪೂರಕ ಕರಾರು ಒಪ್ಪಂದದ ಮೂಲಕ ಮೊದಲನೇ ಮಹಡಿ ಕಾಮಗಾರಿಗೆ ನೀಡಲಾದ ಟೆಂಡರ್‌ದಾರರಿಂದ ಶೇ.2ರಷ್ಟು ದರವನ್ನು ಕಡಿಮೆ ಮಾಡಿ ದರ ಸಂಧಾನದ ಮೂಲಕ ಎರಡನೇ ಮಹಡಿ ವಿಸ್ತರಣೆಯನ್ನು ಪೂರಕ ಕರಾರಿನನ್ವಯ ಕೈಗೆತ್ತಿಕೊಳ್ಳಲಾಗಿರುತ್ತದೆ. ಮೊದಲನೇ ಮಹಡಿಯ ಅಂದಾಜು ಪಟ್ಟಿಯ ತಾಂತ್ರಿಕ ಪರಿಶೀಲನೆಯನ್ನು ಪಿ.ಡಬ್ಲ್ಯೂ.ಡಿ. ಮುಖ್ಯ ಅಭಿಯಂತರರಿಂದ ಪಡೆದಿದ್ದು, ಎರಡನೇ ಮಹಡಿಯ ಕಾಮಗಾರಿಯನ್ನು ಅದೇ ಅಂಶವಾರುಗಳಲ್ಲಿ ಕೈಗೆತ್ತಿಕೊಂಡಿದ್ದು, ಮಾನ್ಯ ಕುಲಪತಿಯವರ ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ವಿಶ್ವವಿದ್ಯಾಲಯದ ಕಾರ್ಯಪಾಲಕ ಇಂಜಿನಿಯರ್‌ರವರಿಗೆ ವಿಶ್ವವಿದ್ಯಾಲಯದ ಕಾಮಗಾರಿಗಳಿಗೆ ತಾಂತ್ರಿಕ ಪರಿಶೀಲನೆ ಹಾಗೂ ಅನುಮೋದನೆ ಮಾಡುವ ಅಧಿಕಾರ ನೀಡಲಾಗಿದ್ದು, ದಿನಾಂಕ:01–08–2011 ಮತ್ತು 27–01–2012 ರಂದು ನಡೆದ ಕಟ್ಟಡ ಸಮಿತಿ ಸಭಾ ನಡಾವಳಿ ಅನುಸಾರ ದಿನಾಂಕ: 01–02–2012ರ ಸಿಂಡಿಕೇಟ್ ಸಭೆ ಅನುಮೋದನೆಗೊಂಡಿದ್ದು, ಮಾನ್ಯ ಕುಲಸಚಿವರಿಂದ No:KU:ENGG:EE: Reg.PA: 37:2012-13:dated: 12-04-2012ರಲ್ಲಿ ಆದೇಶಗೊಂಡಿದೆ ಮತ್ತು 2009–10ನೇ ಸಾಲಿನ ದರಪಟ್ಟಿ ದರದನ್ವಯ ಬಿಲ್ಲು ಪಾವತಿಸಿರುವ ಹಿನ್ನೆಲೆಯಲ್ಲಿ, ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ಉಳಿತಾಯವಾಗಿರುವ ಅಂಶವನ್ನು ಗಮನಕ್ಕೆ ತರುತ್ತಾ, ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ.

**37** **ವೋಚರ್ಸ್ ಹಾಜರುಪಡಿಸದಿರುವುದು. ರೂ.4,60,010–00 (ಆಕ್ಷೇಪಣೆ)**

2015–16ನೇ ಸಾಲಿನ ಕಾಮಗಾರಿಗಳ Planning ಖಾತೆಯ ವೆಚ್ಚಕ್ಕೆ ಸಂಬಂಧಿಸಿದ ಕಡತಗಳನ್ನು ಪರಿಶೀಲಿಸಲಾಗಿ, ರೂ.4,60,010–00ಗಳ ಮೊತ್ತದ ವೋಚರ್ಸ್‌ಗಳನ್ನು ಲೆಕ್ಕ ತಪಾಸಣೆಗೆ ಹಾಜರುಪಡಿಸಿಲ್ಲ. ಆಡಿಟ್ ವಿಚಾರಣಾ ಪತ್ರಸಂಖ್ಯೆ:175ರಲ್ಲಿ ವೋಚರ್ಸ್ ಹಾಜರುಪಡಿಸುವಂತೆ ಕೋರಿದಾಗ್ಯೂ ಹಾಜರು ಪಡಿಸಿರುವುದಿಲ್ಲ. ಆದ್ದರಿಂದ, ಪಾವತಿ ಮೊತ್ತ ರೂ.4,60,010–00ಗಳನ್ನು ಆಕ್ಷೇಪಣೆಯಲ್ಲಿರಿಸಿದೆ. ವಿವರ ಈ ಕೆಳಗಿನಂತಿದೆ.

| ಕ್ರ.ಸಂ. | ಧನಾದೇಶ ಸಂಖ್ಯೆ/ ದಿನಾಂಕ | ಮೊತ್ತ ರೂ. | ವಿವರ |
|---|---|---|---|
| 01 | 514911/31–12–2015 | 75598.00 | ವಿವರವಿಲ್ಲ |
| 02 | 514920/04–02–2016 | 205906.00 | ಮ್ಯಾನೇಜರ್, ಎಸ್.ಬಿ.ಎಂ. |
| 03 | 514924/20–02–2016 | 178506.00 | ವಿವರವಿಲ್ಲ |
| | ಒಟ್ಟು ರೂ. | **4,60,010.00** | |

| | |
|---|---|
| **ಅನುಪಾಲನಾ ವರದಿ** | 2015-16ನೇ ಸಾಲಿನ ಕಾಮಗಾರಿಗಳ Planning ಖಾತೆಯ ವೆಚ್ಚಕ್ಕೆ ಸಂಬಂಧಿಸಿದ ವೋಚರ್‌ಗಳನ್ನು ಮುಂದಿನ ಲೆಕ್ಕಪರಿಶೋಧನೆ ಸಮಯದಲ್ಲಿ ಹಾಜರುಪಡಿಸಲಾಗುವುದು.<br>ಆದಕಾರಣ ಈ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **38** | **ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತಕ್ಕಿಂತ ಹೆಚ್ಚುವರಿ ಮೊತ್ತವನ್ನು ಪಾವತಿಸಿರುವುದು. ರೂ.38,616-00 (ವಸೂಲಾತಿ)**<br><br>2015-16ನೇ ಸಾಲಿನಲ್ಲಿ ಯೋಜನೆ ಖಾತೆಯಿಂದ ಕನ್ನಡ ಭಾಷಾಭಿವೃದ್ಧಿ ಯೋಜನೆಯಲ್ಲಿ ಕನ್ನಡ ಭಾರತಿ ಕುವೆಂಪು ಸಾಹಿತ್ಯ ಪದ ವಿವರಣ ಕೋಶಗಳ ಸಿದ್ಧಪಡಿಸಿದ್ದು, ಅವುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪ್ರಕಾರ ಮೆ: ಮಯೂರ ಪ್ರಿಂಟ್ ಆಡ್ಸ್ ಸಂಸ್ಥೆಯಿಂದ ಮುದ್ರಿಸಲಾಗಿದೆ.<br><br>ಇ-ಪ್ರೊಕ್ಯೂರ್‌ಮೆಂಟ್‌ನ ಪ್ರಕಾರ ಮೆ: ಮಯೂರ ಪ್ರಿಂಟ್ ಆಡ್ಸ್‌ರವರು 4000 ಪ್ರತಿಗಳಿಗೆ ರೂ.10,17,320-00ಗಳು ಎಂದು ನಮೂದಿಸಿರುತ್ತಾರೆ. ಆದರೆ, ಮಯೂರ ಪ್ರಿಂಟ್ ಆಡ್ಸ್ ಸಂಸ್ಥೆಯವರು ರೂ.10,55,936-00ಗಳಿಗೆ ಸದರಿ ಮುದ್ರಣ ವೆಚ್ಚದ ಬಿಲ್‌ಗಳನ್ನು ಸಲ್ಲಿಸಿರುತ್ತಾರೆ. ಮುಂದುವರೆದು ಲೆಕ್ಕ ಶಾಖೆಯಲ್ಲಿ ರೂ.10,55,936-00ಗಳನ್ನು ಸದರಿಯವರಿಗೆ ಪಾವತಿಸಿರುತಾರೆ. ಆದ್ದರಿಂದ, ಹೆಚ್ಚುವರಿ ಮೊತ್ತ ರೂ.38,616-00ಗಳನ್ನು ಸರಬರಾಜುದಾರರಿಂದ ವಸೂಲಿಸಲು ಸೂಚಿಸಿದೆ. |
| **ಅನುಪಾಲನಾ ವರದಿ** | ಮೆ: ಮಯೂರ ಪ್ರಿಂಟ್ ಆಡ್ಸ್‌ರವರು 4000 ಪ್ರತಿಗಳಿಗೆ ರೂ.10,17,320-00ಗಳನ್ನು ನಮೂದಿಸಿದ್ದು, ಪಾವತಿಗೆ ರೂ.10,55,936-00ಗಳ ಮುದ್ರಣ ವೆಚ್ಚದ ಬಿಲ್ಲುಗಳನ್ನು ಪಾವತಿಗೆ ಸಲ್ಲಿಸಿದ್ದು, ಅಚಾತುರ್ಯದಿಂದ ರೂ.10,17,320-00ಗಳನ್ನು ಪಾವತಿಸುವ ಬದಲು ರೂ.10,55,936-00ಗಳನ್ನು ಹೆಚ್ಚುವರಿಯಾಗಿ ರೂ.38,616-00ಗಳನ್ನು ಪಾವತಿಸಲಾಗಿದೆ. ಹೆಚ್ಚುವರಿಯಾಗಿ ಪಾವತಿಸಲಾದ ಮೊತ್ತವನ್ನು ಸಂಬಂಧಿಸಿದ ಸಂಸ್ಥೆಯಿಂದ ಮುಂಬರುವ ಬಿಲ್ಲುಗಳಲ್ಲಿ ಕಟಾಯಿಸಲು ಕ್ರಮಕೈಗೊಳ್ಳಲಾಗುವುದು.<br>ಆದ್ದರಿಂದ ಈ ಕಂಡಿಕೆಯನ್ನು ಕೈಬಿಡಲು ಕೋರಿದೆ. |
| **39** | **2016-17ನೇ ಸಾಲಿನಲ್ಲಿ ಪಾವತಿಸಲಾದ ಕಾಮಗಾರಿಯ ಅಂತಿಮ ಬಿಲ್ಲುಗಳಲ್ಲಿ ಗರಿಷ್ಠ ಪ್ರಮಾಣದ ಟೆಂಡರ್ ಪ್ರೀಮಿಯಂಗಿಂತ ಹೆಚ್ಚುವರಿ ಟೆಂಡರ್ ಪ್ರೀಮಿಯಂ ನೀಡಿ ಪಾವತಿಸಲಾದ ಮೊತ್ತ ರೂ.1,36,03,569/- ಆಕ್ಷೇಪಣೆ.**<br><br>2016-17ನೇ ಸಾಲಿನಲ್ಲಿ ಪಾವತಿಸಲಾದ ಅಂತಿಮ ಕಾಮಗಾರಿಯ ಬಿಲ್ಲುಗಳನ್ನು ಪರಿಶೀಲಿಸಲಾಗಿ ಸರ್ಕಾರದ ಆದೇಶ ಸಂಖ್ಯೆ:GONO/PWD/1/FCR/93 ದಿ:15.12.1994ಹಾಗೂ PWD/438/FC/ 1/2009 ದಿ:22.06.2009 ಮತ್ತು ದಿ:30.07.2009ರ ಡೆಲಿಗೇಶನ್ ಆಫ್ ಪವರ್ಸ್‌ನ ಐಟಂ '3A' ರಲ್ಲಿ ಟೆಂಡರ್ ಅನುಮೋದನೆಗಾಗಿ ಕ್ರಮವಾಗಿ ಗರಿಷ್ಟ 15% ಹೆಚ್ಚಳಕ್ಕೆ ಹಾಗೂ 5% ಹೆಚ್ಚಳಕ್ಕೆ ಮಾತ್ರ ಅವಕಾಶವಿರುತ್ತದೆ.<br>ನಿಗದಿಪಡಿಸಿದ ಗರಿಷ್ಠ ಟೆಂಡರ್ ಪ್ರೀಮಿಯಂಗಿಂತ ಹೆಚ್ಚುವರಿ ಪ್ರೀಮಿಯಂ ಅನ್ನು ಅನುಮೋದಿಸಿ ಕಾಮಗಾರಿಯ ಬಿಲ್ಲುಗಳಲ್ಲಿ ಪಾವತಿಸಲಾಗಿದೆ. ಈ ರೀತಿ ಗರಿಷ್ಠ ಪ್ರಮಾಣದ ಟೆಂಡರ್ ಪ್ರೀಮಿಯಂಗಿಂತ ಹೆಚ್ಚುವರಿ ಪ್ರೀಮಿಯಂ ಅನುಮೋದಿಸಬೇಕಾದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆಯನ್ನು ಪಡೆದು ನಂತರ ಹೆಚ್ಚುವರಿ ಪ್ರೀಮಿಯಂ ನೀಡಬೇಕಾಗಿರುತ್ತದೆ. ಆದರೆ, ಸರ್ಕಾರದ ಅನುಮೋದನೆ ಪಡೆಯದೇ ಹೆಚ್ಚುವರಿ ಪ್ರೀಮಿಯಂ ನಿಗಧಿಪಡಿಸಿರುವುದು ಸರ್ಕಾರದ ಆರ್ಥಿಕ ಪ್ರತ್ಯಾಯೋಜನೆ ಉಲ್ಲಂಘನೆಯಾಗಿರುತ್ತದೆ.<br><br>ಹೆಚ್ಚುವರಿ ಟೆಂಡರ್ ಪ್ರೀಮಿಯಂ ನಿಗದಿಪಡಿಸಿರುವುದಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಪಡೆದಿರುವ ಅನುಮೋದನೆಯ ಬಗ್ಗೆ ಕಡತಗಳಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಈ ಬಗ್ಗೆ ಆರ್ಥಿಕ ಪ್ರತ್ಯಾಯೋಜನೆ ಬಗ್ಗೆ ರೂಪಿಸಿಕೊಂಡಿರುವ ಪರಿನಿಯಮಗಳನ್ನು ಲೆಕ್ಕತನಿಖೆಗೆ ಒದಗಿಸುವವರೆಗೆ 2016-17 ನೇ ಸಾಲಿನಲ್ಲಿ ಪಾವತಿಸಲಾಗಿರುವ 6 ಅಂತಿಮ ಕಾಮಗಾರಿಗಳ ಹೆಚ್ಚುವರಿ ಟೆಂಡರ್ ಪ್ರೀಮಿಯಂ ಮೊತ್ತ ರೂ.1,36,03,569/- ಆಕ್ಷೇಪಣೆಯಲ್ಲಿ ಇಡಲಾಗಿದೆ. **(ವಿವರಗಳನ್ನು ಅನುಬಂಧ-11ರಲ್ಲಿ ಲಗತ್ತಿಸಿದೆ)** |
| **ಅನುಪಾಲನಾ ವರದಿ** | ವಿಶ್ವವಿದ್ಯಾಲಯವು ಸರ್ಕಾರದ ಒಂದು ಸ್ವಾಯತ್ತತ ಸಂಸ್ಥೆಯಾಗಿದ್ದು, ಆಡಳಿತದ ಹಿತದೃಷ್ಟಿಯಿಂದ ಮಾನ್ಯ ಕುಲಪತಿಯವರಿಗೆ ಇರುವಂತಹ ಅಧಿಕಾರ ವ್ಯಾಪ್ತಿಯಡಿ ನೀಡಲಾದ ಆರ್ಥಿಕ ಪ್ರತ್ಯಾಯೋಜನೆಯಡಿ ಇರುವಂತಹ ಅಧಿಕಾರದಡಿ ರಚಿಸಲಾದ ದರ ಸಂಧಾನ ಸಮಿತಿಯಿಂದ Guide lines for conducting negotiation before award of contract ನ ಸರ್ಕಾರದ ಆದೇಶ ಸಂಖ್ಯೆ: PWD: 1359:SO/FC 2001(P-2) :Bangalore dated:03-12-2002ರ ಅನ್ವಯ ಟೆಂಡರ್ ಪ್ರೀಮಿಯಂನ್ನು ನಿಗದಿಪಡಿಸಿ ಕಾಮಗಾರಿಯನ್ನು ಕೈಗೆತ್ತಿಕೊಂಡಿರುವ ಹಿನ್ನೆಲೆಯಲ್ಲಿ, ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |

| | |
|---|---|
| 40 | **ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ ಕಾಮಗಾರಿಯನ್ನು ಗುತ್ತಿಗೆದಾರರಿಗೆ ನೇರವಾಗಿ ಪೂರಕ ಕರಾರು ಒಪ್ಪಂದ ಮೂಲಕ ವಹಿಸಿರುವ ಕಾಮಗಾರಿಗಳ ಮೊತ್ತ (79,43,683.00 + 1,42,30,463.00) = ರೂ.2,21,74,146/– ಆಕ್ಷೇಪಣೆ.**<br><br>**I. Additional work of construction of 2nd stage Ground, 1st and 2nd Floor extension of library building at Shyadri College Campus, Shivamogga - ಕಾಮಗಾರಿಯ ಮೊತ್ತ ರೂ.79,43,683/– ಆಕ್ಷೇಪಣೆ**<br><br>ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿರುವ ಹಾಲಿ ಗ್ರಂಥಾಲಯ ಕಟ್ಟಡಕ್ಕೆ ಹೊಂದಿಕೊಂಡಂತೆ ನೆಲ ಅಂತಸ್ತು, ಒಂದನೆ ಅಂತಸ್ತು ಹಾಗೂ ಎರಡನೇ ಅಂತಸ್ತಿನ ಕಟ್ಟಡವನ್ನು ನಿರ್ಮಾಣ ಮಾಡಲು ಹಾಲಿ ಗ್ರಂಥಾಲಯ ಕಟ್ಟಡದ ಎರಡನೇ ಮಹಡಿಯ ನಿರ್ಮಾಣ ಕಾಮಗಾರಿಯನ್ನು ಮಾಡುತ್ತಿರುವ ಶ್ರೀ ಬಿ. ಮಂಜುನಾಥ್‌ರವರಿಗೆ ಪೂರಕ ಕರಾರು ಒಪ್ಪಂದದ ಮೂಲಕ ವಹಿಸಿಕೊಡಲಾಗಿದೆ.<br><br>ಮೇಲ್ಕಂಡ ಕಾಮಗಾರಿ ಕಡತವನ್ನು ಪರಿಶೀಲಿಸಲಾಗಿ ಈ ಕೆಳಕಂಡ ಪ್ರಮುಖ ನ್ಯೂನತೆಗಳು ಕಂಡುಬಂದಿದ್ದು, ವಿವರ ಕೆಳಕಂಡಂತಿವೆ.<br>1. ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು 2007–08ನೇ ಸಾಲಿನ ಎಸ್‌ಆರ್ ದರದಂತೆ ರೂ. 35,53,491/– ತಯಾರಿಸಿದ್ದು, ಈ ಮೊತ್ತದ ಮೇಲೆ ಶೇ.24ರಷ್ಟು ಟೆಂಡರ್ ಪ್ರೀಮಿಯಂ ಪಾವತಿಸುವ ಕರಾರಿನ ಮೇರೆಗೆ ಸಹ್ಯಾದ್ರಿ ಕಾಲೇಜಿನ ಆವರಣದಲ್ಲಿ ಗ್ರಂಥಾಲಯ ಕಟ್ಟಡದ 1ನೇ ಮಹಡಿ ನಿರ್ಮಾಣ ಕಾಮಗಾರಿ ವಹಿಸಲಾದ ಗುತ್ತಿಗೆದಾರರಾದ ಶ್ರೀ ಬಿ.ಮಂಜುನಾಥ್ ಇವರಿಗೆ ಸದರಿ ಕಾಮಗಾರಿಯನ್ನು ಪೂರಕ ಕರಾರು ಒಪ್ಪಂದ ಮೂಲಕ ವಹಿಸಲಾಗಿರುತ್ತದೆ. ಇದು ಕೆಟಿಪಿಪಿ ಕಾಯ್ದೆ 1999 ನಿಯಮ 2000ರನ್ವಯ ಟೆಂಡರ್ ಕರೆಯದೇ ನೇರವಾಗಿ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿರುವುದು ಕಾಯ್ದೆ ಉಲ್ಲಂಘಿಸಿದಂತಾಗಿದೆ.<br>2. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ದಿನಾಂಕ:6–10–2008 ರಿಂದ 5–10–2009ರವರೆಗೆ ಕಾಲಾವಧಿ ನಿಗದಿಪಡಿಸಲಾಗಿರುತ್ತದೆ. ಆದರೆ ಕಾಮಗಾರಿಯನ್ನು ದಿ:14–5–2012ರಂದು ಪೂರ್ಣಗೊಳಿಸಲಾಗಿರುತ್ತದೆ. ದಿನಾಂಕ:6–10–2009 ರಿಂದ 14–5–2012ರವರೆಗಿನ ಹೆಚ್ಚುವರಿ ಕಾಮಗಾರಿ ಅವಧಿಗೆ ಸಕ್ಷಮ ಪ್ರಾಧಿಕಾರದಿಂದ ಕಾಲ ವಿಸ್ತರಣೆ ಪಡೆದಿರುವ ಬಗ್ಗೆಯಾಗಲೀ ಅಥವಾ ಕರಾರು ಒಪ್ಪಂದದ ಪ್ರಕಾರ ಗರಿಷ್ಠ ಶೇ.7.5 ರಷ್ಟು ದಂಡ ವಿಧಿಸಿರುವ ಮಾಹಿತಿ ಲಭ್ಯವಿರುವುದಿಲ್ಲ.<br>3. ಸದರಿ ಕಾಮಗಾರಿ ಸಂಬಂಧ ಅಂತಿಮವಾಗಿ ಗುತ್ತಿಗೆದಾರರಿಗೆ ರೂ.79,43,683/–ಗಳನ್ನು ಪಾವತಿಸಲಾಗಿದ್ದು, ಇದು ಮೂಲ ಅಂದಾಜಿಗಿಂತ ಶೇ.80ರಷ್ಟು ಹೆಚ್ಚಿನ ವೆಚ್ಚವಾಗಿದ್ದು, Workslip ಮತ್ತು EIRL ತಯಾರಿಸುವ ಮೂಲಕ ಗುತ್ತಿಗೆದಾರರಿಗೆ ಪಾವತಿಸಲಾಗಿದೆ. ಕೆಪಿಡಬ್ಲ್ಯೂಡಿ ಕೊಡ್ ನಿಯಮ 191ರನ್ವಯ ಮಂಜೂರು ಮಾಡಲಾದ ಅಂದಾಜು ಪಟ್ಟಿಕ್ಕಿಂತ ಶೇ.5ರಷ್ಟು ಹೆಚ್ಚುವರಿ ಆದ ಸಂದರ್ಭದಲ್ಲಿ ಪರಿಷ್ಕೃತ ಅಂದಾಜು ಪಟ್ಟಿಯನ್ನು ತಯಾರಿಸಬೇಕಿರುತ್ತದೆ. ಹೀಗೆ ತಯಾರಿಸಲಾದ ಪರಿಷ್ಕೃತ ಅಂದಾಜು ಪಟ್ಟಿಯನ್ನು ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲ್ಯೂಡಿ/671/ಎಫ್‌ಸಿ–1/2009 ದಿನಾಂಕ:3–2–2010ರನ್ವಯ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದಿರುವ ಮಾಹಿತಿ ಕಡತದಲ್ಲಿ ಲಭ್ಯವಿರುವುದಿಲ್ಲ.<br>4. ಸದರಿ ಕಾಮಗಾರಿ ಅಂದಾಜು ಪಟ್ಟಿ ತಯಾರಿಸುವ ಮುನ್ನ ಪೂರ್ವಭಾವಿ ಸ್ಥಳ ಪರಿಶೀಲನೆ, ವಿವರವಾದ ಪರೀಕ್ಷೆಗಳು ಮತ್ತು ಸಮೀಕ್ಷೆಗಳು, ಅಡಿಪಾಯಗಳ ಆಳ ಮತ್ತು ವಿನ್ಯಾಸಗಳ ಬಗ್ಗೆ ಪರಿಶೀಲನೆ ನಡೆಸದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.<br>5. ಸದರಿ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ನಿಗದಿತ ನಮೂನೆಯಲ್ಲಿ ಪಡೆಯಲಾದ ಕಾಮಗಾರಿ ಮುಕ್ತಾಯ ಪ್ರಮಾಣಪತ್ರ ಕಡತದಲ್ಲಿ ಲಭ್ಯವಿರುವುದಿಲ್ಲ.<br>6. ಸದರಿ ಕಾಮಗಾರಿಯನ್ನು ತೆಗೆದುಕೊಳ್ಳುವ ಬಗ್ಗೆ ಕಟ್ಟಡ ಸಮಿತಿ ಸಭೆಯಲ್ಲಿ ಮತ್ತು ಸಿಂಡಿಕೇಟ್ ಸಮಿತಿ ಸಭೆಯಲ್ಲಿ ಅನುಮೋದನೆ ಪಡೆದಿರುವ ಮಾಹಿತಿ ಕಡತದಲ್ಲಿ ಲಭ್ಯವಿರುವುದಿಲ್ಲ.<br>7. ಸರ್ಕಾರಿ ಆದೇಶ ಸಂಖ್ಯೆ:PWD1/FCR/93 Date 15.12.19942009ರ ಡೆಲಿಗೇಷನ್ ಆಫ್ ಪವರ್ಸ್‌ನ ಐಟಂ 3ಎ ರೀತ್ಯಾ ಟೆಂಡರ್ ಅನುಮೋದನೆಗಾಗಿ 15% ಹೆಚ್ಚುವರಿ ನೀಡಬಹುದಾಗಿದ್ದು, ಶೇ.24 ಹೆಚ್ಚುವರಿ ಟೆಂಡರ್ ಪ್ರೀಮಿಯಂ ನೀಡಿದ್ದು ಶೇ.9 ಹೆಚ್ಚುವರಿ ನೀಡಲಾಗಿದೆ. ಸದರಿ ಹೆಚ್ಚುವರಿ ಟೆಂಡರ್ ಪ್ರೀಮಿಯಂ ಮೊತ್ತ ರೂ.5,76,557/– ಆಗಿರುತ್ತದೆ.<br><br>ಮೇಲೆ ವಿವರಿಸಿದ ನ್ಯೂನತೆಗಳಿಗೆ ಸೂಕ್ತ ವಿವರಣೆ ನೀಡುವಂತೆ ವಿಚಾರಣೆ ಸಂಖ್ಯೆ:13/2018–19, ದಿ:6–10–2018ರಲ್ಲಿ ಕೋರಲಾಗಿದ್ದರೂ ಸಹ ಯಾವುದೇ ವಿವರಣೆ ನೀಡದ ಕಾರಣ ಇಲ್ಲಿಯವರೆಗೂ ಸದರಿ ಕಾಮಗಾರಿಗೆ ಪಾವತಿಸಲಾದ ಶೇ.9ರಷ್ಟು ಹೆಚ್ಚುವರಿ ಟೆಂಡರ್ ಪ್ರೀಮಿಯಂ ಮೊತ್ತ ರೂ.5,76,557/–ಗಳನ್ನು ಸೇರಿದಂತೆ, ಒಟ್ಟು ರೂ.79,43,683.00/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. |

| | |
|---|---|
| **ಅನುಪಾಲನಾ ವರದಿ** | 1. ಸಹ್ಯಾದ್ರಿ ಕಾಲೇಜು ಆವರಣದಲ್ಲಿ ಹಾಲಿ ಇದ್ದಂತಹ ಪದವಿ ಕಾಲೇಜಿನ ಜೊತೆಯಲ್ಲಿ ನೂತನವಾಗಿ ಸ್ನಾತಕೋತ್ತರ ವಿಭಾಗಗಳನ್ನು ತೆರೆಯಲಾಗಿದ್ದು, ಇದರಿಂದ, ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದ್ದು, ಪ್ರಸ್ತುತ ಇದ್ದಂತಹ ಗ್ರಂಥಾಲಯವು ಎಲ್ಲಾ ವಿದ್ಯಾರ್ಥಿಗಳಿಗೆ ಬೇಕಾದ ಪಠ್ಯಪುಸ್ತಕಗಳನ್ನು ಸಂಗ್ರಹಿಸಲು ಸ್ಥಳವಾಕಾಶ ಕೊರತೆ ಇದ್ದ ಕಾರಣ ಮತ್ತು ಸಹ್ಯಾದ್ರಿ ವಿಜ್ಞಾನ ಕಾಲೇಜು ಹಾಗೂ ಸಹ್ಯಾದ್ರಿ ಕಲಾ ಕಾಲೇಜುಗಳಿಗೆ ಪ್ರತ್ಯೇಕವಾದ ಗ್ರಂಥಾಲಯವನ್ನು ಒದಗಿಸಬೇಕಾದ ಹಿನ್ನೆಲೆಯಲ್ಲಿ, ಕಾಲಾವಕಾಶದ ಕೊರತೆಯಿಂದ ಹಾಲಿ ನಿರ್ಮಾಣಗೊಳ್ಳುತ್ತಿದ್ದ ಗ್ರಂಥಾಲಯದ ಒಂದನೇ ಮಹಡಿ ಕಾಮಗಾರಿಯನ್ನು ನಿರ್ವಹಿಸುತ್ತಿದ್ದ ಗುತ್ತಿಗೆದಾರರಿಂದಲೇ ಕಟ್ಟಡವನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನೆಲ, ಮೊದಲನೇ ಮತ್ತು ಎರಡನೇ ಮಹಡಿ ವಿಸ್ತರಣೆ ಕಾಮಗಾರಿಯನ್ನು ಪೂರಕ ಕರಾರು ಒಪ್ಪಂದದ ಮೂಲಕ ವಹಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೈಗೆತ್ತಿಕೊಂಡು ನಿರ್ವಹಿಸಿರುವುದರಿಂದ, ಆಕ್ಷೇಪಣೆಯನ್ನು ಕೈಬಿಡಲು ಕೋರಲಾಗಿದೆ.<br>2. ಸಕ್ಷಮ ಪ್ರಾಧಿಕಾರದಿಂದ ಕಾಲಾವಧಿಯ ವಿಸ್ತರಣೆಯನ್ನು ಅನುಮೋದನೆ ಪಡೆಯಲಾಗಿದೆ.<br>3. ಸ್ನಾತಕೋತ್ತರವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆಕಾಲೇಜುವಾರುಪ್ರತ್ಯೇಕಗ್ರಂಥಾಲಯ ನಿರ್ಮಿಸುವಾಗ ಅಗತ್ಯತೆಗೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸಿದ್ದು, ಕಾಲ ಕಾಲಕ್ಕೆ Workslip ಮತ್ತು EIRL ಅನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆಯಲಾಗಿರುತ್ತದೆ.<br>4. ಸದರಿ ಕಾಮಗಾರಿಗೆ ಸಂಬಂಧಿಸಿದಂತೆ ಮೂಲ ನಕ್ಷೆ ಹಾಗೂ ಅಂದಾಜು ಪಟ್ಟಿಯನ್ನು ಸಿದ್ಧಪಡಿಸುವ ಮುನ್ನ ಸದರಿ ಕಾಮಗಾರಿಯ ಶಿಲಾ ವಿನ್ಯಾಸಕರಿಂದ ಪೂರಕ ಸ್ಥಳ ಸಮೀಕ್ಷೆ, ನಕ್ಷೆ, ಸ್ಥಳದ ಲಭ್ಯತೆಗೆ ಅನುಗುಣವಾಗಿ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತದೆ ಹಾಗೂ ಸದರಿ ಕಾಮಗಾರಿಯು ಪೂರ್ಣಗೊಂಡಿರುತ್ತದೆ.<br>5. ಪೂರ್ಣಗೊಂಡ ವರದಿಯ ನಕಲು ಪ್ರತಿ ಲಗತ್ತಿಸಿದೆ.<br>6. 50.00 ಲಕ್ಷಗಳ ಮಿತಿಯಲ್ಲಿ ಅಂದಾಜು ಪಟ್ಟಿ ಇರುವುದರಿಂದ, ಮಾನ್ಯ ಕುಲಪತಿಯವರ ಅನುಮೋದನೆ ಪಡೆಯಲಾಗಿದೆ. (ಪ್ರತಿ ಲಗತ್ತಿಸಿದೆ). |
| | **II. Construction of Second Floor for Master of Tourism and Administration Block at Sahyadri College Campus, Shimoga - ಕಾಮಗಾರಿಯ ಬಿಲ್ಲಿನ ಮೊತ್ತ ರೂ. 1,42,30,463/-**<br>**ಆಕ್ಷೇಪಣೆ**<br>ಶಿವಮೊಗ್ಗ ಸಹ್ಯಾದ್ರಿ ಕಾಲೇಜಿನ ಆವರಣದ ಎಂ.ಟಿ.ಎ ಕಟ್ಟಡದ (ಎರಡನೇ ಮಹಡಿ) ನಿರ್ಮಾಣ ಕಾಮಗಾರಿಯನ್ನು ಇದೇ ಕಟ್ಟಡದ ಒಂದನೇ ಮಹಡಿ ನಿರ್ಮಾಣ ಕಾಮಗಾರಿ ಕೈಗೊಳ್ಳುತ್ತಿರುವ ಮೆ:ಶಿವಾನಿ ಎಂಟರ್‌ಪ್ರೈಸಸ್‌ರವರಿಗೆ ಪೂರಕ ಕರಾರು ಒಪ್ಪಂದದ ಮೂಲಕ ವಹಿಸಿಕೊಡಲಾಗಿದೆ.<br>ಮೇಲೆ ವಿವರಿಸಿದ ಕಾಮಗಾರಿ ಕಡತ ಪರಿಶೀಲನೆ ವೇಳೆ ಕೆಲವು ನ್ಯೂನತೆಗಳು ಕಂಡುಬಂದಿದ್ದು, ವಿವರ ಕೆಳಕಂಡಂತಿರುತ್ತಿವೆ.<br><br>1. ಸದರಿ ಕಾಮಗಾರಿಯ ಅಂದಾಜು ಪಟ್ಟಿಯನ್ನು 2009-10ನೇ ಸಾಲಿನ ಎಸ್‌ಆರ್ ದರದಂತೆ ರೂ.183 ಲಕ್ಷಗಳಿಗೆ ಶೇ.22ರಷ್ಟು ಟೆಂಡರ್ ಪ್ರೀಮಿಯಂ ಪಾವತಿಸುವ ಕರಾರಿನ ಮೇರೆಗೆ ಸಹ್ಯಾದ್ರಿ ಕಾಲೇಜಿನ ಆವರಣದ ಎಂ.ಟಿ.ಎ. ಕಟ್ಟಡದ 1ನೇ ಮಹಡಿಯ ಕಾಮಗಾರಿ ನಿರ್ಮಾಣ ನಿರ್ವಹಿಸುತ್ತಿರುವ M/s. Shivani Constructions ರವರಿಗೆ ಪೂರಕ ಕರಾರು ಒಪ್ಪಂದದ ಮೂಲಕ ವಹಿಸಲಾಗಿರುತ್ತದೆ. ಇದು ಕೆಟಿಪಿಪಿ ಕಾಯ್ದೆ 1999 ನಿಯಮ 2000ರನ್ವಯ ಟೆಂಡರ್ ಕರೆಯದೇ ನೇರವಾಗಿ ಗುತ್ತಿಗೆದಾರರಿಗೆ ಕಾಮಗಾರಿಯನ್ನು ವಹಿಸಿದ್ದು, ಕೆಟಿಪಿಪಿ ಕಾಯ್ದೆಯ ಸ್ಪಷ್ಟ ಉಲ್ಲಂಘನೆ ಮಾಡಲಾಗಿದೆ.<br>2. ಸದರಿ ಕಾಮಗಾರಿಯ ವಿವರವಾದ ಅಂದಾಜು ಪಟ್ಟಿಯನ್ನು 2009-10ನೇ ಸಾಲಿನ ದರಗಳನ್ವಯ ರೂ.216.00 ಲಕ್ಷಗಳಿಗೆ ತಯಾರಿಸಿ ಅಧೀಕ್ಷಕ ಅಭಿಯಂತರರು, ಪಿಡಬ್ಲ್ಯೂಡಿ, ಶಿವಮೊಗ್ಗ ವೃತ್ತ ಇವರಿಗೆ ತಾಂತ್ರಿಕ ಪರಿಶೀಲನೆಗಾಗಿ ದಿನಾಂಕ:04-03-2011ರಂದು ಸಲ್ಲಿಸಿದ ಸಂದರ್ಭದಲ್ಲಿ ಪ್ರಸ್ತುತ 2009-10ನೇ ಸಾಲಿನ ದರಗಳ ಕಾಲಾವಧಿ ಮುಗಿದಿದ್ದು, ತಾಂತ್ರಿಕ ಪರಿಶೀಲನೆ ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಅಲ್ಲದೇ 2010-11ನೇ ಸಾಲಿನ ದರಗಳನ್ವಯ ವಿವರವಾದ ಅಂದಾಜು ಪಟ್ಟಿಯನ್ನು ಮರು ಸಲ್ಲಿಸಲು ದಿನಾಂಕ:25-03-2011ರ ಪತ್ರದಲ್ಲಿ ಸೂಚಿಸಿರುತ್ತಾರೆ. ಆದರೂ ಸಹ ಪರಿಷ್ಕೃತ ಅಂದಾಜು ಪಟ್ಟಿಯನ್ನು 2010-11ನೇ ಸಾಲಿನ ಎಸ್.ಆರ್. ದರದನ್ವಯ ತಯಾರಿಸಿ, ಅಧೀಕ್ಷಕ ಅಭಿಯಂತರರಿಂದ ಅನುಮೋದನೆ ಪಡೆಯದೇ 2009-10ನೇ ಸಾಲಿನ ಎಸ್.ಆರ್. ದರದನ್ವಯ ಕಾಮಗಾರಿ ಅಂದಾಜು ಪಟ್ಟಿಯನ್ನು ಅನುಮೋದಿಸಿದೆ.<br>3. ಕಡತದ ಟಿಪ್ಪಣಿಯಲ್ಲಿ ಸದರಿ ಕಟ್ಟಡದ ನೆಲ ಮಹಡಿ ಹಾಗೂ ಮೊದಲನೇ ಮಹಡಿಯ ಛಾವಣಿಯ ಸಹಿತ ತೊಲೆಗಳು ಬಾಗಿದ್ದು, ತಪ್ಪು ಸ್ಟ್ರಕ್ಚರಲ್ ವಿನ್ಯಾಸದಿಂದ ಸದರಿ ಲೋಪವಾಗಿರುವುದನ್ನು ಪ್ರಸ್ತಾಪಿಸಲಾಗಿದೆ. ಈ ಕಟ್ಟಡ ವಿನ್ಯಾಸವನ್ನು ತಾಂತ್ರಿಕ ಪರಿಣಿತಿ ಹೊಂದಿರದವರಿಂದ ಮಾಡಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅಲ್ಲದೇ ಸಂಬಂಧಪಟ್ಟ ಇಂಜಿನಿಯರ್‌ಗಳು ಸಹ ಯಾವುದೇ ತಾಂತ್ರಿಕ ಪರಿಶೀಲನೆ ನಡೆಸದಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. |

| | |
|---|---|
| | 4. ದಿನಾಂಕ:01–01–2014 ರಿಂದ ದಿನಾಂಕ:31–05–2014ರವರೆಗೆ ಪ್ರತಿ ದಿನಕ್ಕೆ ರೂ.20.00 ರಂತೆ ಹಾಗೂ ದಿನಾಂಕ:01–06–2014 ರಿಂದ 30–10–2014ರವರೆಗೆ ರೂ.100.00ರಂತೆ ದಂಡ ಸಹಿತ ಕಾಲಾವಧಿ ವಿಸ್ತರಣೆ ನೀಡಲಾಗಿದೆ. ಸದರಿ ಮೊತ್ತ ವಸೂಲಾತಿ ಮಾಡಿದ ವಿವರ ಕಡತದಲ್ಲಿ ಲಭ್ಯವಿರುವುದಿಲ್ಲ. ಅಲ್ಲದೆ ದಿನಾಂಕ: 01–11–2014 ರಿಂದ 15–04–2016ರವರೆಗೆ (ಅಂತಿಮ ಅಳತೆ ದಾಖಲಾತಿ ದಿನಾಂಕ) ಕಾಲ ವಿಸ್ತರಣೆ ಪಡೆದಿರುವ ಮಾಹಿತಿ ಕಡತದಲ್ಲಿ ಲಭ್ಯವಿರುವುದಿಲ್ಲ.<br>5. ಸದರಿ ಕಟ್ಟಡದ ಮೊದಲನೇ ಮಹಡಿಯ ಕಾಮಗಾರಿಗೆ ಮುಖ್ಯ ಅಭಿಯಂತರರು, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು ಇವರಿಗೆ ರೂ.350.00 ಲಕ್ಷ ಮೊತ್ತಕ್ಕೆ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಆದರೆ ಸದರಿ ಕಟ್ಟಡದ 2ನೇ ಮಹಡಿಯ ಕಾಮಗಾರಿಗೆ ಮುಖ್ಯ ಅಭಿಯಂತರರಿಂದ ತಾಂತ್ರಿಕ ಮಂಜೂರಾತಿ ಪಡೆದಿರುವುದಿಲ್ಲ. ವಿಶ್ವವಿದ್ಯಾಲಯದ ಕಾರ್ಯಪಾಲಕ ಅಭಿಯಂತರರಿಂದ ಪಡೆಯಲಾಗಿದ್ದು, ಇದು ಅಧಿಕಾರ ವ್ಯಾಪ್ತಿ ಮೀರಿ ಮಂಜೂರಾತಿ ನೀಡಿದಂತಾಗಿರುತ್ತದೆ.<br>6. ಸರ್ಕಾರದ ಆದೇಶ ಸಂಖ್ಯೆ:PWD/FC/1/2009 Date 22.6.2009 & 30.07.2009 ರ ಡೆಲಿಗೇಷನ್ ಆಫ್ ಪವರ್ಸ್‌ನ ಐಟಂ 3ಎ ರಲ್ಲಿ ಟೆಂಡರ್ ಅನುಮೋದನೆಗಾಗಿ ಗರಿಷ್ಟ ಶೇ.5 ಮಾತ್ರ ನೀಡಬಹುದಾಗಿದ್ದು, 22% ಹೆಚ್ಚುವರಿ ಟೆಂಡರ್ ಪ್ರೀಮಿಯಂ ನೀಡಿದ್ದು, 17% ಹೆಚ್ಚುವರಿ ಟೆಂಡರ್ ಪ್ರೀಮಿಯಂ ನೀಡಲಾಗಿದೆ. ಸದರಿ ಹೆಚ್ಚುವರಿ ಟೆಂಡರ್ ಪ್ರೀಮಿಯಂನ ಮೊತ್ತ ರೂ.22,74,594/– ಆಗಿರುತ್ತದೆ.<br><br>ಮೇಲಿನ ನ್ಯೂನತೆಗಳಿಗೆ ಸೂಕ್ತ ವಿವರಣೆ ನೀಡುವಂತೆ ವಿಚಾರಣೆ ಸಂಖ್ಯೆ:8/2018–19 ದಿ:3–10–2018ರಲ್ಲಿ ಕೋರಲಾಗಿತ್ತು. ವಿಚಾರಣೆ ಪತ್ರಕ್ಕೆ ನೀಡಲಾದ ಉತ್ತರಗಳು ಅಪೂರ್ಣವಾಗಿರುತ್ತದೆ. ಈ ಕಾಮಗಾರಿಯ ಟೆಂಡರ್ ಪ್ರೀಮಿಯಂ ಹೆಚ್ಚುವರಿ ಮೊತ್ತ ರೂ.22,74,594.00 ಸೇರಿದಂತೆ, ಈವರೆವಿಗೆ ಒಟ್ಟು ರೂ.1,63,23,546.00 ಪಾವತಿಯಾಗಿರುತ್ತದೆ. ಈ ಮೊತ್ತದಲ್ಲಿ ಕಂಡಿಕೆ 45ರ (2015–16ನೇ ಸಾಲಿನ ಆಕ್ಷೇಪಣೆಯ ಮೊತ್ತ) ರೂ.20,93,083.00 ಹೊರತುಪಡಿಸಿ ಉಳಿದಂತೆ, ರೂ.1,42,30,463.00 ಆಕ್ಷೇಪಣೆಯಲ್ಲಿಡಲಾಗಿದೆ. |
| **ಅನುಪಾಲನಾ ವರದಿ** | 1. ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುವಂತಹ ಪದವಿ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗುವಂತೆ ಸ್ನಾತಕೋತ್ತರ ಕೇಂದ್ರಗಳನ್ನು ಆಯಾ ಕಾಲೇಜುಗಳಲ್ಲಿ ಪ್ರಾರಂಭಿಸಲಾಗಿದ್ದು, ಅಗತ್ಯತೆಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಕೊಠಡಿಗಳನ್ನು ಪೂರೈಸಬೇಕಾದ ಹಿನ್ನೆಲೆಯಲ್ಲಿ, ದಿ: 09–12–2010ರ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಪೂರಕ ಕರಾರು ಒಪ್ಪಂದದ ಮೂಲಕ ಮೊದಲನೇ ಮಹಡಿ ಕಾಮಗಾರಿಯನ್ನು ಗುತ್ತಿಗೆದಾರರಿಂದ, ಎರಡನೇ ಮಹಡಿ ವಿಸ್ತರಣೆ ಕಾಮಗಾರಿಯನ್ನು ಟೆಂಡರ್ ದರಕ್ಕೆ ಶೇ.2 ರಷ್ಟು ದರವನ್ನು ಕಡಿಮೆ ಮಾಡಿ ದರ ಸಂಧಾನದ ಮೂಲಕ ಎರಡನೇ ಮಹಡಿ ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಉಪಯೋಗಕ್ಕೆ ಬಿಟ್ಟು ಕೊಡಲಾಗಿದೆ.<br>2. ಸದರಿ ಕಾಮಗಾರಿಯು ಒಂದನೇ ಮಹಡಿಯಿಂದ ಎರಡನೇ ಮಹಡಿ ವಿಸ್ತರಣೆಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಮೇರೆಗೆ ಪೂರಕ ಕರಾರು ಒಪ್ಪಂದ ಮಾಡಿದ್ದರಿಂದ, ಕಾರ್ಯಪಾಲಕ ಇಂಜಿನಿಯರ್‌ರವರು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.<br>3. ಕಟ್ಟಡದ ವಿನ್ಯಾಸವನ್ನು ಬಿ.ಸಿ.ಸಿ. ಕನ್ಸಲ್ಟೆನ್ಸಿ, ಬೆಂಗಳೂರು – ಇವರಿಂದ ನಿರ್ವಹಿಸಲಾಗಿದ್ದು, ಇವರು ನೀಡಿದ ವಿನ್ಯಾಸದಲ್ಲಿ ಲೋಪ ಕಂಡು ಬಂದ ಹಿನ್ನೆಲೆಯಲ್ಲಿ, ಸದರಿಯವರಿಂದಲೇ ಆಗಿರುವ ಲೋಪವನ್ನು ಸರಿಪಡಿಸಿ, ಸದರಿ ಕಾರ್ಯಕ್ಕೆ ತಗಲಿದ ಹೆಚ್ಚುವರಿ ವೆಚ್ಚವನ್ನು ಸದರಿ ವಿನ್ಯಾಸಗಾರರಿಗೆ ಪಾವತಿಸಬೇಕಾದ ಸಮಾಲೋಚಕರ ಶುಲ್ಕದಲ್ಲಿ ಮರು ಕಡಿತಗೊಳಿಸಲು ಕ್ರಮ ವಹಿಸಲಾಗುವುದು. (ಸಂಬಂಧಿಸಿದಂತೆ ದಾಖಲೆಗಳ ಪ್ರತಿಗಳನ್ನು ಲಗತ್ತಿಸಿದೆ).<br>4. ಕಾಲಾವಧಿ ವಿಸ್ತರಣೆಗೆ ಸಂಬಂಧಿಸಿದಂತೆ ಕಟ್ಟಡ ಸಮಿತಿ ಸಭೆಯ ನಡಾವಳಿಯ ಪ್ರತಿಗಳನ್ನು ಲಗತ್ತಿಸಿದೆ. ದಂಡವನ್ನು ವಸೂಲಿ ಮಾಡಿದ ದಾಖಲೆಗಳನ್ನು ಲಗತ್ತಿಸಿದೆ.<br>5. ಮೊದಲನೇ ಮಹಡಿಯನ್ನು ಟೆಂಡರ್ ಮೂಲಕ ಗುತ್ತಿಗೆ ನಿಗದಿಪಡಿಸಿದ್ದು, ದಿನಾಂಕ:04–12–2010ರಲ್ಲಿ ಎರಡನೇ ಮಹಡಿ ವಿಸ್ತರಣೆ ಕಾಮಗಾರಿಯನ್ನು ಸದರಿ ಗುತ್ತಿಗೆದಾರರಿಂದ ಪೂರಕ ಕರಾರಿನನ್ವಯ ನಿರ್ವಹಿಸಲು ಅನುಮೋದಿಸಿರುವುದರಿಂದ, ಕಾರ್ಯಪಾಲಕ ಇಂಜಿನಿಯರ್‌ರವರು ತಾಂತ್ರಿಕ ಮಂಜೂರಾತಿ ನೀಡಿರುವುದರಿಂದ, ಸದರಿ ಆಕ್ಷೇಪಣೆಯನ್ನು ಕೈಬಿಡಲು ಕೋರಿದೆ. |